
ಹಂತ 1
ನಂಬಿಕೆಯ ವೀರರು
ಚೆಂಡೇ ಷ್ಮೂಲ್
WOW!
ಶಿಕ್ಷಕರ ಪುಸ್ತಕ
ಎಲ್ಲಾ ವಯಸ್ಸಿನವರಿಗೆ

# ನಂಬಿಕೆಯ ವೀರರು

**"ಮಕ್ಕಳೇ ಪ್ರಾಮುಖ್ಯರು" ವತಿಯಿಂದ ಸಂಡೇ ಸ್ಕೂಲ್ ಪಠ್ಯ**

**ಶಿಕ್ಷಕರ ಪುಸ್ತಕ**

**ಎಲ್ಲಾ ಕಾಲದವರಿಗೆ ಅನ್ವಯಿಸುತ್ತದೆ**

**ಹಂತ ೧: ೧-೧೩ ಪಾಠಗಳು**

**Web:**

[www.ChildrenAreImportant.com/heroes/](http://www.ChildrenAreImportant.com/heroes/)


## "ಮಕ್ಕಳೇ ಪ್ರಾಮುಖ್ಯರು" ಇಡೀ ತಂಡಕ್ಕೆ ಧನ್ಯವಾದಗಳು!

ಪ್ರಮುಖ ಸಂಪಾದಕರು: ಕ್ರಿಸ್ಟಿನಾ ಕ್ರಾಸ್

ಕಾರ್ಯಕಾರಿ ತಂಡ: ಅಬ್ರಿಲ್ ಪಲಾಶೊಯೊಸ್  ಕಮಾಕೊ, ಡ್ವೈಟ್ ಕ್ರಾಸ್, ಜೆನಿಫರ್ ಸಾನ್ ಜೆಸ್ ನಿಟೋ, ಜೂಲಿಯೋ ಸಾನ್ ಜೆಸ್ ನೀಟೋ, ಮೈಕ್ ಕಾಂಗಾಸ್, ಮಾಂಸರಾಟ್ ಡರನ್ ಡಯಸ್, ಸೂಕಿ ಕಂಗಾಸ್, ವೆರೋನಿಕಾ ಟೋಜ್ ಮತ್ತು ವಿಕಿ ಕಂಗಾಸ್.

ಈ ಕಾರ್ಯಕ್ರಮಕ್ಕೆ ಅದ್ಭುತ ಸಂಗೀತ ನೀಡಿರುವ ರೂಬೇನ್ ಡಾರಿಯೋರವರಿಗೆ ಧನ್ಯವಾದಗಳು.

ಭಾಷಾಂತರ ತಂಡ:

ಅಲಿ ಅತುವಾ, ಅಲೈನ್ ಸೇವಿಯರ್, ಅನುಪಮ ವಾಂಖೇಡೆ, ಅರೋಮಾ ಪಬ್ಲಿಕೇಷನ್ಸ್, ಬ್ಲೆಸಿ ಜೇಕಬ್, ಕಾರ್ಲ ಮಯುಮಿ, ಕ್ರಿಸ್ಬೆಸ್ನಹಾನ್, ಡೇವಿಡ್ ರಾಜು, ಎಫ್ರಾಯಿಮ್ ನಿಜಗುಣ ಮಿರೋಬಿ, ಫಿನ್ನಿ ಜೇಕಬ್, ಗೀನವ್,  ಜೇಕಬ್ ಕುರುವಿಲ್ಲಾ, ಕ್ರಾಜ್, ಮಾರ್ಕೋಸ್ ರೋಹಾ, ಮ್ಯಾಥೀವ್ ದಾಸ್, ನಾಸಿಮ್ ಬೌಗ್ವಿಯಾ, ಪೌಲ್ ವಾಂಗಿ, ಪೌಲ್ ಸ್ಟೀಫನ್, ರುಬಿನ ರಾಯ್, ಸಬ್ರಿನಾ ಬೆನ್ನಿ ಜಾನ್ ಮತ್ತು ಸಬ್ ಟೈಟಲ್ ನಾನು.

# ಪರಿಚಯ

ನಂಬಿಕೆಯ ವೀರರು ಸಂಡೇ ಸ್ಕೂಲ್ ಗೆ ಸ್ವಾಗತ! ಈ ಅಧ್ಯಯನಗಳ ಸರಣಿಯಲ್ಲಿ, ಇಬ್ರಿಯ ೧೧ನೇ ಅಧ್ಯಾಯದಲ್ಲಿ ಬರೆಯಲ್ಪಟ್ಟಿರುವ ನಂಬಿಕೆಯ ವೀರರ ಬಗ್ಗೆ ತಿಳಿದುಕೊಳ್ಳೋಣ. ನಮ್ಮ ಶಾರೀರಿಕ ಜೀವಿತಕ್ಕಿಂತ ಆತ್ಮೀಕ ಜೀವಿತ ಪ್ರಾಮುಖ್ಯವಾಗಿರುವದರಿಂದ, ನಾವು ನಂಬಿಕೆಯ ಜೀವಿತವನ್ನು ಪಡೆಯುವದು ಹೇಗೆ ಎಂಬದನ್ನು ಕಲಿತುಕೊಳ್ಳೋಣ. ಜೀವನದಲ್ಲಿ ತೆಗೆದುಕೊಳ್ಳುವ ಸಾಧಾರಣ ತೀರ್ಮಾನಗಳಿಗಿಂತ ಆತ್ಮೀಕ ತೀರ್ಮಾನಗಳು ಯಾಕೆ ಪ್ರಾಮುಖ್ಯವಾಗಿವೆ ಎಂಬದನ್ನು ನಾವು ವಿಶ್ಲೇಷಿಸಿಕೊಳ್ಳೋಣ. ದೇವರನ್ನು ನಂಬಿದ, ದೇವರೊಂದಿಗೆ ಮಾತನಾಡಿದ ಮತ್ತು ದೇವರೊಂದಿಗೆ ಜೀವಿಸಿದ ಸ್ತ್ರೀ ಪುರುಷರ ಜೀವಿತಗಳನ್ನು ಪರೀಕ್ಷಿಸುವ ಸಮಯದಲ್ಲಿ ಈ ಪ್ರಶ್ನೆಗಳಿಗೆ ಪ್ರತಿಕ್ರಿಯಿಸೋಣ. ಅವರೆಲ್ಲರೂ ನಮಗೆ ಮಾದರಿಗಳಾಗಿದ್ದಾರೆ. ಕೆಲವೊಮ್ಮೆ ನಾವು ಈ ಜನರು ಮಾಡಿರುವ ಒಳ್ಳೆಯ ಕಾರ್ಯಗಳನ್ನು ನೋಡುತ್ತೇವೆ ಮತ್ತು ಇನ್ನೂ ಕೆಲವೊಮ್ಮೆ ಅವರ ತಪ್ಪುಗಳಿಂದ ಕಲಿತುಕೊಳ್ಳುತ್ತೇವೆ.

ನಾವು ಈ ತರಗತಿಗಳಲ್ಲಿ ಚಿಕ್ಕ ಮಕ್ಕಳು ಮತ್ತು ಯೌವನಸ್ಥರಿಗೆ ಕಲಿಸುವದರಿಂದ, ಹಳೆಯ ಒಡಂಬಡಿಕೆಯ ಕೆಲವು ತಮಾಷೆಯ ಅಂಶಗಳೊಂದಿಗೆ ಕಲಿತುಕೊಳ್ಳುವ ಅವಕಾಶ ದೊರೆಯುತ್ತದೆ. ಇವೆಲ್ಲವುಗಳಿಗಿಂತ ಹೆಚ್ಚಾಗಿ, ಪ್ರಾಯೋಗಿಕವಾಗಿರುವ ಈ ತತ್ವಗಳನ್ನು ನಮ್ಮ ಅನುದಿನದ ಜೀವಿತಗಳಿಗೆ ಅಳವಡಿಸಿಕೊಳ್ಳಲು ಸಹಾಯವಾಗುವ ಕ್ರಿಯಾತ್ಮಕ ಆಲೋಚನೆಗಳನ್ನು ನಾವು ತಿಳಿದುಕೊಳ್ಳಬಹುದು. ಈ ಸಾಮಗ್ರಿಯನ್ನು ಸಿದ್ಧಪಡಿಸುವಾಗ ನಾವು ನಿಜವಾಗಿಯೂ ದೇವರು ಹಾಗೂ ಕ್ರೈಸ್ತೀಯ ಜೀವಿತದ ಬಗ್ಗೆ ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಲು ಸಾಧ್ಯವಾಯಿತು.

ನಾವು ದೇವರಲ್ಲಿ ನಂಬಿಕೆಯಿಡುವದರ ಬಗ್ಗೆ ಮಾತನಾಡುತ್ತಿರುವದರಿಂದ, ನಂಬಿಕೆಯನ್ನು ವ್ಯಾಖ್ಯಾನಿಸುವ ಮೂಲಕ ಪ್ರಾರಂಭಿಸೋಣ. ನಾವು ಬಳಸುವ ಪ್ರಮುಖ ವಾಕ್ಯ ಇಬ್ರಿಯ ೧೧:೧ "ನಂಬಿಕೆಯೋ ನಾವು ನಿರೀಕ್ಷಿಸುವವುಗಳ ವಿಷಯವಾಗಿ ಭರವಸದಿಂದಿರುವದೂ ಕಣ್ಣಿಗೆ ಕಾಣದವುಗಳನ್ನು ನಿಜವೆಂದು ತಿಳುಕೊಳ್ಳುವದೂ ಆಗಿದೆ." ದೇವರನ್ನು ನಂಬುವದೆಂದರೆ ಆತನು ನಮಗೆ ಕಾಣಿಸದಿದ್ದರೂ ಆತನಿದ್ದಾನೆ ಎಂಬ ದೃಢತೆ ನಮ್ಮಲ್ಲಿರುವದಾಗಿದೆ. ಅಂಥ ನಂಬಿಕೆಯು ಸಹಜವಾಗಿ ಸತ್ಯವೇದದ ಮೂಲಕ ದೇವರಿಂದ ದೊರೆಯುತ್ತದೆ. ಮತ್ತು ಆ  ನಂಬಿಕೆಯ ಮೂಲಕ, ನಾವು ಆತನನ್ನು ಮತ್ತು ಆತನ ವಾಗ್ದಾನಗಳನ್ನು ನಂಬಬಹುದು, ಹಾಗೂ ಆತನು ಬಯಸುವಂತೆ-ಅಂದರೆ ಆತನ ಚಿತ್ತದಂತೆ ಕಾರ್ಯಗಳನ್ನು ಮಾಡಬಹುದು.

ಸತ್ಯವೇದವು ಎಲ್ಲಾ ಕ್ರೈಸ್ತರಿಗೆ ಅತ್ಯಂತ ಪ್ರಾಮುಖ್ಯವಾದ ಪುಸ್ತಕವಾಗಿದೆ, ಆದರೆ ಇದು ಅತ್ಯಂತ ದೊಡ್ಡ ಪುಸ್ತಕವಾಗಿದೆ. ನಮ್ಮಲಿ ಅನೇಕರು ಇನ್ನೂ ಪೂರ್ತಿಯಾಗಿ ಸತ್ಯವೇದವನ್ನು ಓದಿ ಮುಗಿಸಿಲ್ಲ. ಇದು ಬಹಳ ದೊಡ್ಡ ಪುಸ್ತಕವಾದ್ದರಿಂದ ಅಧ್ಯಾಪಕರಾದ ನಾವೂ ಕೆಲವೊಮ್ಮೆ ಮರೆತುಹೋಗುತ್ತೇವೆ, ನಡೆದಿರುವ ಘಟನೆಗಳ ವಿಷಯದಲ್ಲಿ ಗಲಿಬಿಲಿಗಳಾಗುತ್ತವೆ, ಎಲ್ಲಿ ಮತ್ತು ಯಾವಾಗ ಅವುಗಳು ಸಂಭವಿಸಿದವು ಎಂಬದು ಗೊತ್ತಾಗುವದಿಲ್ಲ. ಇನ್ನೂ ಮಕ್ಕಳ ಪರಿಸ್ಥಿತಿ ಹೇಗಿರಬಹುದು ಊಹಿಸಿಕೊಳ್ಳಿರಿ! ಈ ವಿಷಯದಲ್ಲಿ ನಮಗೆ ಸಹಾಯ ಮಾಡುವ ಸಲುವಾಗಿ,  ನಾವು ಹಳೆಯ ಒಡಂಬಡಿಕೆ ಮತ್ತು ಇಬ್ರಿಯ ೧೧ರಲ್ಲಿರುವ ಕಥೆಗಳನ್ನು ವಿಶ್ಲೇಷಣೆ ಮಾಡುವವರಾಗಿದ್ದೇವೆ. ನಾವು ಇದನ್ನು ಕಲಿತುಕೊಳ್ಳೋಣ ನಂತರ ಇವುಗಳನ್ನು ನಮ್ಮ ಆತ್ಮೀಕ ಜೀವಿತದ ಭಾಗವನ್ನಾಗಿ ಮಾಡಿಕೊಳ್ಳುವದನ್ನು ಕಲಿತುಕೊಳ್ಳೋಣ. ಮಕ್ಕಳಿಗೆ ದಿನಾಂಕಗಳು ಮತ್ತು ಘಟನೆಗಳ ವಿಷಯದಲ್ಲಿ ಗೊಂದಲಗಳಾಗದಿರಲು

ಹಳೆಯ ಒಡಂಬಡಿಕೆಯ ಪುಸ್ತಕಗಳ ಹೆಸರುಗಳು ಮತ್ತು ಚಾರಿತ್ರಿಕ ಕ್ರಮದಲ್ಲಿರುವ ಕೆಲವು ಪ್ರಮುಖ ಘಟನೆಗಳನ್ನು ಕಲಿತುಕೊಳ್ಳುವರು.

ನಮ್ಮ ಅನುದಿನದ ಜೀವಿತಕ್ಕೆ ನೇರವಾಗಿ ಅನ್ವಯಿಸುವಂಥ ಅದ್ಭುತವಾದ ಕಥೆಗಳು ಮತ್ತು ಸೂಚನೆಗಳು ಹಳೆಯ ಒಡಂಬಡಿಕೆಯಲ್ಲಿರುವದರಿಂದ ಅದನ್ನು ಅಧ್ಯಯನ ಮಾಡುವದು ಅತ್ಯಂತ ಪ್ರಾಮುಖ್ಯವಾಗಿದೆ. ನಾವು ದೇವರ ಮತ್ತು ಇತರರ ಸೇವೆ ಮಾಡುವ ಮೂಲಕ ನಮ್ಮ ಅನುದಿನದ ಜೀವಿತಗಳಲ್ಲಿ ವೀರರಾಗುವ ಸಲುವಾಗಿ ದೇವರು ನಮಗೆ ತನ್ನ ವಾಕ್ಯವನ್ನು ಕೊಟ್ಟಿದ್ದಾನೆ.

ಒಂದುವೇಳೆ ನೀವು ಇದನ್ನು ಅಂಗೀಕರಿಸಿಕೊಳ್ಳುವದಾದರೆ ನಿಮ್ಮ ಪ್ರಮುಖ ಗುರಿ, ಪ್ರತಿಯೊಂದು ಪಾಠವನ್ನು ನಿಮ್ಮ ಅನುದಿನದ ಜೀವಿತದಲ್ಲಿ ಮಕ್ಕಳಿಗೆ ಹಾಗೂ ಯೌವನಸ್ಥರಿಗೆ, ಮನೆಯಲ್ಲಿ, ತರಗತಿಯಲ್ಲಿ ಮತ್ತು ಸಭೆಯಲ್ಲಿ ಮಾದರಿಯಾಗಿ ಅಳವಡಿಸಿಕೊಳ್ಳುವದಾಗಿದೆ. ನಿಮ್ಮ ವಿದ್ಯಾರ್ಥಿಗಳು ವಚನಗಳು ಸತ್ಯವೇದದಿಂದ ಕಂಠಪಾಠ ಮಾಡುತ್ತಾರಾದ್ದರಿಂದ, ಪ್ರತಿವಾರ ಅವರು ಕಲಿತುಕೊಳ್ಳುವ ವಿಷಯದನುಸಾರ ಜೀವಿಸುವದು ಮುಖ್ಯ ಉದ್ದೇಶವಾಗಿದೆ. ಅವರು ಈ ಪಾಠಗಳನ್ನು ತಮ್ಮ ಅನುದಿನದ ಜೀವಿತಗಳಲ್ಲಿ ಹೇಗೆ ಅಳವಡಿಸಿಕೊಳ್ಳುತ್ತಿದ್ದಾರೆ ಎಂಬದನ್ನು ಗಮನಿಸುವದು ನಿಮ್ಮ ಕರ್ತವ್ಯವಾಗಿದೆ. ನಮಗೆ ನಿಮ್ಮ ಉತ್ತರಗಳು ಈಗಲೇ ಬೇಕು. ಈ ನೋಟ್ ೧೦ ಸೆಕೆಂಡ್ ಗಳಲ್ಲಿ ಮಾಯವಾಗುತ್ತದೆ. “ನಂಬಿಕೆಯ ವೀರರು” ಅಧ್ಯಯನದ ಮೂಲಕ ನೀವು ಮಕ್ಕಳು ಹಾಗೂ ಯೌವನಸ್ಥರಿಗೆ ಮಾರ್ಗದರ್ಶನ ನೀಡುವಾಗ ದೇವರು ನಿಮ್ಮನ್ನು ಆಶೀರ್ವದಿಸಲು.

ಪ್ರೀತಿಯಿಂದ, ಮಕ್ಕಳೇ ಪ್ರಾಮುಖ್ಯರು ಕ್ರಿಯಾತ್ಮಕ ತಂಡ



# ಈ ಪುಸ್ತಕವನ್ನು ಉಪಯೋಗಿಸುವದು ಹೇಗೆ

## ಕಥೆಯ ಅವಶ್ಯಕತೆ/ವಿಶ್ಲೇಷಣ

"ಒಳ್ಳೆಯ ಅಧ್ಯಾಪಕನು ತನ್ನ ವಿದ್ಯಾರ್ಥಿಗಳಲ್ಲಿ ಜ್ಞಾನವನ್ನು ತುಂಬಿಸುವದಿಲ್ಲ, ಬದಲಾಗಿ ಅದರಲ್ಲಿ ಅವರ ಆಸಕ್ತಿಯನ್ನು ಹೆಚ್ಚಿಸುತ್ತಾನೆ ಮತ್ತು ತಾವಾಗಿಯೇ ಅದನ್ನು ಸಂಪಾದಿಸಿಕೊಳ್ಳಲು ಮುಂದಾಗುವಂತೆ ಮಾಡುತ್ತಾನೆ." - ಎಂ. ಜೆ. ಬೆರ್ರಿಲ್.

ನಿಮ್ಮ ವಿದ್ಯಾರ್ಥಿಗಳು ತರಗತಿಯಲ್ಲಿ ಗಮನ ಕೊಡುವದು ಮಾತ್ರವಲ್ಲ ಬದಲಾಗಿ ತಮಗೆ ಕಲಿಸಲಾಗಿರುವದನ್ನು ಜೀವಿತಗಳಲ್ಲಿಗೆ ಅಳವಡಿಸಿಕೊಳ್ಳಬೇಕಾದರೆ ಅವರಿಗೆ ಪ್ರೇರಣೆ ಬಹಳ ಅವಶ್ಯ. ಅನೇಕರು ತಮ್ಮ ವಿದ್ಯಾರ್ಥಿಗಳಿಗೆ ಬಹುಮಾನ ಮತ್ತು ಸಿಹಿ ಕೊಟ್ಟು ಅವರ ಗಮನ ತಮ್ಮೆಡೆಗೆ ತರಲು ಪ್ರಯತ್ನಿಸುತ್ತಾರೆ ಅಥವಾ ಅವರ ಗಮನ ಕೊಡದಿದ್ದರೆ ಅವರನ್ನು ಶಿಕ್ಷಿಸುತ್ತಾರೆ. ಈ ಎರಡೂ ವಿಧಾಗಳು ನಿಮ್ಮ ತರಗತಿಯಲ್ಲಿ ಅವರು ಒಳ್ಳೆಯ ನಡವಳಿಕೆಯುಳ್ಳವರಾಗಿರಲು ಸಹಾಯ ಮಾಡುತ್ತವೆ, ಆದರೆ ಮನೆಗೆ ಹೋದ ನಂತರ ಕಲಿತುಕೊಂಡ ತತ್ವಗಳಿಗನುಸಾರ ಜೀವಿಸಲು ಇವುಗಳಿಂದ ಅವರಿಗೆ ಯಾವುದೇ ಪ್ರೇರಣೆ ಸಿಗುವದಿಲ್ಲ. ಕ್ರೈಸ್ತೀಯ ಸಭೆಗಳಲ್ಲಿ ಮಕ್ಕಳ ಅಧ್ಯಾಪಕರಾಗಿ, ಅವರು ವಯಸ್ಕರ ಕೂಟಗಳಿಗೆ ತೊಂದರೆ ಕೊಡಬಾರದೆಂಬ ಕಾರಣಕ್ಕೆ ನಾವು ಅವರನ್ನು ರಂಜಿಸುವದಿಲ್ಲ. ಬದಲಾಗಿ ದೇವರನ್ನು ಹಿಂಬಾಲಿಸುವ, ಆತನನ್ನು ತಿಳಿದುಕೊಳ್ಳುವ ಮತ್ತು ಆತನ ಸೇವೆ ಮಾಡುವ ಹೊಸ ತಲೆಮಾರಿನ ವಿಶ್ವಾಸಿಗಳನ್ನು ರೂಪಿಸಲು ನಾವು ಪ್ರಯತ್ನಿಸುವವರಾಗಿದ್ದೇವೆ. ಇದು ನಮ್ಮಲ್ಲಿ ಯಾರಿಗೇ ಆದರೂ ಕಷ್ಟದ ಕೆಲಸವಾಗಿದ್ದರೂ, ನಮ್ಮೆಲ್ಲರಿಗಿಂತ ಹೆಚ್ಚಾಗಿ ದೇವರು ತಾನೇ ಪ್ರತಿಯೊಬ್ಬ ಮಗುವಿನ ವಿಷಯದಲ್ಲಿ ಚಿಂತಿಸುತ್ತಾನೆ ಮತ್ತು ಮುಂದುವರೆಯಲು ಶಕ್ತಿ ಮತ್ತು ಪ್ರತಿಯೊಬ್ಬ ಮಗುವಿನ ಜೀವಿತದಲ್ಲಿ ಸೇವೆ ಮಾಡಲು ಹಾಗೂ ಪ್ರೋತ್ಸಾಹ ನೀಡಲು ಜ್ಞಾನವನ್ನು ಕೊಡುತ್ತಾನೆ.

**ವೇಳಾಪಟ್ಟಿ**

ತೆರೆಯಿರಿ
- ಸ್ವಾಗತ
- ಕಥೆಯ ಅವಶ್ಯಕತೆ
- ಹಾಡು

ಮುಖ್ಯ ಪಾಠ
ಚಟುವಟಿಕೆ (ಐಚ್ಛಿಕ)
ವಿಶ್ಲೇಷಣೆ ಆಫ್ ಕಥೆಯ ಅವಶ್ಯಕತೆ

ವಿದ್ಯಾರ್ಥಿ ಪುಸ್ತಕ
- ಟೈಮ್ ಲೈನ್
- ವಿಶ್ಲೇಷಣೆ ಪುಟ

ಪ್ರಶ್ನೆಗಳು ಮತ್ತು ಉತ್ತರಗಳು (ವಯಸ್ಕ ವಿದ್ಯಾರ್ಥಿ)
ಆಟ (ಐಚ್ಛಿಕ)
ಹಾಜರಾತಿ
ಅಸೈನ್ಮೆಂಟ್

ಮಕ್ಕಳನ್ನು ಪ್ರೋತ್ಸಾಹಪಡಿಸಲು ನಿಮಗೆ ಸಹಾಯವಾಗುವ ಸಲುವಾಗಿ, ಮಕ್ಕಳು ತಮಗೆ ದೇವರ ಅವಶ್ಯವಿದೆ ಎಂದು ತಿಳಿಯಲು ಮತ್ತು ತಾವು ಕಲಿತುಕೊಳ್ಳುತ್ತಿರುವ ಪಾಠಗಳನ್ನು ಮನೆಯಲ್ಲಿ ತಮ್ಮ ಜೀವಿತಗಳಿಗೆ ಅಳವಡಿಸಿಕೊಳ್ಳಲು ಸಹಾಯವಾಗಲೆಂದು ಪ್ರತಿಯೊಂದು ಪಾಠದ ಪ್ರಾರಂಭದಲ್ಲಿ ನಾವು "ಕಥೆಯ ಅವಶ್ಯಕತೆಯನ್ನು" ಕೊಟ್ಟಿದ್ದೇವೆ. ಪ್ರತಿಯೊಂದು ಕಥೆ ನಾವು ಸೃಷ್ಟಿಸಿರುವ ೫ ಕಾಲ್ಪನಿಕ ಪಾತ್ರಗಳನ್ನು ಹೊಂದಿರುತ್ತದೆ. ನೀವು ಪಾತ್ರಗಳ ಹೆಸರುಗಳನ್ನು ಬದಲಾಯಿಸಬಹುದು. ಬರವಣಿಗೆಯಲ್ಲಿರುವ ಕಥೆಯನ್ನು ನಾಟಕ ರೂಪದಲ್ಲಿ ಪ್ರತಿ ವಾರ ಮಾಡುವಂತೆ ನೀವು ನಿಮ್ಮ ಸಹಾಯಕರಿಗೆ ಹೇಳಬಹುದು. ಒಂದುವೇಳೆ ಅದು ಸಾಧ್ಯವಿಲ್ಲವೆಂದರೆ ನೀವು ಮಕ್ಕಳ ಎದುರು ಕಥೆಯನ್ನು ಜೋರಾಗಿ ಓದಬಹುದು. ಸಮಸ್ಯೆಯನ್ನು ಬಗೆಹರಿಸಲು ಪರಿಹಾರ ಸೂಚಿಸುವಂತೆ ನೀವು ಮಕ್ಕಳನ್ನು ಕೇಳಬಹುದು. ಅವರ ಆಲೋಚನೆಗಳು, ಒಳ್ಳೆಯವುಗಳು, ಕೆಟ್ಟವುಗಳು, ಸರಿಯಾದವುಗಳು, ತಪ್ಪಾದವುಗಳು ಎಂಬದಾಗಿ ಹೇಳಬೇಡಿರಿ ಮತ್ತು ಯಾವುದೇ ಪರಿಹಾರವನ್ನು ಹೇಳಬೇಡಿರಿ. ಪರಿಹಾರವಾಗದ ಒತ್ತಡವು ಮಕ್ಕಳು ಪಾಠದ ಕಡೆಗೆ ಗಮನಹರಿಸುವಂತೆ ಮಾಡುವದರಿಂದ ಅದನ್ನು ಉಪಯೋಗ ಮಾಡಿಕೊಳ್ಳಿರಿ.

ಪಾಠ ಮುಗಿದ ನಂತರ ಪರಿಹಾರದ ಭಾಗ ಬರುತ್ತದೆ. ಒಂದುವೇಳೆ ಮಕ್ಕಳು ಬಹಳ ಸಮಯದಿಂದ ಕುಳಿತುಕೊಂಡಿರುವದಾದರೆ, ಪರಿಹಾರದ ಭಾಗಕ್ಕೆ ಹೋಗುವ ಮೊದಲು ಏನಾದರೂ ಚಟುವಟಿಕೆ ಮಾಡಿಸಿರಿ. ಎಲ್ಲವೂ ಸಿದ್ಧವಾದ ನಂತರ, ಮಕ್ಕಳಿಗೆ ಕಥೆಯ ಅವಶ್ಯಕತೆಯನ್ನು ಜ್ಞಾಪಕಪಡಿಸಿರಿ ನಂತರ ಪರಿಹಾರಕ್ಕಾಗಿ ಪಾತ್ರಧಾರಿಗಳನ್ನು ಕರೆಯಿರಿ ಅಥವಾ ಅದನ್ನು ಹಾಗೇ ವಿವರಿಸಿರಿ. ಇದು ಕಥೆಯ ಅವಶ್ಯಕತೆಯ ಬಹುತೇಕ ಒತ್ತಡವನ್ನು ಬಗೆಹರಿಸುತ್ತದೆ ಮತ್ತು ಮಕ್ಕಳು ಶಾಲೆಯಲ್ಲಿ ಹಾಗೂ ಮನೆಯಲ್ಲಿ ತಮಗೆದುರಾಗುತ್ತಿರುವ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸಹಾಯ ಮಾಡುತ್ತದೆ. ಈ ರೀತಿಯಾಗಿ ಮಕ್ಕಳು ತಮ್ಮ ಅನುದಿನದ ಜೀವಿತಕ್ಕೆ ಪಾಠಗಳನ್ನು ಅಳವಡಿಸಿಕೊಳ್ಳಲು ನೀವು ಸಹಾಯ ಮಾಡಬಹುದು!





## ಮುಖ್ಯ ಪಾಠ

ಈ ಪಠ್ಯವು ಹಳೆಯ ಒಡಂಬಡಿಕೆಯ ಹೊರ ನೋಟ ಅಧ್ಯಯನವಾಗಿದೆ. ಬಹುತೇಕ ಪಾಠಗಳಲ್ಲಿ ನಾವು ಸತ್ಯವೇದದಲ್ಲಿರುವ ಒಬ್ಬ ವ್ಯಕ್ತಿಯ ಅಥವಾ ವೀರನ ಇಡೀ ಜೀವಿತವನ್ನು ನೋಡುವವರಾಗಿದ್ದೇವೆ. ಅಧ್ಯಾಪಕರಾಗಿ ನೀವು ಇದನ್ನು ಅಧ್ಯಯನ ಮಾಡಬಹುದು ಮತ್ತು ವಚನಭಾಗಗಳನ್ನು ಓದಿ ಸೂಕ್ತವಾದ ಒಳನೋಟಗಳನ್ನು ತಿಳಿದುಕೊಳ್ಳಬಹುದು. ಪ್ರತಿಯೊಬ್ಬ ವೀರನ ಜೀವಿತದ ಸಾರಾಂಶವನ್ನು ಪ್ರಮುಖ ಪಾಠದಲ್ಲಿ ಸೇರಿಸಲಾಗಿದೆ. ಮಕ್ಕಳ ಆಸಕ್ತಿಯನ್ನು ಕಾಪಾಡಿಕೊಳ್ಳುವ ಸಲುವಾಗಿ ವೀರನ ಜೀವಿತದ ಮಾಹಿತಿಗಳೇನಾದರೂ ನೆನಪಿದೆಯೇ ಎಂದು ಮಕ್ಕಳನ್ನು ಕೇಳಿರಿ.

ಕಥೆಯ ಭಾಗ ಆದಷ್ಟು ಕ್ಲುಪ್ತವಾಗಿರಲಿ, ಆಗ ಮುಖ್ಯ ಅಂಶವಾಗಿರುವ, ಅಳವಡಿಸುವಿಕೆಯ ಅಂಶವನ್ನು ಹೇಳಲು ನಿಮಗೆ ಸಮಯ ಸಿಗುತ್ತದೆ. ಪ್ರತಿಯೊಂದು ಪಾಠದ ಕೊನೆಯಲ್ಲಿ ಮಕ್ಕಳು ತೀರ್ಮಾನ ಮಾಡಬೇಕಿರುತ್ತದೆ. ಫುಟ್ ಬಾಲ್ ಆಟದಲ್ಲಿ ಗೋಲ್ ಗಳಿಸುವದು ಪ್ರಾಮುಖ್ಯವಾಗಿರುವ ಹಾಗೆ, ಆ ತೀರ್ಮಾನವೇ ಇಡೀ ಪಾಠದ ಮುಖ್ಯ ಅಂಶವಾಗಿರುತ್ತದೆ. ಒಂದುವೇಳೆ ನೀವು ಚೆನ್ನಾಗಿ ಆಟವಾಡುತ್ತಾ, ಉಳಿದ ಆಟಗಾರರಿಗೆ ಚೆಂಡನ್ನು ಪಾಸ್ ಮಾಡುತ್ತಾ, ಎದುರಾಳಿಗಳಿಗೆ ಚೆಂಡನ್ನು ಕಸಿಯುವ ಅವಕಾಶವನ್ನೇ ಕೊಡದಿದ್ದರೂ ಗೋಲ್ ಬಾರಿಸದೆ ಹೋದರೆ, ಗೆಲ್ಲಲು ಅಗುವದಿಲ್ಲ. ಮಕ್ಕಳು ತಮ್ಮ ಜೀವಿತದಲ್ಲಿ ಅಳವಡಿಸಿಕೊಳ್ಳಲು ಸಹಾಯವಾಗುವ ಸಲುವಾಗಿ ಅವಳವಡಿಸುವಿಕೆಯ ಭಾಗ ತಲುಪುವದನ್ನು ದೃಢಪಡಿಸಿಕೊಳ್ಳಿರಿ. ಯಾಕೋಬ ೧:೨೨-೨೪ರಲ್ಲಿ ನಾವು ಓದುವದೇನೆಂದರೆ, "ವಾಕ್ಯದ ಪ್ರಕಾರ ನಡೆಯುವವರಾಗಿರಿ; ಅದನ್ನು ಕೇಳುವವರು ಮಾತ್ರವೇ ಆಗಿದ್ದು ನಿಮ್ಮನ್ನು ನೀವೇ ಮೋಸಗೊಳಿಸಬೇಡಿರಿ. ಯಾವನಾದರೂ ವಾಕ್ಯವನ್ನು ಕೇಳುವವನಾದರೂ ಅದರ ಪ್ರಕಾರ ನಡೆಯದಿದ್ದರೆ ಅವನು ಕನ್ನಡಿಯಲ್ಲಿ ತನ್ನ ಹುಟ್ಟು ಮುಖವನ್ನು ನೋಡಿದ ಮನುಷ್ಯನಂತಿರುವನು; ಇವನು ತನ್ನನ್ನು ನೋಡಿಕೊಂಡು ಹೋಗಿ ತಾನು ಹೀಗಿದ್ದೇನೆಂಬದನ್ನು ಆ ಕ್ಷಣವೇ ಮರೆತುಬಿಡುವನು." ೧ ಕೊರಿಂಥ ೧೦ರಲ್ಲಿ ನಾವು ಓದುವದೇನೆಂದರೆ, ಹಳೆಯ ಒಡಂಬಡಿಕೆಯಲ್ಲಿರುವ ಕಥೆಗಳು ನಾವು ಏನು ಮಾಡಬೇಕು ಮತ್ತು ಏನು ಮಾಡಬಾರದು ಎಂಬದಕ್ಕೆ ಮಾದರಿಗಳಾಗಿವೆ. ಹಳೆಯ ಒಡಂಬಡಿಕೆಯ ವೀರರನ್ನು ನೋಡುವದೆಂದರೆ ಕನ್ನಡಿಯಲ್ಲಿ ನಮ್ಮನ್ನೇ ನೋಡಿಕೊಂಡು ಅವರ ಜೀವಿತಗಳಿಂದ ಕಲಿತುಕೊಳ್ಳಲು ದೊರೆಯುವ ಅವಕಾಶವನ್ನು ಉಪಯೋಗಿಸಿಕೊಳ್ಳುವದಾಗಿದೆ. ಅವರ ಮಾದರಿಗಳನ್ನು ಅನುಸರಿಸುವಂತೆ ಮತ್ತು ಅವರ ತಪ್ಪುಗಳಿಂದ ಕಲಿತುಕೊಳ್ಳುವಂತೆ ಹಾಗೂ ದೇವರಿಗಾಗಿ ಜೀವಿಸುವಂತೆ ನಮ್ಮ ಮಕ್ಕಳಿಗೆ ಕಲಿಸೋಣ.

## ಟೈಮ್ ಲೈನ್

ಸತ್ಯವೇದ ಕಥೆಯ ವೀರನ ಜೀವಿತವನ್ನು ಪ್ರತಿನಿಧಿಸುವ ಸಲುವಾಗಿ ಪ್ರತಿವಾರ ಮಕ್ಕಳು ತಮ್ಮ ಪುಸ್ತಕದಲ್ಲಿರುವ ಟೈಮ್ ಲೈನ್ ಮೇಲೆ ಗೆರೆಯನ್ನು ಹಾಕಬೇಕು. ಉದಾಹರಣೆಗೆ, ಪಾಠ ೧ರಲ್ಲಿ, ಆದಾಮನ ಜೀವಿತವನ್ನು ಅವನು ೧ ನೇ ಪಾಠದಲ್ಲಿ ಸೂಚಿಸಲಾಗಿರುವ ೧ರ ಗುರುತಿಗೆ ಗೀಟು ಹಾಕಬೇಕು. ಪಾಠದಲ್ಲಿ ಕೊಡಲಾಗಿರುವ ಸಂಖ್ಯೆಗಳ ಉಪಯೋಗದಿಂದ, ಮಕ್ಕಳು ಗೆರೆಯನ್ನು ಎಲ್ಲಿಂದ ಪ್ರಾರಂಭಿಸಬೇಕು ಮತ್ತು ಅದು ಎಷ್ಟು ಉದ್ದವಿರಬೇಕು ಎಂಬದನ್ನು ಲೆಕ್ಕಮಾಡಲು ಸಾಧ್ಯವಾಗುತ್ತದೆ. ಪ್ರತಿಯೊಂದು ಚದರ ೧೦೦ ವರ್ಷಗಳನ್ನು ಪ್ರತಿನಿಧಿಸುತ್ತದೆ. ಉದಾಹರಣೆಗೆ ಆದಾಮನ ಜೀವಿತದ ಸೃಷ್ಟಿಯ ೬ನೇ ದಿನದಂದು ಪ್ರಾರಂಭವಾಗುತ್ತದೆ ಮತ್ತು ೯೩೦ ವರ್ಷಗಳಿಗೆ ಕೊನೆಗೊಳ್ಳುತ್ತದೆ, ಅಥವಾ ಟೈಮ್ ಲೈನ್ ನಲ್ಲಿರುವ ೯ ಮತ್ತು ೧/೩ ಚದರದಲ್ಲಿ ಕೊನೆಗೊಳ್ಳುತ್ತದೆ. ಪ್ರತಿಯೊಬ್ಬ ವೀರನ ಜೀವಿತ ಮತ್ತು ಆಸಕ್ತಿಕರವಾದ ಮಾಹಿತಿಗಳನ್ನು ತಿಳಿಯುವದು ತಮಾಷೆಯಾಗಿರುತ್ತದೆ, ಇದೇ ಪ್ರಕಾರ ಆದಾಮನಿಂದ ನೋಹನ ಮರಣದ ತನಕ ಅಬ್ರಹಾಮನಿಂದ ಯೇಸುವಿನ ತನಕದ ಸಮಯದಷ್ಟು ವಿಸ್ತಾರವಾಗಿತ್ತು ಎಂಬದನ್ನು ತಿಳಿಯುವದು ವಿಶೇಷವಾದ ಸಂಗತಿಯಾಗಿದೆ!





## ಅಸೈನ್ಮೆಂಟ್

ಮಕ್ಕಳು ಕಲಿತ ಪಾಠಗಳನ್ನು ಅಭ್ಯಾಸ ಮಾಡಲು ಅವರಿಗೆ ಸಹಾಯ ಮಾಡುವ ಮತ್ತೊಂದು ಸಾಧನ ಪ್ರತಿ ವಾರ ಕೊಡಲಾಗುವ ಹೋಮ್ ವರ್ಕ್ ಅಸೈನ್ಮೆಂಟ್. ಮಕ್ಕಳು ವಾರದ ದಿನಗಳಲ್ಲಿ ಮಾಡಬಹುದಾದ ಚಟುವಟಿಕೆಗಳನ್ನು ಪ್ರತಿಯೊಂದು ಪಾಠದಲ್ಲಿಯೂ ನೋಡಬಹುದು.

ಯೋಹಾನ ೧೪:೨೩ರಲ್ಲಿ ಯೇಸು ಕ್ರಿಸ್ತನು ಹೇಳಿರುವದೇನೆಂದರೆ, “ಯಾರಾದರೂ ನನ್ನನ್ನು ಪ್ರೀತಿಸುವವನಾದರೆ ನನ್ನ ಮಾತನ್ನು ಕೈಕೊಂಡು ನಡೆಯುವನು; ಅವನನ್ನು ನನ್ನ ತಂದೆಯು ಪ್ರೀತಿಸುವನು, ಮತ್ತು ನಾವಿಬ್ಬರೂ ಅವನ ಬಳಿಗೆ ಬಂದು ಅವನ ಬಳಿಯಲ್ಲಿ ಬಿಡಾರವನ್ನು ಮಾಡಿಕೊಳ್ಳುವೆವು.”

ಈ ಅಸೈನ್ಮೆಂಟ್ಸ್ ಗಳ ಮೂಲಕ ಮಕ್ಕಳು ಸಭೆಗೆ ಬರುವಾಗ ಮಾತ್ರವಲ್ಲ ಬದಲಾಗಿ ವಾರದ ದಿನಗಳಲ್ಲಿಯೂ ದೇವರನ್ನು ತಮ್ಮ ಜೀವಿತಗಳಿಗೆ ಬರಮಾಡಿಕೊಳ್ಳಬಹುದು. ದೊಡ್ಡ ಮಕ್ಕಳಿಗೆ ಸತ್ಯವೇದದಿಂದ ಓದುವ ಅಸೈನ್ಮೆಂಟ್ ಸಹ ಇರುತ್ತದೆ. ಹೊಮ್ ವರ್ಕ್ ಅಸೈನ್ಮೆಂಟ್ ಬಗ್ಗೆ ಕೆಲ ಕಾಲ ಸಭೆಯಲ್ಲಿ ಚರ್ಚಿಸಿರಿ ಮತ್ತು ತರಗತಿಯಲ್ಲಿ ಅಭ್ಯಾಸ ಮಾಡಲು ಅವರಿಗೆ ಅವಕಾಶ ಕೊಡಿರಿ. ಕಳೆದ ವಾರದ ಅಸೈನ್ಮೆಂಟ್ ಪೂರ್ತಿಗೊಳಿಸಿದವರಿಗೆ ಕ್ಯಾಂಡಿ ಅಥವಾ ಬಹುಮಾನ ಕೊಟ್ಟು ಸನ್ಮಾನಿಸಿರಿ.

## ಹಾಜರಾತಿ/ವೀರರ ಆಟ








ಪ್ರತಿ ವಾರ ತಪ್ಪದೇ ಬರುವ ಮಕ್ಕಳಿಗೆ ಬಹುಮಾನ ಕೊಡುವ ಕಾರ್ಡ್ ಅನ್ನು ಈ ಪುಸ್ತಕದೊಂದಿಗೆ ಕೊಡಲಾಗುವದು. ಇವುಗಳನ್ನು ಹಾಜರಾತಿ ಕಾರ್ಡ್ ಅಥವಾ ಸ್ಟಿಕರ್ಸ್ ಎಂದು ಕರೆಯಬಹುದು. ಹಾಗೆಯೇ ಇವುಗಳು ಆಟ ಸಹ ಆಗಿರುತ್ತವೆ! ಹಂತದ ಕೊನೆಯಲ್ಲಿ (೧೩ ಪಾಠಗಳು ಅಥವಾ ೩ ತಿಂಗಳು) ಈ ಕಾರ್ಡ್ ಗಳ ಮೂಲಕ ಮಕ್ಕಳು ಆಟ ಆಡಬಹುದು. ಹೆಚ್ಚಿನ ಮಾಹಿತಿಗಾಗಿ ಆಟದ ಸೂಚನೆಗಳನ್ನು ಓದಿರಿ.

### ಪರ್ಯಾಯ ಆಟ:

ಮಕ್ಕಳಿಗೆ ೧-೧೦ ಅಂಕಗಳನ್ನು ಹಾಳೆಯ ಮೇಲೆ ಬರೆಯಲು ಹೇಳಿರಿ. ನಂತರ ಅಧ್ಯಾಪಕನು ಆಟದ ಸೂಚನೆಯಲ್ಲಿ ಕೊಡಲಾಗಿರುವ ಯಾವುದಾದರು ೧೦ ಪ್ರಶ್ನೆಗಳನ್ನು ಕೇಳಬೇಕು. ಗುಣಲಕ್ಷಣವನ್ನು ಆವರಣದೊಳಗೆ ಹೇಳಬೇಡಿರಿ. ಪ್ರತಿಯೊಂದು ಪ್ರಶ್ನೆಗೆ, ವಿದ್ಯಾರ್ಥಿಗಳು ಆ ಪರಿಸ್ಥಿತಿಗೆ ಯಾವ ಗುಣಮಟ್ಟ ಅಥವಾ ಗುಣಲಕ್ಷಣ ಅವಶ್ಯವಾಗಿದೆ ಎಂಬದನ್ನು ಬರೆಯಬೇಕು: ಬಲ, ಯಥಾರ್ಥತೆ, ವಿಧೇಯತೆ, ದೀನತೆ, ನಂಬಿಕೆಯ ಹೃದಯ. ಯಾರು ಹೆಚ್ಚಾಗಿ ಸರಿಯಾದ ಉತ್ತರ ಕೊಡುತ್ತಾರೋ ಅವರು ಗೆಲ್ಲುತ್ತಾರೆ ಮತ್ತು ಅವರಿಗೆ ಸಣ್ಣ ಕ್ಯಾಂಡಿ ಅಥವಾ ಬಹುಮಾನ ಕೊಡಲಾಗುವದು.

# ೧. ದೇವರನ್ನು ನಂಬಿರಿ



**ಸತ್ಯವೇದ ಕಥೆ: ಸೃಷ್ಟಿ**

ಆದಿಕಾಂಡ ೧:೧-೨:೩, ಇಬ್ರಿಯ ೧೧:೧-೩

## ಕಂಠಪಾಠ ವಚನ ೧

ಹಿಬ್ರಿಯರಿಗೆ ೧೧:೧ "ವಿಶ್ವಾಸವೆಂಬುದು ನಾವು ನಿರೀಕ್ಷಿಸುವಂಥವುಗಳು ನಮಗೆ ದೊರಕುತ್ತವೆ ಎಂಬ ದೃಢ ನಂಬಿಕೆ ಹಾಗು ಕಣ್ಣಿಗೆ ಕಾಣದಂಥವುಗಳು ನಿಶ್ಚಯವಾದವು ಎಂಬ ನಿಲುವು ಆಗಿದೆ."

## ಕಥೆಯ ಅವಶ್ಯಕತೆ ೧



ಸಂಡೇ ಸ್ಕೂಲ್ ನಲ್ಲಿ ಅವರು ಮತ್ತಾಯನಿಗೆ ಸೃಷ್ಟಿಯ ಬಗ್ಗೆ ಕಲಿಸಿದರು, ದೇವರು ಇಡೀ ಲೋಕವನ್ನು ಆರು ದಿವಸಗಳಲ್ಲಿ ಉಂಟುಮಾಡಿದನು ಎಂಬದಾಗಿ ಅವರು ಅವನಿಗೆ ಹೇಳಿದರು. ಕೆಲವು ದಿವಸಗಳಾದ ನಂತರ ಶಾಲೆಯಲ್ಲಿ, ಶಿಕ್ಷಕಿಯು ಅವರಿಗೆ ತಮ್ಮ ಬಯಾಲಜಿ ಪುಸ್ತಕವನ್ನು ತೆರೆಯುವಂತೆ ಹೇಳಿದರು ಮತ್ತು ಅವರಿಗೆ ವಿಕಸನದ ಪಾಠವನ್ನು ಹೇಳುತ್ತಾ ತಾವೆಲ್ಲರೂ ಮಂಗನಿಂದ ಮಾನವರಾಗಿದ್ದೇವೆ ಎಂದು ಹೇಳಿದರು. ಇದು ಮತ್ತಾಯನ ಮೇಲೆ ಅಗಾಧವಾದ ಪರಿಣಾಮವನ್ನು ಬೀರಿತು. "ಸಭೆಯಲ್ಲಿ ಒಂದು ರೀತಿ ಹೇಳಿಕೊಡುತ್ತಾರೆ. ಶಾಲೆಯಲ್ಲಿ ಇನ್ನೊಂದು ರೀತಿ ಹೇಳಿಕೊಡುತ್ತಾರೆ" ಎಂಬದಾಗಿ ಅವನು ಯೋಚಿಸ ತೊಡಗಿದನು.

## ಮುಖ್ಯ ಪಾಠ ೧

ಸಂಡೇ ಸ್ಕೂಲ್ ನ ಹೊಸ ಪಠ್ಯವಾಗಿರುವ "ನಂಬಿಕೆಯ ವೀರರು" ಪಠ್ಯಕ್ಕೆ ಸ್ವಾಗತ, ಇದರಲ್ಲಿ ನಾವು ಪೌಲನು ಇಬ್ರಿಯ ಪತ್ರಿಕೆಯ ೧೧ನೇ ಅಧ್ಯಾಯದಲ್ಲಿ ತಿಳಿಸಿರುವ ನಂಬಿಕೆಯ ವೀರರ ಮೂಲಕ ಹಳೆಯ ಒಡಂಬಡಿಕೆಯ ಹೊರನೋಟವನ್ನು ಅಧ್ಯಯನ ಮಾಡೋಣ. ಹಳೆಯ ಒಡಂಬಡಿಕೆಯ ಈ ಅಧ್ಯಯನದಲ್ಲಿ, ಅನೇಕ ಜನರು ಅನೇಕ ರೀತಿಯ ವೃತ್ತಿ ಅಥವಾ ಉದ್ಯೋಗವುಳ್ಳವರಾಗಿದ್ದರು ಎಂಬದನ್ನು ನೋಡುತ್ತೇವೆ. ರೈತರು, ತಾಯಂದಿರು, ಸಭಾಪಾಲಕರು, ಅಡುಗೆ ಮಾಡುವವರು, ಅರಸರು ಮತ್ತು ಸೇವಕರು ಇದ್ದದ್ದನ್ನು ನಾವು ನೋಡುತ್ತೇವೆ. ಆದರೂ ಅವರೆಲ್ಲಾ ತಮ್ಮ ಅನುದಿನದ ಜೀವಿತದಲ್ಲಿ ತೆಗೆದುಕೊಂಡ ಆತ್ಮೀಕ ತೀರ್ಮಾನಗಳು ಅವರ ಶಾರೀರಿಕ ಜೀವಿತ ಅಥವಾ ಉದ್ಯೋಗಗಳಿಂತ ಪ್ರಾಮುಖ್ಯವಾಗಿದ್ದವು. ನೀವು ಬೆಳೆದು ದೊಡ್ಡವರಾದ ಮೇಲೆ ಏನಾಗುವಿರೆಂದು ನಿಮಗೆ ಗೊತ್ತಿದೆಯೇ? ನೀವು ಫಯರ್ ಮ್ಯಾನ್, ಡಾಕ್ಟರ್, ಇಂಜಿನಿಯರ್, ಪಾಸ್ಟರ್, ಟೀಚರ್ ಅಥವಾ ಮೆಕಾನಿಕ್ ಆಗಲು ಬಯಸುತ್ತೀರೋ? ನಾವು ನಮ್ಮ ಜೀವಿತಗಳ ಬಗ್ಗೆ ಆಲೋಚಿಸುವಾಗ, ನಮ್ಮ ಕೆಲಸ, ಸ್ಥಾನ ಮತ್ತು ಸಮಾಜದಲ್ಲಿ ನಮಗಿರುವ ಘನತೆಯ ಬಗ್ಗೆ ಯೋಚಿಸುತ್ತೇವೆ. ದೇವರಿಗೆ ನಮ್ಮ ಹೃದಯಗಳು ಮತ್ತು ಆತನೊಂದಿಗೆ ನಮಗಿರುವ ಸಂಬಂಧ ಪ್ರಾಮುಖ್ಯವಾಗಿದೆಯೇ ಹೊರತು ಇವುಗಳು ಪ್ರಾಮುಖ್ಯವಲ್ಲ. ದೇವರು ನಿಮ್ಮ ಜೀವಿತದ ವಿಷಯದಲ್ಲಿ ವಿಶೇಷವಾದ ಉದ್ದೇಶವುಳ್ಳವನಾಗಿದ್ದಾನೆ!

ಇಂದಿನ ಸತ್ಯವೇದ ಕಥೆಯಲ್ಲಿ ನಾವು ದೇವರು ತನ್ನ ಬಾಯ ಮಾತಿನ ಮೂಲಕ ಒಂದು ವಾರದಲ್ಲಿ ಎಲ್ಲವನ್ನೂ ಉಂಟುಮಾಡಿದ ಸೃಷ್ಟಿಯ ಕಥೆಯನ್ನು ಕಲಿತುಕೊಳ್ಳುವವರಾಗಿದ್ದೇವೆ. ದೇವರು ತನ್ನ ಆಜ್ಞೆಗಳ ಮೂಲಕ ಇಡೀ ಲೋಕವನ್ನು ಉಂಟುಮಾಡಿದನು ಎಂಬದನ್ನು ನಾವು ನಂಬಿಕೆಯಿಂದ ಅರ್ಥಮಾಡಿಕೊಂಡಿದ್ದೇವೆ ಎಂಬದಾಗಿ ಸತ್ಯವೇದ ಹೇಳುತ್ತದೆ, ಆದ್ದರಿಂದ ಕಣ್ಣಿಗೆ ಕಾಣುವಂಥವುಗಳು ಕಣ್ಣಿಗೆ ಕಾಣುತ್ತಿದ್ದವುಗಳಿಂದ ಉಂಟಾಗಲಿಲ್ಲ. (ಇಬ್ರಿಯ ೧೧:೩). ಆದಿಕಾಂಡ ೧ ಮತ್ತು ೨ ಅಧ್ಯಾಯಗಳಲ್ಲಿ ಹೇಳಿರುವಂತೆ ದೇವರು ಅದಿಯಲ್ಲಿ ಇಡೀ ಲೋಕವನ್ನು ಆರು ದಿನಗಳಲ್ಲಿ ಉಂಟು ಮಾಡಿದನು.

ದಿನ ೧: ರಾತ್ರಿ ಮತ್ತು ಹಗಲು
ದಿನ ೨: ಆಕಾಶ ಮತ್ತು ಸಮುದ್ರ
ದಿನ ೩: ಒಣನೆಲ ಮತ್ತು ತರಕಾರಿಗಳು
ದಿನ ೪: ನಕ್ಷತ್ರಗಳು, ಸೂರ್ಯ ಮತ್ತು ಚಂದ್ರ
ದಿನ ೫: ಜಲಚರ ಪ್ರಾಣಿಗಳು ಮತ್ತು ಪಕ್ಷಿಗಳು
ದಿನ ೬: ನೆಲದ ಮೇಲೆ ಚಲಿಸುವ ಪ್ರಾಣಿಗಳು ಮತ್ತು ಮನುಷ್ಯರು

ಸತ್ಯವೇದವು ದೇವರು ಆದಿಯಲ್ಲಿ ಲೋಕವನ್ನು ಮತ್ತು ನಮ್ಮನ್ನು ಹೇಗೆ ಉಂಟು ಮಾಡಿದನು ಎಂಬ ದಾಖಲೆಯನ್ನು ಕೊಡುತ್ತದೆ. ದೇವರು ಆರು ದಿನಗಳಲ್ಲಿ ನಮ್ಮ ಲೋಕ ಮತ್ತು ಭೂಮಂಡಲವನ್ನು ಉಂಟುಮಾಡಿದನು ಹಾಗೂ ಮೊದಲ ಮಾನವರಾದ ಆದಾಮ ಮತ್ತು ಹವ್ವಳನ್ನು ಉಂಟುಮಾಡಿ ಅವರನ್ನು ಏದೇನ್ ತೋಟದಲ್ಲಿ ಇರಿಸಿದನು. ೭ನೇ ದಿನದಲ್ಲಿ, ದೇವರು ವಿಶ್ರಮಿಸಿಕೊಂಡನು.

ಜನರು ಅನೇಕ ವಿಧವಾದ ಕಾರ್ಯಗಳನ್ನು ನಂಬಿದ್ದಾರೆ. ಮತ್ತಾಯನ ಹಾಗೆ, ನೀವು ಶಾಲೆಯಲ್ಲಿ ವಿಕಾಸದ ಬಗ್ಗೆ ಮತ್ತು ಲೋಕವು ಹೇಗೆ ಶತಕೋಟಿ ವರ್ಷ ಹಳೆಯದಾಗಿದೆ ಎಂಬದನ್ನು ಕೇಳಿಸಿಕೊಳ್ಳುತ್ತಿರಬಹುದು. ಕೆಲವೊಮ್ಮೆ ದೇವರಲ್ಲಿ ನಮಗಿರುವ ನಂಬಿಕೆಯನ್ನು ಹಾಳುಮಾಡುವಂಥ ವಿವರಣೆಗಳೊಂದಿಗೆ ಜನ ನಮ್ಮ ಅಸ್ತಿತ್ವವನ್ನು ವಿವರಿಸುತ್ತಾರೆ ಮತ್ತು ಅದನ್ನು ನಿರೂಪಿಸಲು ಅವರು ವಿಜ್ಞಾನವನ್ನೇ ಬುಡಮೇಲು ಮಾಡುತ್ತಾರೆ. ಕ್ರೈಸ್ತರಾಗಿ ನಾವು ಗತಿಸಿದ ವಿಷಯಗಳ ಬಗ್ಗೆ ಕುರುಡರಾಗಿಲ್ಲ ಯಾಕಂದರೆ ನಮ್ಮ ಹತ್ತಿರವಿರುವ ಸತ್ಯವೇದವೆಂಬ ಪುಸ್ತಕ ನಮಗೆ ಲೋಕದ ಪ್ರಾರಂಭ ಹೇಗಾಗಿಯು ಎಂಬ ಚಾರಿತ್ರಿಕ ದಾಖಲೆಯನ್ನು ಕೊಡುತ್ತದೆ ಎಂದು ನಂಬುತ್ತೇವೆ.

ನಾನು ದೇವರನ್ನು ನಂಬುತ್ತೇನೆ, ಆತನು ಇಡೀ ಲೋಕವನ್ನು ಉಂಟುಮಾಡಿದನು ಎಂದು ನಾನು ನಂಬುತ್ತೇನೆ ಮತ್ತು ಸತ್ಯವೇದವು ನನಗೆ ಚರಿತ್ರೆಯ ನಿಖರವಾದ ಮಾಹಿತಿ ಕೊಡುತ್ತದೆ ಎಂದು ನಂಬುತ್ತೇನೆ. ದೇವರು ನನ್ನ ಜೀವಿತದ ಬಗ್ಗೆ ಉತ್ತಮ ಉದ್ದೇಶ ಹೊಂದಿದ್ದಾನೆ ಮತ್ತು ನಾನು ಅದನ್ನು ನಂಬುತ್ತೇನೆ.

## ವಿಶ್ಲೇಷಣೆ ೧

ಮತ್ತಾಯನೇ ಜನ ಅನೇಕ ವಿಷಯಗಳನ್ನು ನಂಬುತ್ತಾರೆ ಎಂಬದು ನಿನಗೆ ಗೊತ್ತಿದೆಯೇ. ಉದಾಹರಣೆಗೆ ಲೋಕ ಸಮವಾಗಿತ್ತು ಎಂದು ಜನರು ನಂಬುತ್ತಾರೆ, ಆದರೆ ಈಗ ನಾವು ನಂಬುವದಿಲ್ಲ. ದೇವರು ಲೋಕವನ್ನು ಮತ್ತು ಲೋಕದೊಳಗಿರುವದೆಲ್ಲವನ್ನು ಉಂಟುಮಾಡಿದನು ಎಂದು ನಾವು ನಂಬುತ್ತೇವೆ.



## ಚಟುವಟಿಕೆ ೧

ನಿಮಗೆ ಯಾವುದು ಹೆಚ್ಚು ಇಷ್ಟ**?**

ಪ್ರತಿದಿನ ಸೃಷ್ಟಿಯಲ್ಲಿ ಯಾವುದೆಂದರೆ ಇಷ್ಟ ಮತ್ತು ತಾವೇನು ಮಾಡುವರು ಎಂದು ಪ್ರತಿಯೊಂದು ಮಗುವಿಗೆ ಕೇಳಿರಿ.



ದಿನ ೧ ನಿಮಗೆ ಯಾವುದು ಹೆಚ್ಚು ಇಷ್ಟ: ಬೆಳಕು ಅಥವಾ ಕತ್ತಲೆ?
ದಿನ ೨ ನೀವು ಮೀನಿನಂತೆ ಈಜುತ್ತೀರೋ ಅಥವಾ ಹಾರುತ್ತೀರೋ?
ದಿನ ೩ ನಿಮಗೆ ಯಾವುದು ಹೆಚ್ಚು ಇಷ್ಟ, ಹಗಲು ಅಥವಾ ರಾತ್ರಿ?
ದಿನ ೪ ನಿಮಗೆ ಯಾವುದು ಇಷ್ಟ ಗಿಡವೋ ಅಥವಾ ಮರವೋ?
ದಿನ ೫ ನಿಮಗೆ ಯಾವ ಪಕ್ಷಿ ಅಥವಾ ಮೀನೆಂದರೆ ಬಹಳ ಇಷ್ಟ?

ದಿನ ೬ ನಿಮ್ಮ ಇಷ್ಟದ ಪ್ರಾಣಿ ಯಾವುದು?
ದಿನ ೭ ನೀವು ರಜಾ ದಿನದಲ್ಲಿ ಏನು ಮಾಡುತ್ತೀರಿ?

## ಟೈಮ್ ಲೈನ್ ೧

ಆದಾಮನ ಜೀವಿತದ ಗೆರೆಯನ್ನು ಹಾಕಿರಿ.
ಪ್ರಶ್ನೆ: ಆದಾಮನು ಯಾವಾಗ ಜನಿಸಿದನು? ಉತ್ತರ: ಸೃಷ್ಟಿಯ ೬ನೇ ದಿನದಂದು
ಪ್ರಶ್ನೆ: ಅದಾಮನು ಎಷ್ಟು ವರ್ಷ ಬದುಕಿದನು? ಉತ್ತರ: ೯೩೦ ವರ್ಷಗಳು.

## ಒಗಟಿನ ಉತ್ತರಗಳು ೧

ಆದಿಯಲ್ಲಿ ದೇವರು ಬೆಳಕನ್ನು ಉಂಟುಮಾಡಿದನು ಮತ್ತು ಅದನ್ನು ಒಳ್ಳೇದೆಂದು ನೋಡಿದನು ಮತ್ತು ಬೆಳಕನ್ನು "ಹಗಲೆಂದು" ಹಾಗೂ ಕತ್ತಲೆಯನ್ನು "ರಾತ್ರಿ" ಎಂದು ಕರೆದನು. ಎರಡನೆಯ ದಿನ ದೇವರು ಆಕಾಶವನ್ನು ಉಂಟುಮಾಡಿದನು. ಮೂರನೆಯ ದಿನ, ದೇವರು ಗುಮುಟವನ್ನು ಉಂಟುಮಾಡಿದನು ಮತ್ತು ನೀರನ್ನು, "ಸಮುದ್ರ" ಎಂದು ಹಾಗೂ ಒಣನೆಲವನ್ನು "ಭೂಮಿ" ಎಂದು ಕರೆದನು. ಮತ್ತು ಆತನು ಕಾಯಿಪಲ್ಯಗಳನ್ನು ಉಂಟುಮಾಡಿದನು; ಬೀಜವುಳ್ಳ ಗಿಡಗಳು ಮತ್ತು ಫಲ ಬಿಡುವ ಮರಗಳು. ನಾಲ್ಕನೆಯ ದಿನ ಆತನು ನಕ್ಷತ್ರಗಳು, ಸೂರ್ಯ ಮತ್ತು ಚಂದ್ರನನ್ನು ಉಂಟುಮಾಡಿದನು. ಐದನೆಯ ದಿನದಲ್ಲಿ ಆತನು ಸಮುದ್ರದ ಪ್ರಾಣಿಗಳು ಮತ್ತು ಪಕ್ಷಿಗಳನ್ನು ಉಂಟುಮಾಡಿದನು. ಆರನೆಯ ದಿನದಲ್ಲಿ, ಆತನು ಕಾಡು ಪ್ರಾಣಿಗಳು ಹಾಗೂ ಸಾಕು ಪ್ರಾಣಿಗಳನ್ನು ಉಂಟುಮಾಡಿದನು; ಆತನು ಪುರುಷನನ್ನು ಮತ್ತು ಸ್ತ್ರೀಯನ್ನು ಉಂಟುಮಾಡಿದನು, ಆತನು ಅವರನ್ನು ಆಶೀರ್ವದಿಸಿದನು ಹಾಗೂ ತಾನು ಉಂಟುಮಾಡಿದ ಎಲ್ಲವುಗಳ ಮೇಲೆ ಅಧಿಕಾರ ಕೊಟ್ಟನು.

| | | | | | | | | | |
|---|---|---|---|---|---|---|---|---|---|
| ಶ | ವಿ | ಶೇ | ಷ | ಧಿ | ಸೂ | ವ್ | ಚ | ಕ | ಲೋ |
| ಷ | ಖ್ | ಗ | ಝ್ಯ | ಪ್ರಾ | ಳು | ರ್ಯ | ಕ್ | ೬ | ರ |
| ಯ | ಳು | ಡಿ | ರಿ | ಲೋ | ಸ | ೦ | ಫೊ | ದಿ | ಪ್ರಾ |
| ಪ್ರಾ | ಪ | ರ | ಲೋ | ಕ | ಸೂ | ಭ | ಕ್ಷ | ವ | ಣಿ |
| ಮೊ | ದೇ | ಲಿ | ದ | ಕೆ | ಳ | ಗೆ | ಮಿ | ಸ | ಗ |
| ಮಾ | ನ | ವ | ನು | ಕಿ | ನ | ಕ್ಷ | ತ್ರ | ಗ | ಳು |
| ವ | ಇ | ನೀ | ರು | ಳಿ | ಢಿ | ಮಿ | ಢ್ | ಳು | ಫ |
| ಉ | ನೃ | ಡ್ಡಿ | ನ | ಲ್ಪ | ಟ್ಟ | ವು | ಲೋ | ನೆ | ಐ |
| ಲೋ | ಡ್ಡಿ | ಸ | ಮು | ಯ್ | ಲ್ | ಕೊ | ಟ್ಟ | ನು | ಲ |
| ಬ | ಳು | ಚಂ | ದ್ರ | ದಿ | ಸ | ದ್ರ | ಟಿ | ಷ್ | ಪ್ರಾ |



## ಪ್ರಶ್ನೆಗಳು ಮತ್ತು ಉತ್ತರಗಳು ೧

೧. ದೇವರು ನಮ್ಮನ್ನು ರೋಬೋಟ್ ಗಳಾಗಿ ಉಂಟುಮಾಡಿದ್ದರೆ ನಾವು ಹೇಗಿರುತ್ತಿದ್ದೆವು? (ಯಾರೂ ಕುಡಿಯುತ್ತಿರಲಿಲ್ಲ, ಧೂಮಪಾನ ಮಾಡುತ್ತಿರಲಿಲ್ಲ, ಇತ್ಯಾದಿ., ಆದರೆ ಅದು ನಮ್ಮ ಸಂತೋಷವನ್ನು ಕೊಲ್ಲುತ್ತಿತ್ತು. ನಾವು ಸೇವಕರಾಗಿರುತ್ತಿದ್ದೇವೆಯೇ ಹೊರತು ಸ್ವತಂತ್ರರಾಗಿರುತ್ತಿರಲಿಲ್ಲ).

೨. ನೀವು ಭವಿಷ್ಯದಲ್ಲಿ ದೇವರ ಸೇವೆಯನ್ನು ಹೇಗೆ ಮಾಡಲು ಬಯಸುವಿರಿ? (ಈ ವಿಷಯ ಚರ್ಚಿಸುವಂತೆ ಮಕ್ಕಳನ್ನು ಪ್ರೋತ್ಸಾಹಪಡಿಸಿರಿ. ದೇವರು ಪ್ರತಿಯೊಬ್ಬರಿಗೂ ವಿವಿಧ ವರಗಳನ್ನು ಕೊಡುತ್ತಾನೆ ಮತ್ತು ಯೇಸು ಕ್ರಿಸ್ತನ ದೇಹದ ಭುಜ ಕಣ್ಣಿಗೆ ಉತ್ತಮವಾದದ್ದಲ್ಲ ಹಾಗೆಯೇ ಕಣ್ಣು ಭುಜಕ್ಕಿಂತ ಉತ್ತಮವಾದದ್ದಲ್ಲ ಎಂಬದನ್ನು ಮರೆಯಬೇಡಿರಿ).

೩. ನಮ್ಮ ಜೀವಿತಗಳ ಅತ್ಯಂತ ಪ್ರಾಮುಖ್ಯವಾದ ತೀರ್ಮಾನಗಳು ಯಾವುವು? (ಆತ್ಮೀಕ ತೀರ್ಮಾನಗಳು, ದೇವರಿಗೆ ವಿಧೇಯರಾಗುವದು, ಯಾರನ್ನು ಮದುವೆ ಮಾಡಿಕೊಳ್ಳಬೇಕು, ಸಣ್ಣ ವಿಷಯಗಳಲ್ಲಿಯೂ ದೇವರಿಗೆ ವಿಧೇಯರಾಗುವದು, ಇತ್ಯಾದಿ).

೪. ಮಾನವರ ಅಸ್ತಿತ್ವ ಎಲ್ಲಿಂದ ಬಂದಿದೆ, ಮಂಗನಿಂದಲೋ ಅಥವಾ ದೇವರಿಂದಲೋ? (ಸರಿಯಾದ ಉತ್ತರ ಸಿಗುವ ತನಕ ಚರ್ಚೆ ನಡೆಸಿರಿ).

## ಆಟ ೧

ಬೀನ್ ಬ್ಯಾಗ್ (ಮೆತ್ತೆ)



ವಾಕ್ಯವನ್ನು ಸಣ್ಣ ಭಾಗಗಳಾಗಿ ವಿಂಗಡಿಸುವ ಮೂಲಕ ದೊಡ್ಡದಾಗಿರುವ ಪೋಸ್ಟರ್ ಬೋರ್ಡ್ ಸಿದ್ಧಮಾಡಿರಿ. ಈ ಆಟದಲ್ಲಿ ಮಕ್ಕಳು ವಾಕ್ಯವನ್ನು ಹೇಳುವ ಮೂಲಕ ಅಭ್ಯಾಸ ಮಾಡುತ್ತಾರೆ.

* ಈ ಮಗು ವಾಕ್ಯವನ್ನು ಹೇಳಿದ ನಂತರ ಮತ್ತೊಂದು ಮಗುವಿಗೆ ಮೆತ್ತೆಯನ್ನು ಎಸೆಯಿಂದ ಅದನ್ನು ಹಿಡಿಯುವ ಮಗು ವಾಕ್ಯದ ಉಳಿದ ಭಾಗವನ್ನು ಹೇಳಬೇಕು.
* ಒಂದುವೇಳೆ ಈ ಕಾರ್ಯಗಳು ನಡೆದರೆ ಮಗು ಆಟದಲ್ಲಿ ಮುಂದುವರೆಯಲು ಆಗುವದಿಲ್ಲ:

- ವಾಕ್ಯವನ್ನು ಬೇಗ ಹೇಳದಿದ್ದರೆ
- ಎದ್ದು ನಿಲ್ಲದಿದ್ದರೆ
- ವಾಕ್ಯವನ್ನು ಗಟ್ಟಿಯಾಗಿ ಹೇಳದಿದ್ದರೆ
- ಹಿಂದಿನ ಮಗು ಹೇಳಿದ ವಾಕ್ಯ ಭಾಗವನ್ನೇ ಹೇಳಿದರೆ

- ಎಲ್ಲರ ಸರದಿ ಮುಗಿದ ನಂತರ ಆಟವನ್ನು ಮತ್ತೆ ಹಿಂದೆಗಿಂತ ವೇಗವಾಗಿ ಆಡಬೇಕು.

## ಹಾಜರಾತಿ ೧




ತರಗತಿಗೆ ಹಾಜರಾದದ್ದಕ್ಕೆ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡುವ ಸಲುವಾಗಿ ಮತ್ತೊಂದು ಕಾರ್ಡ್ ಪಡೆಯಬೇಕಾದರೆ ಮುಂದಿನ ವಾರ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:

ಸೃಷ್ಟಿ

## ಹೋಮ್ ವರ್ಕ್ ೧

### ಅಸೈನ್ಮೆಂಟ್

ದೇವರು ಸೃಷ್ಟಿ ಮಾಡಿದ ವಾರದಲ್ಲಿ ಉಂಟುಮಾಡಿದ ಕಾರ್ಯಗಳ ಚಿತ್ರವನ್ನು ಬಿಡಿಸಬೇಕು ಅಥವಾ ಸೆಲ್ಫಿ ತೆಗೆದುಕೊಳ್ಳಬೇಕಾದದ್ದು ನಿಮ್ಮ ಈ ವಾರದ ಅಸೈನ್ಮೆಂಟ್ ಆಗಿರುತ್ತದೆ.

ಸೋಮವಾರ: ಸೆಲ್ಫಿ/ಹಗಲಿನ ಚಿತ್ರ ಮತ್ತು ರಾತ್ರಿಯ ಚಿತ್ರ.

ಮಂಗಳವಾರ: ಸೆಲ್ಫಿ/ಒಂದು ಆಕಾಶವನ್ನು ತೋರಿಸುವ ಚಿತ್ರ ಮತ್ತು ಇನ್ನೊಂದು ಸಮುದ್ರ, ನದಿ ಅಥವಾ ಸಾಧ್ಯವಾದರೆ ಕೆರೆಯನ್ನು ತೋರಿಸುವ ಚಿತ್ರ.

ಬುಧವಾರ: ಸೆಲ್ಫಿ/ಗಿಡಗಳು ಮತ್ತು ಮರಗಳನ್ನು ತೋರಿಸುವ ಚಿತ್ರ.

ಗುರುವಾರ: ಸೆಲ್ಫಿ/ಸೂರ್ಯವನ್ನು ತೋರಿಸುವ ಒಂದು ಚಿತ್ರ ಮತ್ತು ಚಂದ್ರ ಅಥವಾ ನಕ್ಷತ್ರಗಳನ್ನು ತೋರಿಸುವ ಇನ್ನೊಂದು ಚಿತ್ರ.

ಶುಕ್ರವಾರ: ಸೆಲ್ಫಿ/ಮೀನುಗಳ ಒಂದು ಚಿತ್ರ ಮತ್ತು ಸಾಧ್ಯವಾದರೆ ಪಕ್ಷಿಗಳ ಇನ್ನೊಂದು ಚಿತ್ರ.

ಶನಿವಾರ: ಸೆಲ್ಫಿ/ಪ್ರಾಣಿಗಳು ಮತ್ತು ಮನುಷ್ಯರ ಚಿತ್ರ.

ಭಾನುವಾರ: ನಿಮ್ಮ ಹೋಮ್ ವರ್ಕ್ ಗಳಿಂದ ವಿಶ್ರಮಿಸಿಕೊಳ್ಳಿರಿ.

**ಓದಿರಿ**

ದಿನ ೧: ಆದಿಕಾಂಡ ೩:೧-೧೦

ದಿನ ೨: ಆದಿಕಾಂಡ ೩:೧೧-೧೯

ದಿನ ೩: ಆದಿಕಾಂಡ ೩:೨೦-೪:೨

ದಿನ ೪: ಆದಿಕಾಂಡ ೪:೩-೧೬

ದಿನ ೫: ಆದಿಕಾಂಡ ೪:೧೭-೨೬

# ೧. ಆತನಿಗ ನಿಮ್ಮ ಹೃದಯವನ್ನು ಕೊಡಿರಿ



**ವೀರ: ಹೇಬೇಲ**

ಆದಿಕಾಂಡ ೪:೧-೧೬, ಇಬ್ರಿಯ ೧೧:೪

## ಕಂಠಪಾಠ ವಚನ ೧

ಮಾರ್ಕ ೧೨: ೩೦ "ನಿನ್ನ ದೇವರಾದ ಸರ್ವೇಶ್ವರನನ್ನು ನಿನ್ನ ಪೂರ್ಣ ಹೃದಯದಿಂದಲೂ ನಿನ್ನ ಪೂರ್ಣ ಆತ್ಮದಿಂದಲೂ ನಿನ್ನ ಪೂರ್ಣ ಮನಸ್ಸಿನಿಂದಲೂ ನಿನ್ನ ಪೂರ್ಣ ಶಕ್ತಿಯಿಂದಲೂ ಪ್ರೀತಿಸು. ಇದೇ ಪ್ರಪ್ರಥಮ ಆಜ್ಞೆ."

## ಕಥೆಯ ಅವಶ್ಯಕತೆ ೧



ಶನಿವಾರ ಮುಂಜಾನೆಯೇ, ಮಾರ್ಕನ ತಂದೆ ಅವನ, ಮಾರ್ಕನು ಮಲಗಿದ್ದ ಕೋಣೆಗೆ ಬಂದು, "ಮಗನೇ ಎದ್ದೇಳು, ನನ್ನ ಕಾರನ್ನು ಒರೆಸು. ನಾನು ಸ್ವಲ್ಪ ಸಮಯದ ನಂತರ ಹೊರಗೆ ಹೋಗಬೇಕು, ಈಗ ನನಗೆ ಸಮಯವಿಲ್ಲ" ಎಂದು ಹೇಳುತ್ತಾ ಅವನನ್ನು ಎಬ್ಬಿಸಿದರು. ಮಾರ್ಕನು ಎದ್ದ ಕೂಡಲೇ ತನ್ನ ಹೋಮ್ ವರ್ಕ್ ಮಾಡಲು ಪ್ರಾರಂಭಿಸಿದನು, ಮನೆಯನ್ನೆಲ್ಲಾ ಶುಚಿಗೊಳಿಸಿದನು ಮತ್ತು ಕಸವನ್ನು ಹೊರಗೆ ಬಿಸಾಡಿದನು. ಅಪ್ಪಾ ಹೇಳಿದ ಕೆಲಸವನ್ನು ಬಿಟ್ಟು ಅವನು ಉಳಿದ ಎಲ್ಲವನ್ನು ಮಾಡಿದನು, ಯಾಕಂದರೆ ಅವನಿಗೆ ಅದು ಇಷ್ಟವಿರಲಿಲ್ಲ. ಇವೆಲ್ಲವನ್ನು ಮಾಡಿದ ನಂತರ ಅವನು ಅಂಗಡಿಗೆ ಹೋಗಿ ತನ್ನ ಅಪ್ಪನಿಗೆ ಒಂದು ಉಡುಗೊರೆಯನ್ನು ತಂದನು. ಅಪ್ಪಾ ಹಿಂದಿರುಗಿ ಬಂದಾಗ, ಮಾರ್ಕನು ಆತನನ್ನು ಬಾಗಿಲ ಬಳಿಯಲ್ಲಿಯೇ ಸಂಧಿಸಿದನು ಮತ್ತು ತಾನು ತಂದಿದ್ದ ಉಡುಗೊರೆಯನ್ನು ಕೊಟ್ಟನು. ಅವನ ಅಪ್ಪ ಅವನಿಗೆ ಕೃತಜ್ಞತೆ ಹೇಳಲಿಲ್ಲ ಅಥವಾ ಅಪ್ಪಿಕೊಳ್ಳಲಿಲ್ಲ, ಬದಲಾಗಿ ತಾನು ಹೇಳಿದ ಕೆಲಸವನ್ನು ಮಗ ಮಾಡಲಿಲ್ಲವೇ ಎಂದು ಬಹಳವಾಗಿ ಬೇಸರಗೊಂಡನು.

## ಮುಖ್ಯ ಪಾಠ ೧

"ನಂಬಿಕೆಯ ವೀರರಿಗೆ" ಮತ್ತೆ ಸ್ವಾಗತ! ನಿನ್ನೆ ದೇವರನ್ನು ನಂಬಬೇಕು ಎಂಬದನ್ನು ಕಲಿತುಕೊಂಡೆವು. ನಾವು ದೇವರನ್ನು ಎಂಬದನ್ನು ತೋರ್ಪಡಿಸುವ ರೀತಿಯಲ್ಲಿ ಜೀವಿಸಬೇಕು. ಇಂದು ನಾವು ದೇವರಲ್ಲಿ ತಮಗಿರುವ ನಂಬಿಕೆಯನ್ನು ತಮ್ಮ ಕಾರ್ಯದ ಮೂಲಕ ತೋರ್ಪಡಿಸಿಕೊಂಡ ಇಬ್ಬರು ಸಹೋದರರ ಬಗ್ಗೆ ನೋಡೋಣ, ಅವರಲ್ಲಿ ಒಬ್ಬನು ಮಾತ್ರ ದೇವರ ಮೆಚ್ಚಿಕೆಗೆ ಪಾತ್ರನಾದನು, ಇನ್ನೊಬ್ಬನು ದೇವರ ಮೆಚ್ಚಿಕೆಗೆ ಪಾತ್ರನಾಗಲಿಲ್ಲ.

ಆದಿಕಾಂಡ ೪ರಲ್ಲಿ, ಆದಾಮ ಮತ್ತು ಹವ್ವಳಿಗೆ ಇಬ್ಬರು ಮಕ್ಕಳಾದರು ಎಂಬದಾಗಿ ನಾವು ನೋಡುತ್ತೇವೆ, ಕಾಯಿನನು ವ್ಯವಸಾಯಗಾರನಾದನು ಮತ್ತು ಹೇಬೇಲನು ಕುರುಬನಾದನು. ಇಬ್ಬರೂ ತಮ್ಮ ಕೆಲಸದ ಪ್ರತಿಫಲವನ್ನು ದೇವರಿಗೆ ಕಾಣಿಕೆಯಾಗಿ ತಂದರು. ಕಾಯಿನನು ತಾನು ಬೆಳೆದ ತರಕಾರಗಳಲ್ಲಿ ಕೆಲವನ್ನು ತಂದನು ಮತ್ತು ಹೇಬೇಲನು "ತನ್ನ ಮಂದೆಯ ಚೊಚ್ಚಲು ಮರಿಯಲ್ಲಿ ಒಂದನ್ನು ತಂದನು." ದೇವರು ಹೇಬೇಲನ ಕಾಣಿಕೆಯನ್ನು ಮೆಚ್ಚಿದನು ಮತ್ತು ಕಾಯಿನನ ಕಾಣಿಕೆಯನ್ನು ಮೆಚ್ಚಲಿಲ್ಲ ಎಂಬದು ಅವರಿಗೆ ಗೊತ್ತಾದಾಗ, ಕಾಯಿನನು ಹೇಬೇಲನ ಮೇಲೆ ಬಹಳವಾಗಿ ಕೋಪಿಸಿಕೊಂಡನು. ದೇವರು ಅವನನ್ನು ಎಚ್ಚರಿಸಿದನು, ದೇವರ ಮಾತನ್ನು ಕೇಳುವ ಬದಲು ಕಾಯಿನನು ಹೇಬೇಲನನ್ನು ಕೊಂದನು!!! ಕಾಯಿನನನ್ನು ಅವನ ಕುಟುಂಬದಿಂದ ಓಡಿಸಿ, ಅವನಿಗೆ ಕಷ್ಟಕರ ಕೆಲಸವನ್ನು ಒಪ್ಪಿಸುವ ಮೂಲಕ ತಮ್ಮ ತಮ್ಮನನ್ನು ಕೊಂದದ್ದಕ್ಕೆ ದೇವರು ಅವನನ್ನು ಶಿಕ್ಷಿಸಿದನು.

ಕೆಲವೊಮ್ಮೆ ನಾವು ದೇವರನ್ನು ಹಿಂಬಾಲಿಸುವಾಗ, ದೇವರಿಗೆ ಮೆಚ್ಚಿಕೆಯಾದದ್ದನ್ನು ಮಾಡುವ ಬದಲು ನಿಯಮಗಳಿಗೆ ಅಧೀನರಾಗಿ ನಡೆದುಕೊಳ್ಳುತ್ತೇವೆ. ಮೇಲೆ ನೋಡಲಾದ ಕಥೆಯಲ್ಲಿನ ಮಾರ್ಕನ ಹಾಗೆ, ದೇವರು ನಮ್ಮಿಂದ ಬಯಸುವ ಕಾರ್ಯವೊಂದನ್ನು ಬಿಟ್ಟು ಆತನನ್ನು ಮೆಚ್ಚಿಸಲು ನಾವು ಉಳಿದೆಲ್ಲವುಗಳನ್ನು ಮಾಡುವವರಾಗಿರುತ್ತೇವೆ. ನಾವು ಕೆಟ್ಟ ಮಾತುಗಳನ್ನಾಡದೆ ಅಥವಾ ದೂಮಪಾನ ಮಾಡದೆ ಎಚ್ಚರದಿಂದಿರುತ್ತೇವೆ, ತಪ್ಪದೆ ಪ್ರತಿವಾರ ಸಭೆಗೆ ಹೋಗುತ್ತೇವೆ, ಉಳಿದ ಕ್ರೈಸ್ತರು ನಮ್ಮ ಬಗ್ಗೆ ಏನಂದುಕೊಳ್ಳುತ್ತಾರೋ ಎಂಬ ಭಯದಿಂದ ಕೆಲವೊಮ್ಮೆ ನಾವು ಇಂಥ ಕಾರ್ಯಗಳನ್ನು ಮಾಡುತ್ತೇವೆ. ನಾವು ದೇವರನ್ನು ಮೆಚ್ಚಿಸಲು ಪ್ರಯತ್ನಿಸದೆ ಪರಸ್ಪರ ಒಬ್ಬರಿಂದೊಬ್ಬರು ಹೊಗಳಿಕೆಯನ್ನು ಅಂಗೀಕರಿಸುವದಾದರೆ ನಮ್ಮಲ್ಲಿ ನಂಬಿಕೆಯಿಲ್ಲ ಎಂಬದನ್ನು ಇದುವೇ ತೋರಿಸುತ್ತದೆ ಎಂದು ಯೇಸು ಕ್ರಿಸ್ತನು ಹೇಳಿದ್ದಾನೆ (ಯೋಹಾನ ೫:೪೪). ಕಾಯಿನನು ಮಾಡುವ ಕಾರ್ಯವನ್ನು ಮೊದಲೇ ತಿಳಿದಿದ್ದ ದೇವರು ಅವನನ್ನು ಎದುರುಗೊಂಡಾಗ, ದೇವರನ್ನು ಮೆಚ್ಚಿಸುವ ಸಲುವಾಗಿ ಅವನು ತನ್ನ ಮನಸ್ಸನ್ನು ಬದಲಾಯಿಸಿಕೊಳ್ಳಬಹುದಾಗಿತ್ತು. ಆದರೆ ಕಾಯಿನನಿಗೆ ತನ್ನ ತಮ್ಮನು ದೇವರ ಮೆಚ್ಚಿಕೆಗೆ ಪಾತ್ರನಾದದ್ದು ಇಷ್ಟವಾಗಲಿಲ್ಲ. ಅವನು ದೇವರಿಗಿಂತ ಹೆಚ್ಚಾಗಿ ತನ್ನ ಘನತೆ ಮತ್ತು ತನ್ನನ್ನು ಮೆಚ್ಚಲಿಲ್ಲವಲ್ಲ ಎಂಬ ಅವಮಾನಕ್ಕೆ ಹೆಚ್ಚಿನ ಆದ್ಯತೆ ಕೊಟ್ಟನು!

ದೇವರು ಮಾರ್ಕ ೧೨:೩೦ರಲ್ಲಿ (ಹಾಗೆಯೇ ಧರ್ಮೋಪದೇಶಕಾಂಡ ೬:೫, ಲೂಕ ೧೦:೨೭ರಲ್ಲಿ) ನನ್ನನ್ನು ಪೂರ್ಣ ಹೃದಯದಿಂದ, ಪೂರ್ಣ ಮನಸ್ಸಿನಿಂದ ಮತ್ತು ಪೂರ್ಣ ಬಲದಿಂದ ಪ್ರೀತಿಸಿರಿ ಎಂದು ನಮಗೆ ಹೇಳಿದ್ದಾನೆ. ಹೇಬೇಲನು ದೇವರಿಗೆ ತನ್ನ ಹೃದಯವನ್ನು ಒಪ್ಪಿಸಿದನು; ಯಾಕಂದರೆ ಅವನು ದೇವರನ್ನು ಬಹಳವಾಗಿ ಪ್ರೀತಿಸಿದ್ದರಿಂದ, ತನ್ನಲ್ಲಿದ್ದವುಗಳಲ್ಲಿ ಉತ್ತಮವಾದದ್ದನ್ನು ದೇವರಿಗೆ ಕೊಟ್ಟನು. ನೀವು ಕಾಯಿನನ ಹಾಗೆ ದೇವರಿಗೆ ಬರಿದಾದ ಕಾಣಿಕೆಯನ್ನು ಕೊಡುತ್ತೀರೋ ಅಥವಾ ಹೇಬೇಲನ ಹಾಗೆ ದೇವರಿಗೆ ನಿಮ್ಮ ಹೃದಯವನ್ನು ಕೊಡುತ್ತೀರೋ?

ನಾನು ದೇವರು ಬಯಸುವದನ್ನು ಆತನಿಗೆ ಕೊಡಲು ಬಯಸುತ್ತೇನೆ: ನನ್ನ ಹೃದಯ!

## ವಿಶ್ಲೇಷಣೆ ೨



ಅಪ್ಪಾ ಏನೂ ಹೇಳಲಿಲ್ಲ ಎಂಬದು ಮಾರ್ಕನಿಗೆ ಅರಿವಾದಾಗ, ಅವನು ದುಃಖದಿಂದ ಕೋಣೆಯೊಳಗೆ ಹೋದನು. ನಾನು ನನ್ನ ಅಪ್ಪನಿಗೆ ಇಷ್ಟೆಲ್ಲಾ ಮಾಡಿದ್ದೇನೆ ಆದರೆ ಅವರು ನನಗೆ ಕೃತಜ್ಞತೆ ಸಹ ಹೇಳಲಿಲ್ಲವೆಂದು ಅವನು ಬೇಸರ ಮಾಡಿಕೊಂಡನು.

## ಚಟುವಟಿಕೆ ೨

**ಪ್ರೀತಿಯ ರೆಸಿಪಿ**

ರೆಸಿಪಿ ಚಿತ್ರದ ಪ್ರತಿಗಳನ್ನು ಮಾಡಿಸಿರಿ, ತರಗತಿಯಲ್ಲಿರುವ ಪ್ರತಿಯೊಂದು ಮಗುವಿಗೆ ಕೊಡಿರಿ. ಮಕ್ಕಳು ಅದಕ್ಕೆ ಬಣ್ಣ ಹಚ್ಚಿ ಮನೆಗೆ ತೆಗೆದುಕೊಂಡು ಹೋಗಬಹುದು.

೨ ಕಪ್ ಒಳ್ಳೆಯ ಕಾರ್ಯಗಳು

೨ ಕಪ್ ವಿಧೇಯತೆ

೪ ಟೇಬಲ್ ಸ್ಪೂನ್ ಒಟ್ಟಾಗಿ ಕಳೆಯುವ ಒಳ್ಳೆಯ ಸಮಯ

೧ ಲೋಟ ನೀರು ಬಾಯಾರಿಕೆ ತಣಿಸಲು

೧ ಟೇಬಲ್ ಸ್ಪೂನ್ ಆದರಣೆ

೧ ಟೇಬಲ್ ಸ್ಪೂನ್ "ಭೂಮಿಗೆ ಉಪ್ಪು"

## ಟೈಮ್ ಲೈನ್ ೨

ಹೇಬೇಲನ ಜೀವಿತದ ಗೆರೆ ಬಿಡಿಸಿರಿ.

ಪ್ರಶ್ನೆ: ಹೇಬೇಲನು ಹುಟ್ಟಿದ್ದಾಗ ಆದಾಮನು ಎಷ್ಟು ವರ್ಷದವನಾಗಿದ್ದನು? ಉತ್ತರ: ನಿಖರವಾದ ಸಮಯ ಗೊತ್ತಿಲ್ಲ, ಆದರೆ ಆದಾಮನಿಗೆ ೫೦ ವರ್ಷವಾಗಿತ್ತು ಎಂದು ಅಂದಾಜಿಸಲಾಗಿದೆ.

ಪ್ರಶ್ನೆ: ಹೇಬೇಲನು ಎಷ್ಟು ವರ್ಷ ಬದುಕಿದನು? ಉತ್ತರ: ನಿಖರವಾದ ಸಮಯ ಗೊತ್ತಿಲ್ಲ, ಆದರೆ ಅವನು ೫೦ ವರ್ಷ ಬದುಕಿದ್ದನು ಎಂದು ಅಂದಾಜಿಸಲಾಗಿದೆ

## ಒಗಟಿನ ಉತ್ತರಗಳು ೨

೧. ಹೇಬೇಲನು ಆದಾಮ ಮತ್ತು ಹವ್ವಳ ಎರಡನೇ ಮಗನಾಗಿದ್ದನು.
೨. ಕಾಯಿನನು ಹೇಬೇಲನಿಗಿಂತ ಹೆಚ್ಚಾಗಿ ಕುರಿಗಳನ್ನು ನೋಡಿಕೊಳ್ಳುತ್ತಿದ್ದನು.
೩. ದೇವರು ಕಾಯಿನ ಮತ್ತು ಹೇಬೇಲನ ಕಾಣಿಕೆಯನ್ನು ಮೆಚ್ಚಿದನು.
೪. ಕಾಯಿನನು ತನ್ನ ತಮ್ಮನ ಮೇಲೆ ಕೋಪಿಸಿಕೊಂಡು ಅವನನ್ನು ಕೊಂದನು.
೫. ಹೇಬೇಲನು ಸತ್ತದ್ದು ದೇವರಿಗೆ ಗೊತ್ತಾಗಲಿಲ್ಲ.

| | | | | | | | | | |
|---|---|---|---|---|---|---|---|---|---|
| ಸ | ಹೇ | ಬೇ | ಪ್ರ | ಸ | ನ್ನ | ತೆ | ಮಂ | ಲ | ಯು |
| ವಾ | ಹೋ | ಕಾ | ಧ | ಶ | ಹೋ | ಹೃ | ವಾ | ಯ | ಳ |
| ಹ್ | ಮಿ | ನು | ಝು | ಕೊ | ಬ | ದ | ಹೊ | ಕ್ | ಅ |
| ರ | ಗೆ | ಬ | ಹೊ | ಡು | ಇ | ಯ | ರ | ಕ್ | ಥ |
| ಯು | ಜ್ | ನ್ನ | ರ್ | ವ | ಕ | ತ್ತಾ | ಗೆ | ನು | ವಾ |
| ತೆ | ರೆ | ಯು | ವ | ದು | ರ್ತ | ತೆ | ನ | ಹೊ | ಸ |
| ಕಾ | ಕೋ | ಪ | ಗೊಂ | ಡ | ನು | ಯಿ | ರ | ಪ | ಠ |
| ಪಾ | ಪ | ಲ | ಋ | ಫ | ಕಾ | ಹೇ | ನ್ | ಫ | ತ |
| ಗೆ | ದ್ದು | ಮಂ | ಹೊ | ನೆ | ಪಾ | ಹೇ | ಬೇ | ಲ | ಪ್ಪು |
| ಯು | ಧ | ದೆ | ಕೆ | ಲ | ಸ | ತೆ | ಹಾ | ಕಿ | ರಿ |



## ಲವ್ ರೆಸಿಪಿ

೨ ರೀತಿಯ ಕರ್ಮಗಳ ಕಪ್ಗಳು

೨ ವಿಧೇಯತೆ ಕಪ್ಗಳು

೪ ಒಟ್ಟಿಗೆ ಗುಣಮಟ್ಟದ ಸಮಯ ಟೇಬಲ್ಸ್ಪೂನ್

೧ ಬಾಯಾರಿದ ನೀರಿನ ಗಾಜಿನ

೧ ಪ್ರೀತಿಯ ಚಮಚ

೧ ಟೇಬಲ್ಸ್ಪೂನ್ ಆಫ್

"ಭೂಮಿಯ ಉಪ್ಪು"



## ಸರಿ ಅಥವಾ ತಪ್ಪು

ಸರಿಯಾಗಿದ್ದಲ್ಲಿ ಈ 👍 ಗುರುತು ಮತ್ತು ತಪ್ಪಾಗಿದ್ದಲ್ಲಿ ಈ 👎 ಗುರುತು ಹಾಕಿರಿ.


೧. ಹೇಬೆಲನು ಆದಾಮ ಮತ್ತು ಹವ್ವಳ ಎರಡನೆಯ ಮಗನಾಗಿದ್ದನು

೨. ಕಾಯಿನನು ಹೇಬೆಲನಿಗಿಂತ ಹೆಚ್ಚಾಗಿ ಕುರಿ ಕಾಯುವದರಲ್ಲಿ ಆಸಕ್ತನಾಗಿದ್ದನು.

೩. ದೇವರು ಕಾಯಿನ ಮತ್ತು ಹೇಬೆಲನ ಕಾಣಿಕೆಯನ್ನು ಮೆಚ್ಚಿಕೊಂಡನು.

೪. ಕಾಯಿನನು ತನ್ನ ತಮ್ಮನ ಮೇಲೆ ಕೋಪಿಸಿಕೊಂಡನು ಮತ್ತು ಅವನನ್ನು ಕೊಂದನು.

೫. ಹೇಬೆಲನು ಸತ್ತದ್ದು ದೇವರಿಗೆ ಗೊತ್ತಾಗಲಿಲ್ಲ.



## ಪ್ರಶ್ನೆಗಳು ಮತ್ತು ಉತ್ತರಗಳು ೨

೧. ಯಾವ ಪರಿಸ್ಥಿತಿಗಳಲ್ಲಿ ದೇವರನ್ನು ವಂಚಿಸುವ ಸಾಧ್ಯತೆಗಳು ಎದುರಾಗುತ್ತವೆ? ("ಯಾವ ಪರಿಸ್ಥಿತಿಗಳೂ ಇಲ್ಲ" ಎಂಬದು ಸರಿಯಾದ ಉತ್ತರವಾಗಿದೆಯಾದರೂ, ವಿವಿಧ ಪರಿಸ್ಥಿತಿಗಳನ್ನು ಹೇಳಲು ಪ್ರಯತ್ನಿಸಿರಿ).


೨. ಒಳ್ಳೆಯವರೆಲ್ಲರೂ ಪರಲೋಕಕ್ಕೆ ಹೋಗುತ್ತಾರೆ, ಅಲ್ಲವೇ? (ಇಲ್ಲ. "ಒಳ್ಳೆಯವರಾಗಿರುವದು" ಮಾತ್ರವೇ ನಮ್ಮನ್ನು ಪರಲೋಕಕ್ಕೆ ಸೇರಿಸುವದಿಲ್ಲ. ನೂತನ ಸೃಷ್ಟಿಯಾಗುವದು ಮಾತ್ರವೇ ನಮ್ಮನ್ನು ಪರಲೋಕಕ್ಕೆ ಸೇರಿಸುತ್ತದೆ).

೩. ನಾನು ಕ್ರಿಸ್ತನಿಗಾಗಿ ಮೂರ್ಖನಾಗಬೇಕೇ? (ಯೇಸು ಕ್ರಿಸ್ತನನ್ನು ಹಿಂಬಾಲಿಸುವ ವರ್ಗದ ಜನರಲ್ಲಿ ಬುದ್ಧಿವಂತರು ಮತ್ತು ಮೂರ್ಖರು ಇರುತ್ತಾರೆ).

## ಆಟ ೨

**ಟಾರ್ಗೆಟ್ ಶೂಟಿಂಗ್ (ಗುರಿಯಿಟ್ಟು ಹೊಡೆಯುವದು)**

ಪೋಸ್ಟರ್ ಬೋರ್ಡ್ ಮೇಲಿರುವ ಮಗುವಿನ ಚಿತ್ರವನ್ನು ಕಾಪಿ ಮಾಡಿರಿ. ಚಿತ್ರದಲ್ಲಿ ಶೇಡ್ ಆಗಿರುವ ಭಾಗಗಳನ್ನು ಕತ್ತರಿಸಿದರೆ ಗುರಿಯಿಟ್ಟು ಹೊಡೆಯಲು ಅವಕಾಶ ದೊರೆಯುತ್ತದೆ.



- ಒಂದು ಹಾಳೆಯನ್ನು ಪೇಪರ್ ಚೆಂಡನ್ನು ಮಾಡಿ ಮಕ್ಕಳಿಗೆ ಕೊಡಿರಿ.
- ಅವರು ಹೃದಯದ ಸ್ಥಳದಲ್ಲಿರುವ ರಂಧ್ರದೊಳಗೆ ಚೆಂಡನ್ನು ಹಾಕಬೇಕೆಂದು ಹೇಳಿರಿ. ಅಲ್ಲಿ ಬಿಟ್ಟು ಬೇರೆ ಸ್ಥಳಕ್ಕೆ ಬಿದ್ದರೆ ಅದು ಲೆಕ್ಕಕ್ಕೆ ಬರುವದಿಲ್ಲ ಎಂದು ಹೇಳಿರಿ.
- ಚೆಂಡು ಹೃದಯ ಭಾಗವನ್ನು ಪ್ರವೇಶಿಸುವಾಗ, ಮಗುವಿಗೆ ೧ ಅಂಕ ಸಿಗುತ್ತದೆ. ಯಾರು ಹೆಚ್ಚು ಅಂಕಗಳಿಸುತ್ತಾರೆ ಅವರು ಗೆಲ್ಲುತ್ತಾರೆ.

## ಹಾಜರಾತಿ ೨




ತರಗತಿಗೆ ಹಾಜರಾದದ್ದಕ್ಕೆ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡುವ ಸಲುವಾಗಿ ಮತ್ತೊಂದು ಕಾರ್ಡ್ ಪಡೆಯಬೇಕಾದರೆ ಮುಂದಿನ ವಾರ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:

**ಹೇಬೇಲ**

## ಹೋಮ್ ವರ್ಕ್ ೨

ಅಸೈನ್ಮೆಂಟ್

ಈ ವಾರ ನೀವು ನಿಮ್ಮ ಹೃದಯಪೂರ್ವಕವಾಗಿ ಕೊಡುವದೇ ನಿಮ್ಮ ಆಸೈನ್ಮೆಂಟ್ ಆಗಿದೆ. ನಾವು ಇತರರಿಗೆ ಏನೇ ಮಾಡಿದರೂ ಅದನ್ನು ಯೇಸು ಕ್ರಿಸ್ತನಿಗೆ ಮಾಡಿದ ಹಾಗಾಗುತ್ತದೆ ಎಂದು ಸತ್ಯವೇದವು ಹೇಳುತ್ತದೆ (ಮತ್ತಾಯ ೨೫:೪೦), ಆದ್ದರಿಂದ ಯಾರಿಗಾದರೂ ಸಹಾಯ ಮಾಡುವ ಅಥವಾ ಅವಶ್ಯಕತೆಯಲ್ಲಿರುವವ ಕೊರತೆಯನ್ನು ಪೂರೈಸಲು ದೊರೆಯುವ ಅವಕಾಶವನ್ನು ಎದುರುನೋಡಿರಿ. ನಿಮ್ಮ ತಂದೆತಾಯಿಗಳ ಅನುಮತಿ ಪಡೆದು ಕಾರ್ಯಗಳನ್ನು ಮಾಡಿರಿ. ಅಪಾಯಕಾರಿಯಾದ ಯಾವ ಕಾರ್ಯವನ್ನೂ ಮಾಡಬೇಡಿರಿ. ಏನನ್ನಾದರೂ ಪಡೆಯಬೇಕೆಂಬ ಉದ್ದೇಶದಿಂದ ಯಾವುದನ್ನು ಮಾಡಬೇಡಿರಿ.

**ಓದಿರಿ**

ದಿನ ೧: ಆದಿಕಾಂಡ ೫:೧-೫

ದಿನ ೨: ಆದಿಕಾಂಡ ೫:೬-೧೭

ದಿನ ೩: ಆದಿಕಾಂಡ ೫:೧೮-೨೪

ದಿನ ೪: ಆದಿಕಾಂಡ ೫:೨೫-೩೨

ದಿನ ೫: ಆದಿಕಾಂಡ ೬:೧-೮

# ೩. ದೇವರನ್ನು ಮೆಚ್ಚಿಸಿರಿ



**ವೀರ: ಹನೋಕ**

ಆದಿಕಾಂಡ ೫:೨೧-೨೪, ಇಬ್ರಿಯ ೧೧:೫-೬

## ಕಂಠಪಾಠ ವಚನ ೩

ಯೊವಾನ್ನ ೧೪:೨೩ "ಆಗ ಯೇಸು, "ನನ್ನನ್ನು ಪ್ರೀತಿಸುವವನು ನನ್ನ ಮಾತನ್ನು ಕೈಗೊಂಡು ನಡೆಯುವನು. ಅವನನ್ನು ನನ್ನ ಪಿತನೂ ಪ್ರೀತಿಸುವರು ಮತ್ತು ನಾವಿಬ್ಬರೂ ಅವನ ಬಳಿ ಬಂದು ಅವನಲ್ಲಿ ನೆಲೆಸುವೆವು."

## ಕಥೆಯ ಅವಶ್ಯಕತೆ ೩



ರೂತಳ ಸ್ನೇಹಿತೆಗೆ ಯಾವುದೋ ಸಮಸ್ಯೆ ಎದುರಾದದ್ದರಿಂದ ಪರಿಹಾರಕ್ಕಾಗಿ ಅವಳು ರೂತಳ ಬಳಿಗೆ ಬಂದಳು. ಆಕೆ ಹೇಳಿದ್ದೇನೆಂದರೆ, "ನನ್ನ ತಂದೆತಾಯಿಗಳು ನನ್ನನ್ನು ನಮ್ಮ ಬಂಧುಗಳ ಮನೆಗೆ ಒಬ್ಬಳೇ ಹೋಗಲು ಬಿಡುವದಿಲ್ಲ, ನಾನಾದರೋ ಅವರೊಂದಿಗೆ ದೇವರ ವಾಕ್ಯ ಹಂಚಿಕೊಳ್ಳಲು ಹೋಗಬೇಕೆಂದಿದ್ದೇನೆ. ಅವರ ಅನುಮತಿಯಿಲ್ಲದೆ ಹೋಗಬೇಕೋ ಬೇಡವೋ ಎಂದು ನನಗೆ ಗೊತ್ತಾಗುತ್ತಿಲ್ಲ. ನನಗೇನೋ ಅನುಮತಿ ಪಡೆಯಬೇಕೆನಿಸುತ್ತದೆ ಆದರೆ ಅದು ದೇವರಿಗೆ ಮೆಚ್ಚಿಕೆಯಾದದ್ದು ಏನು ಎಂಬದು ನನಗೆ ಗೊತ್ತಾಗುತ್ತಿಲ್ಲ. ಈಗ ನಾನೇನು ಮಾಡಬೇಕು? ಏನು ಮಾಡಬೇಕೆಂದು ನಾನು ಸಾಮಾಜಿಕ ಜಾಲತಾಣದಲ್ಲಿಯೂ ವಿಚಾರಿಸಬೇಕೆಂದಿದ್ದೇನೆ. ನಿಮಗೆ ಯಾವುದು ಸರಿ ಅನ್ನಿಸುತ್ತದೆಯೋ ಅದನ್ನು ಮಾಡಿರಿ ಎಂಬದಾಗಿ ಹೇಳುವ ಒಂದು ಚಿತ್ರವನ್ನು ನಾನು ನೋಡಿದೆನು, ಆದ್ದರಿಂದ ಅವರ ಬಳಿಗೆ ಹೋಗುವುದೇ ನನಗೆ ಉತ್ತಮವೆನಿಸುತ್ತದೆ."

## ಮುಖ್ಯ ಪಾಠ ೩

ನಂಬಿಕೆಯ ವೀರರಿಗೆ ಮತ್ತೆ ಸ್ವಾಗತ! ನಾವು ದೇವರನ್ನು ನಂಬುವದು ಮತ್ತು ಪೂರ್ಣ ಹೃದಯದಿಂದ ಕೊಡುವದನ್ನು ಕಲಿತುಕೊಂಡಿದ್ದೇವೆ. ನಾವು ಈಗ ಒಂದು ಹೆಜ್ಜೆ ಮುಂದೆ ಹೋಗುವವರಾಗಿದ್ದೇವೆ. ನೀವು ಎಂದಾದರು ನಿಮ್ಮ ಶಿಕ್ಷಕಿ, ನಿಮ್ಮ ತಂದೆ ಅಥವಾ ತಾಯಿಯನ್ನು ಮೆಚ್ಚಿಸಿದ್ದೀರೋ? ನೀವು ಒಳ್ಳೇ ಕೆಲಸ ಮಾಡಿದ್ದೀರಿ ಎಂದು ಯಾರಾದರು ನಿಮಗೆ ಹೇಳುವಾಗ, ಚೆನ್ನಾಗಿ ಅನ್ನಿಸುತ್ತದೆಯಲ್ಲವೇ? ನಿಮ್ಮ ಮುಖದಲ್ಲಿ ನಗು ಕಾಣಿಸುವವರೆಗೆ ಆ ಒಳ್ಳೆಯ ಭಾವನೆ ನಿಮ್ಮೊಳಗೆ ಉಬ್ಬಿಕೊಳ್ಳುತ್ತಿರುತ್ತದೆ. ದೇವರನ್ನು ಮೆಚ್ಚಿಸಿದ ವ್ಯಕ್ತಿಯ ಬಗ್ಗೆ ಕಲಿತುಕೊಳ್ಳೋಣ ಮತ್ತು ನಾವು ಸಹ ದೇವರನ್ನು ಹೇಗೆ ಮೆಚ್ಚಿಸಬಹುದು ಎಂಬದನ್ನು ಕಲಿತುಕೊಳ್ಳೋಣ.

ಅನೇಕಾನೇಕ ವರ್ಷಗಳ ಹಿಂದೆ ಹನೋಕ ಎಂಬ ವ್ಯಕ್ತಿ ಇದ್ದನು. ಅವನ ಬಗ್ಗೆ ನಮಗೆ ಹೆಚ್ಚಿನ ಮಾಹಿತಿ ಏನೂ ಇಲ್ಲ, ಆದರೆ ನಮಗೆ ಗೊತ್ತಿರುವ ಸಂಗತಿ ಮಾತ್ರ ಅತ್ಯಂತ ವಿಶೇಷವಾದದ್ದಾಗಿದೆ. "ಹನೋಕನು ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಳ್ಳುತ್ತಾ ಇರುವಾಗ ದೇವರು ಅವನನ್ನು ಕರೆದುಕೊಂಡದ್ದರಿಂದ ಕಾಣದೆ ಹೋದನು," ಆದಿಕಾಂಡ ೫:೨೪. ದೇವರಿಗೆ ಅವನು ಬಹಳ ಇಷ್ಟವಾದ್ದರಿಂದ ಅವನನ್ನು ಕರೆದುಕೊಂಡನು! ಎಂಥಾ ವಿಶೇಷ! ಒಂದುದಿನ ನಾವೆಲ್ಲರೂ ಆತನನ್ನು ಪರಲೋಕದಲ್ಲಿ ಸಂಧಿಸುತ್ತೇವೆ ಮತ್ತು ನಾವೆಲ್ಲರೂ ಆತನೊಂದಿಗೆ ಸಮಯ ಕಳೆಯಬಹುದು. ಇಬ್ರಿಯ ೧೧:೫-೬ರಲ್ಲಿ ನಾವು ಓದುವದೇನೆಂದರೆ "ಅವನು ಒಯ್ಯಲ್ಪಡುವದಕ್ಕಿಂತ ಮೊದಲು ದೇವರಿಗೆ ಮೆಚ್ಚಿಕೆಯುಳ್ಳವನಾಗಿದ್ದನೆಂದು ಸಾಕ್ಷಿ ಉಂಟು." ದೇವರನ್ನೇ ನೋಡುವ ಅನುಭವ ಅವನಿಗೆ ಹೇಗಿದ್ದಿರಬಹುದೆಂದು ಊಹಿಸಿಕೊಳ್ಳಿರಿ. ಹನೋಕನಿಗೆ ಯಾರಿಗೂ ಆಗದಷ್ಟು ಸಂತೋಷವಾಗಿರಬಹುದು!

ಹನೋಕನ ಹಾಗೆ ನಾವು ದೇವರ ವಾಕ್ಯಗಳನ್ನು ನಂಬಿ, ಆತನೊಂದಿಗೆ ಜೀವಿಸುವಾಗ ಆತನ ಮೆಚ್ಚಿಕೆಗೆ ಪಾತ್ರರಾಗುತ್ತೇವೆ. ಇಬ್ರಿಯ ೧೧:೬ ಹೇಳುವದೇನೆಂದರೆ, "ಆದರೆ ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದು ಅಸಾಧ್ಯ; ದೇವರ ಬಳಿಗೆ ಬರುವವನು ದೇವರು ಇದ್ದಾನೆ, ಮತ್ತು ತನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವದು ಅವಶ್ಯ." ನಾವು ದೇವರನ್ನು ನಂಬುತ್ತೇವೆ ಮತ್ತು ಸತ್ಯವೇದದಲ್ಲಿರುವ ಆತನ ವಾಕ್ಯದನುಸಾರವಾಗಿ ಆತನನ್ನು ನಂಬುತ್ತೇವೆ ಹಾಗೂ ಆತನನ್ನು ಹುಡುಕುತ್ತೇವೆ.

ಇದಕ್ಕೂ ಮೊದಲು ಏನು ಮಾಡಬೇಕೆಂದು ತಿಳಿದುಕೊಳ್ಳಲು ಬಂದ ರೂತಳ ಸ್ನೇಹಿತೆಯ ಬಗ್ಗೆ ನಾವು ಕೇಳಿಸಿಕೊಂಡಿದ್ದೇವೆ. ನಿಮ್ಮ ತಂದೆತಾಯಿಗಳಿಗೆ ವಿಧೇಯರಾಗಿರಿ, ಅವರ ಮಾತುಗಳನ್ನು ಕೇಳಿರಿ ಎಂದು ಸತ್ಯವೇದವು ಹೇಳುತ್ತದೆ, ಈಗ ಆಕೆ ಅದನ್ನೇ ಮಾಡಬೇಕು.

ಸತ್ಯವೇದವು ದೇವರು ನಮಗೆ ಕೊಟ್ಟಿರುವ ಆತನ ವಾಕ್ಯವಾಗಿದೆ. ಸತ್ಯವೇದವು ಯಾವುದೇ ದೋಷವಿಲ್ಲದ ದೇವರ ವಾಕ್ಯವಾಗಿದೆ ಎಂದು ನಾವು ನಂಬುತ್ತೇವೆ (ಅದರಲ್ಲಿ ಯಾವುದೇ ತಪ್ಪುಗಳಿಲ್ಲ). ಆದ್ದರಿಂದ ನಾವು ಅದನ್ನು ಓದಬಹುದು ಮತ್ತು ಅದರಲ್ಲಿ ಬರೆದಿರುವವುಗಳು ಸತ್ಯ ಎಂದು ನಂಬಬಹುದು. ಇಷ್ಟು ಮಾತ್ರವಲ್ಲ, ಸತ್ಯವೇದವು ಜೀವಿಸುವ ದೇವರ ವಾಕ್ಯವಾಗಿದೆ!!

ಇದು ಹೇಗೆ ಸಜೀವವಾದದ್ದಾಗಿದೆ?? ದೇವರ ವಾಕ್ಯವು ಸಜೀವವಾದದ್ದು ಮತ್ತು ಕಾರ್ಯಸಾಧಕವಾದದ್ದು (ಇಬ್ರಿಯ ೪:೧೨). ನೀವು ಎಂದಾದರೂ ಸತ್ಯವೇದವನ್ನು ಓದುವಾಗ ಆ ದಿನಕ್ಕೆ ಬೇಕಾದ ಪದಗಳನ್ನು ಮಾತ್ರವೇ ಗ್ರಹಿಸಿಕೊಂಡು ಉಳಿದವುಗಳನ್ನು ಹಾಗೆಯೇ ಬಿಟ್ಟುಬಿಟ್ಟಿದ್ದೀರೋ? ಲೋಕದಾದ್ಯಂತವಿರುವ ಕ್ರೈಸ್ತರು ಸಹಜವಾಗಿ ಈ ರೀತಿ ಮಾಡುತ್ತಾರೆ. ಯೋಹಾನ ೧:೧೪ ಹೇಳುವದೇನೆಂದರೆ ಯೇಸು ಕ್ರಿಸ್ತನು ಬಂದಾಗ, ಸತ್ಯವೇದವೇ ಮಾನವನಾಗಿ ಬಂದು ನಮ್ಮ ಮಧ್ಯದಲ್ಲಿ ವಾಸ ಮಾಡಿದನು! ನಾವು ಸತ್ಯವೇದವನ್ನು ಓದುವಾಗ ಮತ್ತು ನಂಬುವಾಗ, ಹನೋಕನ ಹಾಗೆ ದೇವರೊಂದಿಗೆ ನಡೆಯುವವರಾಗಿರುತ್ತೇವೆ!

ನಾನು ದೇವರನ್ನು ಮೆಚ್ಚಿಸಬೇಕು ಆದ್ದರಿಂದ ಸತ್ಯವೇದವನ್ನು ನಂಬುತ್ತೇನೆ, ಯಾಕಂದರೆ ಅದರಲ್ಲಿ ಯಾವುದೇ ತಪ್ಪುಗಳಿಲ್ಲ ಮತ್ತು ನನ್ನ ಕ್ರೈಸ್ತೀಯ ಜೀವಿತಕ್ಕೆ ಬೇಕಾದ ಸೂಚನೆಗಳನ್ನು ಸತ್ಯವೇದವು ನನಗೆ ಕೊಡುತ್ತದೆ.

## ವಿಶ್ಲೇಷಣೆ ೩



ರೂತಳು ಹೇಳಿದ್ದೇನೆಂದರೆ, "ಸ್ನೇಹಿತೇ ನೋಡು, ನೀವು ನಿಮ್ಮ ತಂದೆತಾಯಿಗಳನ್ನು ಸನ್ಮಾನಿಸಬೇಕು, ಅವರಿಗೆ ವಿಧೇಯರಾಗಬೇಕು ಎಂದು ಸತ್ಯವೇದವು ಹೇಳುತ್ತದೆ. ನೀವು ನಿಮ್ಮ ಅಧಿಕಾರಿಗಳಿಗೆ ವಿಧೇಯರಾಗಬೇಕು ಎಂದೂ ಹೇಳುತ್ತದೆ. ದೇವರ ಚಿತ್ತ ತಿಳಿದುಕೊಳ್ಳಬೇಕೆಂದರೆ ಸತ್ಯವೇದವನ್ನು ಓದಬೇಕೇ ಹೊರತು ಸಾಮಾಜಿಕ ಜಾಲತಾಣ ಅಥವಾ ನನ್ನನ್ನು ವಿಚಾರಿಸುವದು ಸರಿಯಲ್ಲ. ಯಾಕಂದರೆ ದೇವರು ಸತ್ಯವೇದದ ಮೂಲಕ ನಾವೇನು ಮಾಡಬೇಕೆಂದು ನಮಗೆ ತಿಳಿಸುತ್ತಾನೆ."

## ಚಟುವಟಿಕೆ ೩

### ನಾಯಕನನ್ನು ಹಿಂಬಾಲಿಸಿರಿ



ಈ ಚಟುವಟಿಕೆಯಲ್ಲಿ, ಮಕ್ಕಳು ಜೋಡಿಗಳಾಗಿ ಭಾಗವಹಿಸಬೇಕು. ಹನೋಕನು ದೇವರೊಂದಿಗೆ ನಡೆದನು ಎಂದು ಸತ್ಯವೇದವು ಹೇಳುತ್ತದೆ, ಮತ್ತು ದೇವರು ಹನೋಕನೊಂದಿಗೆ ನಡೆದನು ಎಂಬದಾಗಿ ಹೇಳುವದಕ್ಕೆ ಇದು ವಿರುದ್ಧವಾದದ್ದಾಗಿದೆ. ಒಂದುವೇಳೆ ನೀವು ಬೇರೆ ಯಾರೊಂದಿಗಾದರೂ ನಡೆಯಲು ಬಯಸುವದಾದರೆ, ಅವರನ್ನು ಹಿಂಬಾಲಿಸಬೇಕು, ಮುಂದಾಗಿ ಹೋಗಬೇಕು ಅಥವಾ ಅವರು ತಿರುಗಿಕೊಳ್ಳುವಾಗ ನೀವು


ತಿರುಗಿಕೊಳ್ಳಬೇಕು. ಜೋಡಿಯಾಗಿರುವ ಮಕ್ಕಳು ಕೆಲವು ನಿಮಿಷಗಳ ಕಾಲ ಇತರರನ್ನು ಮುನ್ನಡೆಸಲಿ ನಂತರ ಬೇರೊಂದು ಜೋಡಿ ಮುನ್ನಡೆಸಲಿ. ಕೆಲವೊಮ್ಮೆ ಯಾರನ್ನೋ ಹಿಂಬಾಲಿಸುವದು ಸುಲಭವಾಗಿರುವದಿಲ್ಲ ಮತ್ತು ನೀವು ಎಲ್ಲವುಗಳಿಗೆ ಎಚ್ಚರವಾಗಿರಬೇಕು ಹಾಗೂ ಸಿದ್ದರಾಗಿರಬೇಕು ಎಂಬದನ್ನು ಮನವರಿಕೆ ಮಾಡಿಕೊಳ್ಳಿರಿ.

## ಟೈಮ್ ಲೈನ್ ೩


ಹನೋಕರ ಗೆರೆಯನ್ನು ಎಳೆಯಿರಿ.

ಪ್ರಶ್ನೆ: ಹನೋಕನು ಹುಟ್ಟಿದಾಗ ಆದಾಮನು ಎಷ್ಟು ವರ್ಷದವನಾಗಿದ್ದನು? ಉತ್ತರ: ೬೨೨ ವರ್ಷದವನಾಗಿದ್ದನು
ಪ್ರಶ್ನೆ: ಹನೋಕನು ಎಷ್ಟು ವರ್ಷ ಬದುಕಿದನು? ಉತ್ತರ: ೩೬೫ ವರ್ಷಗಳು

## ಒಗಟಿನ ಉತ್ತರಗಳು ೩



| | | | | | | | | | |
|---|---|---|---|---|---|---|---|---|---|
| ಧ | ಮ | ನು | ನ | ಲ | ಮೆ | ರ | ಲೋ | ಕ | ಡ |
| ನಂ | ಬಿ | ಕೆ | ಣ್ಣ | ಡೆ | ಚ್ಚಿ | ದಾ | ತ್ | ಣ್ಣ | ಹ |
| ತ | ಸಾ | ನು | ತೆ | ಕ್ಷಿ | ದ | ಕೊಂ | ಕ್ಷಿ | ರೆ | ವಿ |
| ದಾ | ಕ್ಷಿ | ನೋ | ಗೆ | ವೊ | ನು | ನು | ಷ | ಯಾ | ನು |
| ದೇ | ವ | ರು | ದು | ಡ | ತೆ | ಹು | ಟ್ಟಿ | ದ | ನು |
| ಆ | ರ | ಷ | ಕೊಂ | ನು | ಕ್ | ಫಾ | ಸಿ | ನು | ಯ್ಯು |
| ಮ್ | ದಾ | ದು | ಡ | ನೀ | ರು | ವಿ | ಝು | ಧ | ರಿ |
| ಲ | ಡೆ | ಮ | ನು | ಥ್ | ಜೀ | ಕೊಂ | ಕ | ನ | ಭಿ |
| ಪ | ಮ | ಣ್ಣ | ಫ | ನೋ | ಹ | ನೋ | ರ | ಇ | ದು |
| ಳ | ಮೆ | ತು | ಷ | ಲ | ಹ | ನು | ಮ | ಬ್ | ಯ |
| ಕ್ಷಿ | ನು | ಕೊಂ | ನೀ | ಕ್ಷಿ | ಕೊಂ | ದಾ | ಕ್ಷಿ | ಶ | ವ್ |



## ಪ್ರಶ್ನೆಗಳು ಮತ್ತು ಉತ್ತರಗಳು ೩

೧. ದೇವರೇ ಸತ್ಯವೇದವನ್ನು ಬರೆದಿದ್ದಾನೆ ಎಂಬದು ಸತ್ಯವೇ? (ದೇವರು ಬರೆಯಲಿಲ್ಲ ಬದಲಾಗಿ ಬರೆದವರಿಗೆ ಆತನು ಆಲೋಚನೆಗಳನ್ನು ಕೊಟ್ಟಿದ್ದಾನೆ. ಸತ್ಯವೇದವನ್ನು ಸುಮಾರು ೪೦ ಜನರು ೧೫೦೦ ವರ್ಷಗಳ ಅವಧಿಯಲ್ಲಿ ಬರೆದಿದ್ದಾರೆ).


೨. ನಾನು ಯಾಕೆ ಪರಿಪೂರ್ಣನಾಗಿಲ್ಲ? (ನಾವು ನಮ್ಮ ಜೀವಿತವನ್ನು ಹೇಗೆ ಜೀವಿಸಬೇಕೆಂದು ದೇವರು ಬಯಸಿದನು ಎಂಬದರ ಬಗ್ಗೆ ಮಾತನಾಡಿರಿ, ಆದ್ದರಿಂದಲೇ ಆತನು ನಮ್ಮನ್ನು ರೋಬೋಟ್ ಗಳಾಗಿ ಉಂಟು ಮಾಡಲಿಲ್ಲ. ಮಾನವರೆಲ್ಲರೂ ತಪ್ಪು ಮಾಡುತ್ತಾರೆ, ಆದರೆ ದೇವರು ತನ್ನನ್ನು ಹಿಂಬಾಲಿಸುವ ಎಲ್ಲರಿಗೂ ಸಹಾಯ ಮಾಡುತ್ತಾನೆ. ಹಾಗೆಯೇ ಸ್ವಘನತೆ, ಪ್ರೀತಿ ಮತ್ತು ದೇವರ ಕೃಪೆಯ ಬಗ್ಗೆ ಮಾತನಾಡಿರಿ).

೩. ನಾವು ದೇವರನ್ನು ಮೆಚ್ಚಿಸುವದು ಹೇಗೆ? (ನಮ್ಮ ಹೃದಯವನ್ನು ಆತನಿಗೆ ಒಪ್ಪಿಸುವದು, ಆತನಿಗೆ ವಿಧೇಯರಾಗುವದು ಮತ್ತು ಆತನೊಂದಿಗೆ ಸಮಯ ಕಳೆಯುವದು).

## ಆಟ ೩

### ಪಂಚಗ್ರಂಥ ರಿಲೇ

ಐದು ಹಾಳೆಗಳ ಮೇಲೆ, ಸತ್ಯವೇದದ ಮೊದಲ ಐದು ಪುಸ್ತಕಗಳಲ್ಲಿ ಯಾವುದಾದರು ಒಂದರ ಹೆಸರನ್ನು ಮತ್ತು ಕೆಳಗೆ ಕೊಡಲಾಗಿರುವ ಘಟನೆಯ ಅನುರೂಪವಾದ ಚಿತ್ರವನ್ನು ಬರೆಯಿರಿ.
ಮತ್ತೊಂದು ಹಾಳೆಯ ಮೇಲೆ "ಪಂಚಗ್ರಂಥ" ಎಂದು ಬರೆಯಿರಿ. ಒಂದು ರಿಬ್ಬನ್ ತುಂಡು ಅಥವಾ ಕುರ್ಚಿಯಿಟ್ಟು ಅದನ್ನು ಪ್ರಾರಂಭದ ಗೆರೆ ಎಂಬದಾಗಿ ಗುರುತಿಸಿರಿ ಮತ್ತು "ಪಂಚಗ್ರಂಥ" ಹಾಳೆಯನ್ನು ಗುರಿ ಎಂದು ನಿಗದಿಪಡಿಸಿರಿ.



ಸತ್ಯವೇದದ ಐದು ಪುಸ್ತಕಗಳ ಹಾಳೆಯನ್ನು ವಿವಿಧ ಸ್ಥಳಗಳಲ್ಲಿ ಇಡಿರಿ, ಸ್ಥಳಾವಕಾಶದ ಮೇರೆಗೆ ಸಾಧ್ಯವಾದಷ್ಟು ನಿಮ್ಮ ಗುರಿಯಿಂದ ದೂರ ಇಡಿರಿ.

### ಕಾರ್ಯಗಳು

* ಆದಿಕಾಂಡ: ಕಾಲುಗಳನ್ನು ಚಾಚಿರಿ.
* ವಿಮೋಚನಕಾಂಡ: ಕುಳಿತುಕೊಳ್ಳಿರಿ.
* ಯಾಜಕಕಾಂಡ: ಜಿಗಿಯಿರಿ.
* ಅರಣ್ಯಕಾಂಡ: ಸುತ್ತಿರಿ.
* ಧರ್ಮೋಪದೇಶಕಾಂಡ: ಒಂದು ಕಾಲಿನಲ್ಲಿ ಕುಪ್ಪಳಿಸಿರಿ.

### ಆಟ

* ರಿಲೇ ಓಟ ಓಡಲು ಎರಡು ತಂಡಗಳನ್ನು ರೂಪಿಸಿರಿ.
* ಪ್ರತಿಯೊಂದು ತಂಡದಿಂದಲೂ ಒಬ್ಬ ವಿದ್ಯಾರ್ಥಿ ಒಂದೇ ಸಮಯ ಪೂರ್ತಿಯಾಗಿ ಓಡಬೇಕು.
* ಪ್ರತಿಯೊಂದು ಹಾಳೆಯ ಬಳಿ ತಲುಪಿದ ನಂತರ, ಪ್ರತಿಯೊಬ್ಬ ವಿದ್ಯಾರ್ಥಿ ಸತ್ಯವೇದದ ಪುಸ್ತಕದ ಹೆಸರನ್ನು ಗಟ್ಟೀಯಾಗಿ ಹೇಳಬೇಕು ಹಾಗೂ ಪ್ರತಿಯೊಂದಕ್ಕೂ ಹೀಗೆಯೇ ಮಾಡಬೇಕು.
* ಪಂಚಗ್ರಂಥದ ಪ್ರತಿಯೊಂದು ಪುಸ್ತಕವನ್ನು ಮುಗಿಸಿದ ನಂತರ, ವಿದ್ಯಾರ್ಥಿಯು ಓಡಬೇಕು ಮತ್ತು ಗುರಿಯನ್ನು ಮುಟ್ಟಬೇಕು, ಹಾಗೂ ತಂಡದ ಇತರ ಸದಸ್ಯರು ಆಟವನ್ನು ಹೊಸದಾಗಿ ಪ್ರಾರಂಭಿಸಬೇಕು.
* ತಂಡದ ಸದಸ್ಯರು ಇಲ್ಲಿಯ ತನಕ ತಲುಪಿರುವ ಪುಸ್ತಕವನ್ನು ಬಿಟ್ಟು ಬೇರೆ ಪುಸ್ತಕದ ಬಳಿಗೆ ಓಡಬೇಕು.

* ಎಲ್ಲಾ ಐದು ಪುಸ್ತಕಗಳನ್ನು ತಲುಪುವ ಮತ್ತು ಗುರಿಯನ್ನು ಮುಟ್ಟುವ ಮೊದಲ ತಂಡ ಜಯಗಳಿಸುತ್ತದೆ.

ಸತ್ಯವೇದದ ಮೊದಲ ಐದು ಪುಸ್ತಕಗಳ ಹೆಸರುಗಳನ್ನು ಎಲ್ಲಾ ಮಕ್ಕಳು ಕಲಿತುಕೊಳ್ಳುವ ತನಕ ಆಟವನ್ನು ಮುಂದುವರೆಸಿರಿ.

## ಹಾಜರಾತಿ ೩




ತರಗತಿಗೆ ಹಾಜರಾದದ್ದಕ್ಕೆ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡುವ ಸಲುವಾಗಿ ಮತ್ತೊಂದು ಕಾರ್ಡ್ ಪಡೆಯಬೇಕಾದರೆ ಮುಂದಿನ ವಾರ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:

ಪಂಚಗ್ರಂಥ

## ಹೋಮ್ ವರ್ಕ್ ೩

ಅಸೈನ್ಮೆಂಟ್

ಈ ವಾರದ ನಿಮ್ಮ ಅಸೈನ್ಮೆಂಟ್ ಹೊಸ ಒಡಂಬಡಿಕೆಯಲ್ಲಿರುವ ಕೆಲವು ಕಥೆಗಳನ್ನು ಓದಬೇಕು ಮತ್ತು ಯೇಸು ಕ್ರಿಸ್ತನು ನಿಮ್ಮೊಂದಿಗೆ ನಡೆಯುವದನ್ನು ಗಮನಿಸಬೇಕು. ಆತನು ನಿಮಗೆ ಸಹಾಯ ಮಾಡಿದ ಅಥವಾ ನೀವು ಬೇಡಿಕೊಂಡದ್ದಕ್ಕಾಗಿ ಆತನು ಇತರರಿಗೆ ಸಹಾಯ ಮಾಡಿದ ಸಂದರ್ಭಗಳನ್ನು ಬರೆಯಿರಿ. ಕೆಲವೊಮ್ಮೆ ಆತನು ನಮಗೆ ಆಲೋಚನೆಗಳನ್ನೂ ಕೊಡುತ್ತಾನೆ, ಆದ್ದರಿಂದ ಯೇಸು ಕ್ರಿಸ್ತನು ಕೊಡುವ ಆಲೋಚನೆಗಳನ್ನೂ ನೀವು ಬರೆಯಬಹುದು. ಆ ಆಲೋಚನೆಗಳು ಸತ್ಯವೇದಕ್ಕೆ ಹೊಂದಿಕೆಯಾಗುತ್ತವೆಯೇ ಎಂಬದನ್ನು ನಿಮ್ಮ ಶಿಕ್ಷಕರ ಬಳಿ ಕೇಳಿ ದೃಢಪಡಿಸಿಕೊಳ್ಳಿರಿ.

**ಓದಿರಿ**

ದಿನ ೧: ಆದಿಕಾಂಡ ೬:೯-೨೨
ದಿನ ೨: ಆದಿಕಾಂಡ ೭:೧-೧೨
ದಿನ ೩: ಆದಿಕಾಂಡ ೭:೧೩-೨೪
ದಿನ ೪: ಆದಿಕಾಂಡ ೮:೧-೧೨
ದಿನ ೫: ಆದಿಕಾಂಡ ೮:೧೩-೨೨

# ೪. ದೇವರಿಗೆ ವಿಧೇಯರಾಗಿರಿ



**ವೀರ: ನೋಹ**

ಆದಿಕಾಂಡ ೬:೯-೯:೧೭, ಇಬ್ರಿಯ ೧೧:೭

## ಕಂಠಪಾಠ ವಚನ ೪

ಯಾಕೋಬನು ೧:೨೨ “ ದೇವರ ವಾಕ್ಯವನ್ನು ಕಿವಿಯಿಂದ ಕೇಳಿದರೆ ಸಾಕೆಂದು ತಿಳಿದು ಮರುಳಾಗದಿರಿ. ಆ ವಾಕ್ಯವನ್ನು ಅನುಸರಿಸಿ ನಡೆಯುವವರಾಗಿರಿ.”

## ಕಥೆಯ ಅವಶ್ಯಕತೆ ೪



ಲೂಕನ ತಂದೆತಾಯಿಗಳು ಪ್ರವಾಸಕ್ಕೆ ಹೋಗಿದ್ದರು, ಆದ್ದರಿಂದ ಲೂಕನು ತನ್ನ ಸಂಬಂಧಿಕರ ಮನೆಯಲ್ಲಿದನು. ಪ್ರವಾಸಕ್ಕೆ ಹೋಗುವ ಮೊದಲು ಲೂಕನ ತಂದೆ ಅವನಿಗೆ ರಾತ್ರಿಯಲ್ಲಿ ಹೊರಗೆ ಎಲ್ಲಿಗೂ ಹೋಗಬೇಡ, ಅದು ತುಂಬಾ ಅಪಾಯಕಾರಿ ಎಂದು ಹೇಳಿದರು. ನಮ್ಮ ಮಗ ರಾತ್ರಿಯಲ್ಲಿ ಹೊರಗೆ ಹೋಗುವದಿಲ್ಲ ಎಂಬ ಭರವಸೆಯೊಡನೆ ಅವರ ಪ್ರವಾಸದಲ್ಲಿ ನಿಶ್ಚಿಂತೆಯಿಂದಿರಬೇಕೆಂದು ಬಯಸಿದರು. ಲೂಕ ಅವರಿಗೆ, “ಆಗಲಿ ನಾನು ರಾತ್ರಿಯಲ್ಲಿ ಹೊರಗೆ ಹೋಗುವದಿಲ್ಲ” ಎಂದು ಹೇಳಿದನು. ಅವನ ತಂದೆತಾಯಿಗಳು ಹೋದ ನಂತರ, ಅದೇ ದಿನ ರಾತ್ರಿ, ಅವನ ಸಂಬಂಧಿಕರು ನಾವು ಹೊರಗೆ ಹೋಗೋಣ ಎಂದು ಹೇಳಿದರು. ಅವನಿಗೆ ಅವರ ಆಲೋಚನೆ ಇಷ್ಟವಾಯಿತು, ಆದ್ದರಿಂದ ಅವರೊಂದಿಗೆ ಹೋಗಲು ಅವನು ತನ್ನ ಬಟ್ಟೆ ಬದಲಾಯಿಸಿಕೊಂಡನು. “ಸರಿ, ಈಗ ಹೋಗೋಣ” ಎಂದು ಎಲ್ಲರೂ ಹೇಳಿದರು.

## ಮುಖ್ಯ ಪಾಠ ೪

ನನಗೆ ಮೊಸಳೆ ಎಂದರೆ ಭಯವೇ ಇಲ್ಲ ಎಂಬದಾಗಿ ನೀವು ಎಂದಾದರು ಹೇಳಿದ್ದೀರೋ ಮತ್ತು ಮೊಸಳೆಯನ್ನು ಕಂಡ ಕೂಡಲೇ ಕೂಗುತ್ತಾ ಓಡಿ ಹೋಗಿದ್ದೀರೋ? ಅಥವಾ ನಿಮ್ಮ ಅಪ್ಪಾ ಅಮ್ಮನಿಗೆ ನೀವು ಏನು ಹೇಳಿದರೂ ಮಾಡುತ್ತೇನೆ ಎಂದು ಹೇಳಿ ನಂತರ ಅವಿಧೇಯರಾಗಿದ್ದೀರೋ? ಕಳೆದ ವಾರ ನಾವು ದೇವರ ವಾಕ್ಯ ನಂಬಬೇಕೆಂಬದನ್ನು ಕಲಿತಿದ್ದೇವೆ, ಅದನ್ನು ಸುಲಭವಾಗಿ ಹೇಳಬಹುದು ಆದರೆ ಅದರಂತೆ ನಡೆಯದಿರಬಹುದು! ಯಾಕೋಬ ೨:೨೬ ಹೇಳುವದೇನೆಂದರೆ ಕ್ರಿಯೆಗಳಿಲ್ಲದ ನಂಬಿಕೆ ಸತ್ತದ್ದಾಗಿದೆ. ಇಂದು ನಾವು ಜೀವಂತವಾದ ನಂಬಿಕೆಯುಳ್ಳವನಾಗಿದ್ದ ವ್ಯಕ್ತಿಯ ಬಗ್ಗೆ ಕಲಿತುಕೊಳ್ಳೋಣ.

ಜನರೆಲ್ಲರೂ ದುಷ್ಟರಾಗಿದ್ದರಿಂದ ಜಲಪ್ರಳಯದ ಮೂಲಕ ಇಡೀ ಭೂಲೋಕವನ್ನು ನಾಶಮಾಡಬೇಕೆಂದು ದೇವರು ತೀರ್ಮಾನಿಸಿದನು ಎಂದು ಸತ್ಯವೇದವು ಹೇಳುತ್ತದೆ. ಭೂಲೋಕದಲ್ಲಿ ಏಕೈಕ ನೀತಿವಂತನಾಗಿ ಜೀವಿಸುತ್ತಿದ್ದ ನೋಹನಿಗೆ ದೇವರು ನಾವೆಯನ್ನು (ದೊಡ್ಡ ಹಡಗು) ಕಟ್ಟು ಎಂದು ಹೇಳಿದನು.

ವಿವಿಧ ಕಾರಣಗಳಿಂದಾಗಿ ದೇವರಿಗೆ ವಿಧೇಯರಾಗುವದು ಕಷ್ಟಕರವಾಗಿರುತ್ತದೆ. ಕೆಲವೊಮ್ಮೆ ವಿಧೇಯರಾಗಲು ನಮಗೆ ಇಷ್ಟವೇ ಇರುವದಿಲ್ಲ. ನೋಹನ ಆಲೋಚನೆ ಏನಾಗಿತ್ತು ಎಂದು ಸತ್ಯವೇದ ಹೇಳುವದಿಲ್ಲ, ಆದರೆ ಅವನು ಅದಕ್ಕೂ ಮೊದಲು ನಾವೆಗಳನ್ನು ಕಟ್ಟುತ್ತಿರಲಿಲ್ಲ ಹಾಗೂ ದೇವರಿಗೆ ವಿಧೇಯನಾಗಲು ಮುಂದಾದನು ಎಂಬದು ನನ್ನ ಊಹೆಯಾಗಿದೆ.

ಕೆಲವೊಮ್ಮೆ ನಮಗೆ ಅರ್ಥವಾಗದಿರುವಾಗ ವಿಧೇಯರಾಗುವದು ಕಷ್ಟವಾಗುತ್ತದೆ. ನಾವೆಯನ್ನು ಕಟ್ಟಲು ಸುಮಾರು ೧೦೦ ವರ್ಷಗಳು ಬೇಕಾಯಿತು, ನೋಹ ನೀಲು ಆಕಾಶವನ್ನು ನೋಡುತ್ತಿದ್ದರೂ ಅವನಿಗೆ ಜಲಪ್ರಳಯದ ಯಾವ ಲಕ್ಷಣಗಳು ಕಾಣಿಸಲಿಲ್ಲ! ಚಿಕ್ಕ ಮಗುವಿಗೆ ವಾಹನಗಳಿಂದ ತುಂಬಿರುವ ರಸ್ತೆಯ ಅಪಾಯ ಗೊತ್ತಿಲ್ಲದಿರಬಹುದು, ಆದರೆ ಅದು ತನ್ನ ತಂದೆತಾಯಿಗಳಿಗೆ ವಿಧೇಯನಾಗಿ ರಸ್ತೆಯಿಂದ ದೂರವಿರಬೇಕು. ನಿಮಗೆ ಅರ್ಥವಾಗದಿರುವ ಕಾರ್ಯವನ್ನು ಮಾಡುವಂತೆ ನಿಮ್ಮ ತಂದೆತಾಯಿಗಳು ನಿಮಗೆ ಎಂದಾದರು ಹೇಳಿದ್ದಾರೆಯೇ?

ಜನರು ನಮ್ಮ ಬಗ್ಗೆ ಏನಂದುಕೊಳ್ಳುತ್ತಾರೋ ಎಂಬ ಭಯದಿಂದ ಕೆಲವೊಮ್ಮೆ ವಿಧೇಯರಾಗಲು ನಮಗೆ ಕಷ್ಟವಾಗುತ್ತದೆ. ನೋಹನ ನಡೆ ಉಳಿದವರಿಗೆ ಹೇಗನ್ನಿಸಬಹುದು ಎಂಬದಾಗಿ ಊಹಿಸಿಕೊಳ್ಳಿರಿ? ಆದರೆ ಒಂದುವೇಳೆ ಅವರಿಗೆ ಭವಿಷ್ಯದ ದೃಷ್ಟಿಕೋನವಿದ್ದರೆ, ಅವರು ಸಹಾಯ ಮಾಡುತ್ತಿದ್ದರು ಮತ್ತು ತಮ್ಮನ್ನೂ ಸೇರಿಸಿಕೊಳ್ಳುವಂತೆ ಹೇಳುತ್ತಿದ್ದರು!

ಕೆಲವೊಮ್ಮೆ ನಾವು ಅದು ಅಸಾಧ್ಯ ಎಂದು ಯೋಚಿಸುತ್ತೇವೆ. ದೇವರು ನೋಹನಿಗೆ ಪ್ರತಿಯೊಂದು ಜಾತಿಯ ಪ್ರಾಣಿಯ ಜೋಡಿಯನ್ನು ನಾವೆಯಲ್ಲಿ ಸೇರಿಸಿಕೋ ಎಂದು ಹೇಳಿದನು. ಬೆಕ್ಕುಗಳಿಗೆ ನೀರು ಮತ್ತು ಚಲಿಸುವ ವಸ್ತುಗಳಾದ ನಾವೆಯೆಂದರೆ ಇಷ್ಟವಿರುವದಿಲ್ಲ, ಅವು ಯಾರ ಮಾತನ್ನೂ ಕೇಳುವದಿಲ್ಲ! ನೋಹ ಬೆಕ್ಕುಗಳನ್ನು ಮಾತ್ರವಲ್ಲ ಬದಲಾಗಿ ಸಿಂಹಗಳು, ಕುರಿಗಳು ಮತ್ತು ಎಲ್ಲಾ ರೀತಿಯ ಪ್ರಾಣಿಗಳನ್ನು ಸೇರಿಸಿಕೊಳ್ಳಬೇಕಾಗಿತ್ತು!

ನೋಹ ವಿಧೇಯನಾದನು ಮತ್ತು ನಾವೆಯನ್ನು ಕಟ್ಟಿದನು. ಪ್ರಾಣಿಗಳು ಸಹ ದೇವರಿಗೆ ವಿಧೇಯವಾದವು ಮತ್ತು ತಾವಾಗಿಯೇ ನಾವೆಯ ಬಳಿಗೆ ಬಂದವು! ಇಡೀ ಭೂಲೋಕದ ಮೇಲೆ ಜಲಪ್ರಯಳದ ನೀರು ೧ ವರ್ಷದ ೧೦ ದಿವಸಗಳ ತನಕ ಇತ್ತು ಮತ್ತು ಎಲ್ಲವೂ ನೀರಿನೊಳಗೆ ಮುಳುಗಿ ಹೋದವು! ಆಜ್ಞೆಯನ್ನು ಪಾಲಿಸುವವನು ಜೀವವನ್ನು ಕಾಯುತ್ತಾನೆ (ಜ್ಞಾನೋಕ್ತಿ ೧೯:೧೬) ಎಂದು ಸತ್ಯವೇದವು ಹೇಳುತ್ತದೆ. ನೋಹನ ವಿಧೇಯತೆಯ ಮೂಲಕ, ಅವನು ರಕ್ಷಣೆ ಹೊಂದಿದ್ದು ಮಾತ್ರವಲ್ಲ, ಅವನ ಕುಟುಂಬದವರು ಹಾಗೂ ವಿವಿಧ ಪ್ರಾಣಿಗಳು ಸಹ ರಕ್ಷಣೆ ಹೊಂದಿದವು. ಒಂದುವೇಳೆ ನೀವು ದೇವರಿಗೆ ವಿಧೇಯರಾದರೆ, ಅದರಿಂದ ಇತರರು ಸಹ ರಕ್ಷಣೆ ಹೊಂದುತ್ತಾರೆ. ಇದಕ್ಕೂ ಮೊದಲು ನಾವು ಲೂಕ ಎಂಬ ಹುಡುಗನ ಬಗ್ಗೆ ಓದಿದೆವು. ಅವನು ತನ್ನ ಸಂಬಂಧಿಕರ ಜೊತೆಯಲ್ಲಿ ಹೊರಗೆ ಹೋಗಲು ಮುಂದಾದಾಗ, ತನ್ನ ತಂದೆ ಹೇಳಿದ ಮಾತುಗಳು ಅವನಿಗೆ ನೆನಪಾದವು ಮತ್ತು ಅವನು ತನ್ನ ಸಂಬಂಧಿಕರಿಗೆ ನಾನು ನಿಮ್ಮೊಂದಿಗೆ ಬರುವದಿಲ್ಲ ಎಂಬದಾಗಿ ಹೇಳಿದನು.

ದೇವರು ಇನ್ನೆಂದಿಗೂ ನಾನು ಜಲಪ್ರಳಯವನ್ನು ಬರಮಾಡುವದಿಲ್ಲ ಎಂದು ಹೇಳಿ ಮುಗಿಲು ಬಿಲ್ಲನ್ನು ಗುರುತಾಗಿ ಕೊಟ್ಟನು. ಪ್ರತಿಸಲ ನೀವು ಮುಗಿಲು ಬಿಲ್ಲನ್ನು ನೋಡುವಾಗ, ದೇವರ ವಾಗ್ದಾನ ಹಾಗೂ ನೋಹನ ಹಾಗೆ ದೇವರಿಗೆ ವಿಧೇಯರಾಗುವದು ಹೇಗೆ ಎಂದು ಯೋಚಿಸಿರಿ.

ನಾನು ದೇವರಿಗೆ ವಿಧೇಯನಾಗುವ ಆಯ್ಕೆಯನ್ನು ಮಾಡುತ್ತೇನೆ, ಯಾಕಂದರೆ ಅದು ಅಮೂಲ್ಯವಾದದ್ದಾಗಿದೆ.

## ವಿಶ್ಲೇಷಣೆ ೪

ಇನ್ನೇನು ಹೋಗುವ ಮೊದಲು ಲೂಕನು ತನ್ನ ತಂದೆಯ ಮಾತುಗಳನ್ನು ನೆನಪಿಗೆ ತಂದುಕೊಂಡನು ಮತ್ತು ನಾನು ಬರುವದಿಲ್ಲ ಎಂಬದಾಗಿ ತನ್ನ ಸಂಬಂಧಿಕರಿಗೆ ಹೇಳಿದನು. ಲೂಕನು ತನ್ನ ತಂದೆತಾಯಿಗಳಿಗೆ ವಿಧೇಯನಾಗುವ ಆಯ್ಕೆಯನ್ನು ಮಾಡಿಕೊಂಡನು.



## ಚಟುವಟಿಕೆ ೪

**ನೋಹ ಹೇಳುವದೇನೆಂದರೆ**

“ನೋಹ ಹೇಳುವದೇನೆಂದರೆ” ಎಂಬ ಚಟುವಟಿಕೆಯನ್ನು ಮಾಡೋಣ, ಇದನ್ನು ಮಾಡಲು ಮಕ್ಕಳು “ನೋಹನಿಗೆ” ವಿಧೇಯರಾಗಬೇಕು. (ಇದು “ಸಿಮೋನ ಹೇಳುವದೇನೆಂದರೆ” ಎಂಬದಕ್ಕೆ ಸಮಾನವಾದ ಆಟವಾಗಿದೆ) ನೋಹ ಭಾಗವಹಿಸುವವರ ಎದುರಿನಲ್ಲಿ ನಿಂತುಕೊಳ್ಳುತ್ತಾನೆ, ನಂತರ ವಿವಿಧ ಕಾರ್ಯಗಳನ್ನು ಮಾಡಲು ಸೂಚನೆಗಳನ್ನು ಕೊಡುತ್ತಾನೆ. ಒಂದುವೇಳೆ ನೋಹ “ನೋಹ ಹೇಳುವದೇನೆಂದರೆ, ಮೇಲೆ ಕೆಳಗೆ ಜಿಗಿಯಬೇಕು” ಎಂದು ಹೇಳಿದರೆ, ಮಕ್ಕಳು ಅದನ್ನು ಮಾಡಬೇಕು. ಒಂದುವೇಳೆ ಆತನು “ನೋಹ ಹೇಳುವದೇನೆಂದರೆ” ಎಂಬದನ್ನು ಹೇಳದೆ “ಮೇಲಕ್ಕೆ ಕೆಳಗೆ ಜಿಗಿಯಿರಿ” ಎಂದು ಮಾತ್ರವೇ ಹೇಳಿದರೆ, ಮೊದಲು ಮಕ್ಕಳು ಏನೂ ಮಾಡಬಾರದು. “ನೋಹ ಹೇಳುವದೇನೆಂದರೆ” ಎಂಬದನ್ನು ಕೇಳಿಸಿಕೊಳ್ಳದೆ ಉಳಿದವುಗಳನ್ನು ಕೇಳಿಸಿಕೊಂಡು ಮಾಡುವ ಆಟಗಾರ ಆಟದಲ್ಲಿ ಮುಂದುವರೆಯಲು ಆಗುವದಿಲ್ಲ. ಕಡೆಯಲ್ಲಿ ಒಬ್ಬ ಆಟಗಾರ ಉಳಿದರೆ ಅಥವಾ ಮಕ್ಕಳೆಲ್ಲರೂ ಆಟದಲ್ಲಿ ಮುಂದುವರೆಯಲು ವಿಫಲರಾದರೆ ಅಲ್ಲಿಗೇ ಆಟ ಮುಗಿಯುತ್ತದೆ..



## ಟೈಮ್ ಲೈನ್ ೪

ನೋಹನ ಜೀವಿತದ ಗೆರೆಯನ್ನು ಹಾಕಿರಿ.


ಪ್ರಶ್ನೆ: ಹನೋಕನ ಜನನ ಮತ್ತು ನೋಹನ ಜನನದ ನಡುವೆ ಎಷ್ಟು ವರ್ಷಗಳ ಅಂತರವಿದೆ? ಉತ್ತರ ೪೩೪ ವರ್ಷಗಳು.

ಪ್ರಶ್ನೆ: ನೋಹ ಎಷ್ಟು ವರ್ಷ ಬದುಕಿದನು? ಉತ್ತರ: ೯೫೦ ವರ್ಷಗಳು.

ಒಗಟಿನ ಉತ್ತರಗಳು ೪

## ಟೈಮ್ ಲೈನ್ ೪

| | | | | | | | | | |
|---|---|---|---|---|---|---|---|---|---|
| ಕ | ರ್ತ | ನು | ತ | ಯ | ಷ | ಸ | ಹ | ಟ | ಯ |
| ನೋ | ಹ | ಗ್ | ಳ | ಸ | ರ್ | ಲ್ | ಆ | ಝು | ಧ |
| ಹ್ | ಫ | ಪ್ರ | ಬ | ಟುಂ | ನ್ಮಾ | ಲ | ಜ್ಞಾ | ನೀ | ತಿ |
| ನೆ | ಲ | ವಾ | ಮಿ | ಕಾ | ದೇ | ನಿ | ಪಿ | ಞ | ಜ |
| ಜ | ಗ | ಗ್ದಾ | ತಿ | ಜ್ಞಾ | ಪ್ರ | ಸ | ಸಿ | ಹೃ | ಟ |
| ಕಾ | ಮ | ನ | ಬ | ಲ್ಲು | ಝು | ಹೋ | ದ | ದ | ಡ |
| ತಿ | ದೇ | ಟುಂ | ವ | ನಂ | ಬಿ | ದ | ನು | ಯ | ನು |
| ಭೂ | ಕು | ನೋ | ಪಾ | ಮಿ | ಪ್ರ | ರ | ಹ | ದೇ | ಢ |
| ಜ್ಞಾ | ಮಿ | ಪ್ರ | ಪ | ಕಾ | ನಾ | ವೆ | ಧ | ವ | ಣ |
| ಪ್ರಾ | ಣಿ | ಗ | ಳು | ಟುಂ | ವು | ಜ್ಞಾ | ಯ | ರು | ಬ್ |





## ಪ್ರಶ್ನೆಗಳು ಮತ್ತು ಉತ್ತರಗಳು ೪

೧. ನನ್ನ ತಂದೆತಾಯಿಗಳು ಯಾವಾಗ ನನಗೆ ನಾನೇನು ಮಾಡಬೇಕೆಂಬದನ್ನು ಯಾಕೆ ಹೇಳುತ್ತಾರೆ? (ಯಾಕಂದರೆ ಅವರು ನಿಮ್ಮನ್ನು ಬಹಳವಾಗಿ ಪ್ರೀತಿಸುತ್ತಾರೆ ಮತ್ತು ನಿಮಗೆ ಉತ್ತಮವಾದ ಕಾರ್ಯಗಳು ಸಿಗಬೇಕೆಂದು ಬಯಸುತ್ತಾರೆ. ತಂದೆತಾಯಿಗಳೂ ಮಾನವರಾಗಿದ್ದಾರೆ ಮತ್ತು ಅವರಿಂದಲೂ ತಪ್ಪುಗಳಾಗುತ್ತವೆ ಎಂಬದನ್ನು ಚರ್ಚಿಸಬೇಕು).

೨. ದೇವರಿಗೆ ಅವಿಧೇಯನಾಗುವದರಿಂದ ನಾನು ಪ್ರಸಿದ್ಧನಾಗುತ್ತೇನೆ ಎಂಬದು ನಿಜವಾಗಿದ್ದರೆ ಹೇಗಿರುತ್ತಿತ್ತು? (ಇದಕ್ಕೆ ಸಂಬಂಧಿಸಿದ ವಿವಿಧ ಪರಿಸ್ಥಿತಿಗಳ ಬಗ್ಗೆ ಮಾತನಾಡಿರಿ. ದೇವರಿಗೆ ವಿಧೇಯರಾಗಬೇಕೋ ಅಥವಾ ಪ್ರಸಿದ್ಧರಾಗಲು ಬಯಸಬೇಕೋ ಎಂಬದನ್ನು ತೀರ್ಮಾನಿಸುವ ಸಮಯಗಳು ಬರುತ್ತವೆ ಎಂಬದನ್ನು ಅರ್ಥಮಾಡಿಕೊಳ್ಳಲು ನಿಮ್ಮ ವಿದ್ಯಾರ್ಥಿಗಳಿಗೆ ಸಹಾಯ ಮಾಡಿರಿ).

೩. ನಾನು ಶಾಶ್ವತವಾಗಿ ಸಂತೋಷದಿಂದ ಬದುಕುತ್ತೇನೆಯೇ? (ಚಿಕ್ಕಂದರಲ್ಲಿ ಆಡುತ್ತಿದ್ದ ಆಟಗಳು, ಬೌತಿಕ ವಸ್ತುಗಳಿಂದ ದೊರೆಯುವ ಸಂತೋಷ, ಭೂಲೋಕದಲ್ಲಿ ಪರಿಪೂರ್ಣವಾದ ಜೀವಿತ ಹೇಗಿರುತ್ತದೆ, ನಿತ್ಯತ್ವದ ವಿಷಯದಲ್ಲಿ ಸಂತೋಷವಾಗಿರುವದೆಂದರೆ ಏನು ಎಂಬ ವಿಷಯಗಳನ್ನು ಚರ್ಚಿಸಿರಿ).

## ಆಟ ೪

**ರಾಜ ಮತ್ತು ರಾಣಿ ಕೇಳುತ್ತಾರೆ!**



- ರಾಜ ಮತ್ತು ರಾಣಿಯ ಪಾತ್ರ ಮಾಡಲು ಇಬ್ಬರು ಮಕ್ಕಳನ್ನು ಆಯ್ಕೆ ಮಾಡಿರಿ.
- ಅವರನ್ನು ಎರಡು ಖುರ್ಚಿಗಳ ಮೇಲೆ ಇತರ ಮಕ್ಕಳ ಎದುರಿನಲ್ಲಿ ಕೂರಿಸಿರಿ ಅದು ಅವರಿಗೆ ಸಿಂಹಾಸನದಂತಿರಲಿ.
- ಅವರು ಸಿದ್ಧರಾದ ನಂತರ, ಶಿಕ್ಷಕಿಯು ರಾಣಿಗೆ, "ನಿಮಗೇನು ಬೇಕು" ಎಂದು ಕೇಳಬೇಕು?
- ರಾಣಿ ಕೋಣೆಯೊಳಗಿರುವ ಏನನ್ನೋ ತರುವಂತೆ ಹೇಳುತ್ತಾರೆ ಮತ್ತು ಮಕ್ಕಳೆಲ್ಲರೂ ಅದನ್ನು ತರಲು ಓಡುವರು, ಹುಡುಗಿಯರು ತಂದು ರಾಣಿಗೆ ಕೊಡಬೇಕು, ಹುಡುಗರು ತಂದು ರಾಜನಿಗೆ ಕೊಡಬೇಕು.
- ನಂತರ ಶಿಕ್ಷಕಿಯು ರಾಜನಿಗೆ, "ನಿಮಗೇನು ಬೇಕು" ಎಂದು ಕೇಳಬೇಕು, ಮತ್ತು ಮಕ್ಕಳು ತಮ್ಮ ರಾಜ ಅಥವಾ ರಾಣಿ ಕೇಳಿದ್ದನ್ನು ತಂದು ಕೊಡಲು ಪ್ರಯತ್ನಿಸುತ್ತಾರೆ.
- ಸಮಯವಿರುವ ತನಕ ಆಟವನ್ನು ಮುಂದುವರೆಸಿರಿ.
- ಯಾವ ತಂಡ ಹೆಚ್ಚು ಚುರುಕಾಗಿರುತ್ತದೋ, ಗೌರವಯುತವಾಗಿ ನಡೆದುಕೊಳ್ಳುತ್ತದೋ, ವಿಧೇಯವಾಗಿರುತ್ತದೋ, ಇತ್ಯಾದಿ ಕಾರ್ಯಗಳನ್ನು ಮಾಡುತ್ತದೋ, ಆ ತಂಡ ಗೆಲ್ಲುತ್ತದೆ.

## ಹಾಜರಾತಿ ೪




ತರಗತಿಗೆ ಹಾಜರಾದದ್ದಕ್ಕೆ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡುವ ಸಲುವಾಗಿ ಮತ್ತೊಂದು ಕಾರ್ಡ್ ಪಡೆಯಬೇಕಾದರೆ ಮುಂದಿನ ವಾರ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:

ನೋಹ

## ಹೋಮ್ ವರ್ಕ್ ೪

### ಅಸೈನ್ಮೆಂಟ್

ದೇವರು ಮಾಡಬಾರದೆಂದು ಹೇಳಿರುವ ಕಾರ್ಯಗಳನ್ನೇ ಮಾಡುವಂತೆ ಎರಡು ಮೂರು ಸಲ ನಿಮಗೆ ಶೋಧನೆಯಾದರೂ ನೀವು ಅವುಗಳನ್ನು ಮಾಡದೆ ದೇವರಿಗೆ ವಿಧೇಯರಾಗಲು ತಿರಸ್ಕರಿಸಿದ ಆ ಕಾರ್ಯಗಳನ್ನು ಬರೆಯಬೇಕಾದದ್ದು ನಿಮ್ಮ ಈ ವಾರದ ಅಸೈನ್ಮೆಂಟ್ ಆಗಿದೆ.

**ಓದಿರಿ**

ದಿನ ೧: ಆದಿಕಾಂಡ ೧೫:೧-೭

ದಿನ ೨: ಆದಿಕಾಂಡ ೧೫:೮-೨೧

ದಿನ ೩: ಅದಿಕಾಂಡ ೨೧:೧-೭

ದಿನ ೪: ಆದಿಕಾಂಡ ೨೨:೧-೧೦

ದಿನ ೫: ಆದಿಕಾಂಡ ೨೨:೧೧-೧೯

# ೫. ಪರೀಕ್ಷೆಯನ್ನು ಗೆಲ್ಲುವದು



**ವೀರ: ಅಬ್ರಹಾಮ**

ಆದಿಕಾಂಡ ೧೨:೧-೭, ೧೫:೧-೬, ೨೧:೧-೩, ೨೨:೧-೧೯, ಇಬ್ರಿಯ ೧೧:೮-೧೯

## ಕಂಠಪಾಠ ವಚನ ೫

ಯಾಕೋಬನು ೧:೧೨ " ಸಂಕಟ ಶೋಧನೆಗಳನ್ನು ತಾಳ್ಮೆಯಿಂದ ಸಹಿಸಿಕೊಳ್ಳುವವನೇ ಧನ್ಯನು. ಅವನು ಪರಿಶೋಧನೆಯಲ್ಲಿ ಯಶಸ್ವಿಯಾದ ಮೇಲೆ ಸಜ್ಜೀವವೆಂಬ ಜಯಮಾಲೆಯನ್ನು ಪಡೆಯುತ್ತಾನೆ. ದೇವರು ತಮ್ಮನ್ನು ಪ್ರೀತಿಸುವವರಿಗೆ ಇದನ್ನು ಕಾದಿರಿಸಿರುತ್ತಾರೆ."

## ಕಥೆಯ ಅವಶ್ಯಕತೆ ೫



ಇದು ಅತ್ಯಂತ ಪ್ರಾಮುಖ್ಯವಾದ ಪರೀಕ್ಷೆಯಾಗಿತ್ತು. ಪ್ರತಿಯೊಬ್ಬರೂ ಈ ಪರೀಕ್ಷೆಗೆ ಸಿದ್ಧರಾಗಬೇಕಾಗಿತ್ತು ಯಾಕಂದರೆ ಇದರ ಫಲಿತಾಂಶದ ಮೇರೆಗೆ ಒಲಂಪಿಕ್ಸ್ ಕ್ರೀಡಾ ಕೂಟದ ಬುದ್ಧಿವಂತಿಕೆಯ ಸ್ಪರ್ಧೆಗೆ ಯಾರನ್ನು ಆಯ್ಕೆ ಮಾಡಬೇಕು ಎಂಬದನ್ನು ಆಯ್ಕೆ ಮಾಡುವವರಾಗಿದ್ದರು. ಈ ಕಾರಣದಿಂದಲೇ ಮರಿಯಳು ಆಡಲು ಹೊರಗೆ ಹೋಗದೆ ಇಡೀ ದಿನ ಮನೆಯಲ್ಲೇ ಕುಳಿತು ಓದುತ್ತಿದ್ದಳು - ತಾನೇ ಪ್ರಥಮ ಸ್ಥಾನಗಳಿಸಬೇಕೆಂಬದು ಅವಳ ಬಯಕೆಯಾಗಿತ್ತು. ನಿರೀಕ್ಷಿಸುತ್ತಿದ್ದ ದಿನ ಬಂದೇ ಬಿಟ್ಟಿತು. ಎಲ್ಲರೂ ಸಿದ್ಧರಾಗಿ, ತಮ್ಮ ಆಸನಗಳಲ್ಲಿ ಪೆನ್ಸಿಲ್ ಹಿಡಿದು ಕೂತಿದ್ದರು. ಶಿಕ್ಷಕರು ಬಂದು ಅವರಿಗೆ ಪರೀಕ್ಶೆ ಕೊಟ್ಟರು. ಆದರೆ ಮರಿಯಳು ಓದಿದ ವಿಷಯವೇ ಬೇರೆಯಾಗಿತ್ತು ಮತ್ತು ಪರೀಕ್ಷೆಯು ಬೇರೆ ವಿಷಯಕ್ಕೆ ಸಂಬಂಧಿಸಿದ್ದಾಗಿತ್ತು.

## ಮುಖ್ಯ ಪಾಠ ೫

ನಂಬಿಕೆಯ ಮೂಲಪಿತೃ ಎಂದು ಕರೆಯಲ್ಪಡುವ ವ್ಯಕ್ತಿಯ ಬಗ್ಗೆ ಕಲಿತುಕೊಳ್ಳೋಣ. ಒಂದುದಿನ ದೇವರು ಅಬ್ರಹಾಮನನ್ನು ಕರೆದು ನಿನ್ನ ತಂದೆಯ ಮನೆಯನ್ನು ಬಿಟ್ಟು ನನ್ನನ್ನು ಹಿಂಬಾಲಿಸು ಎಂದು ಹೇಳಿದನು, ಅಬ್ರಹಾಮನು ಅದಕ್ಕೆ ವಿಧೇಯನಾದನು. ಅಬ್ರಹಾಮನಿಗೆ ಮತ್ತು ಅವನ ಹೆಂಡತಿಗೆ ಮಕ್ಕಳಿರಲಿಲ್ಲ. ಅವನ ಜೀವಿತದ ಅತ್ಯಂತ ಪ್ರಾಮುಖ್ಯವಾದ ಸಂದರ್ಭದಲ್ಲಿ ದೇವರು ಅವನಿಗೆ ನೀನು ಮತ್ತು ನಿನ್ನ ಹೆಂಡತಿ ಮುದುಕರಾಗಿದ್ದರೂ ನಿಮಗೆ ಒಬ್ಬ ಮಗನನ್ನು ಕೊಡುವೆನು ಎಂದು ವಾಗ್ದಾನ ಮಾಡಿದನು. ಇದಲ್ಲದೆ ನಿನ್ನ ಸಂತತಿಯು ದೊಡ್ಡ ಜನಾಂಗವಾಗುವದು ಮತ್ತು ಇಡೀ ಲೋಕವು ನಿನ್ನ ಮೂಲಕ ಅಶೀರ್ವಾದ ಹೊಂದುವದು ಎಂಬದಾಗಿಯೂ ಹೇಳಿದನು! ಅಬ್ರಹಾಮನು ದೇವರನ್ನು ನಂಬಿದನು ಮತ್ತು ದೇವರು ಅದನ್ನು ನೀತಿ ಎಂದು ಕರೆದನು.

ಹಲವು ವರ್ಷಗಳಾದ ನಂತರ, ಅಬ್ರಹಾಮ ಮತ್ತು ಸಾರಳಿಗೆ ಇಸಾಕನೆಂಬ ಮಗ ಹುಟ್ಟಿದನು. ಇದಾದ ಕೆಲವು ವರ್ಷಗಳ ಬಳಿಕ, ದೇವರು ಅಬ್ರಹಾಮನಿಗೆ ನೆರವೇರಿಸಿದ್ದ ವಾಗ್ದಾನವಾದ ಅವನ ಪ್ರೀತಿಯ ಮಗನನ್ನು ಯಜ್ಞವಾಗಿ ಅರ್ಪಿಸುವಂತೆ ಹೇಳಿದನು! ದೇವರು ಇಸಾಕನನ್ನು ಕಾಪಾಡಬೇಕೆಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡಿದ್ದನು, ಆದರೆ ಅದನ್ನು ಅಬ್ರಹಾಮನಿಗೆ ತಿಳಿಸಲಿಲ್ಲ. ಅಬ್ರಹಾಮನಿಗೆ ತನ್ನ ಮೇಲೆ ಎಷ್ಟು ಪ್ರೀತಿಯಿದೆ ಎಂಬದನ್ನು ತಿಳಿಯಲು ಆತನು ಕಾಯುತ್ತಿದ್ದನು.

ಕೆಲವೊಮ್ಮೆ ದೇವರು ನಮ್ಮ ಜೀವಿತಗಳ ವಿಷಯದಲ್ಲಿ ದೊಡ್ಡ ಆಲೋಚನೆಗಳುಳ್ಳವನಾಗಿರುತ್ತಾನೆ ಆದರೂ ಅವುಗಳು ನೆರವೇರುವ ಮೊದಲು ನಮಗೆ ಪರೀಕ್ಷೆ ಎದುರಾಗುತ್ತದೆ. ನಾವು ದೇವರನ್ನು ಎಷ್ಟರ ಮಟ್ಟಿಗೆ ಪ್ರೀತಿಸುತ್ತೇವೆ ಎಂಬದನ್ನು ದೇವರು ತಿಳಿಯಲು ಬಯಸುತ್ತಾನೆ. ಇಂದು

ದೇವರು ನಿಮ್ಮನ್ನು ಏನು ಕೇಳುತ್ತಿದ್ದಾನೆ? ಕೆಲವೊಮ್ಮೆ ನೀವು ನಿಮ್ಮ ಕೆಟ್ಟ ಸ್ವಭಾವವನ್ನು ಬದಲಾಯಿಸಿಕೊಳ್ಳಬೇಕಾಗುತ್ತದೆ, ಕೆಟ್ಟವರ ಸಹವಾಸದಿಂದ ಹೊರಗೆ ಬರಬೇಕಾಗುತ್ತದೆ, ಕದಿಯುವದು ಅಥವಾ ಸುಳ್ಳಾಡುವದನ್ನು ಬಿಡಬೇಕಾಗಿರುತ್ತದೆ ಅಥವಾ ನಿಮ್ಮ ತಾಯಿಗೆ ಸಹಾಯ ಮಾಡಬೇಕಾಗಿರುತ್ತದೆ. ಯಾವಾಗಲೂ ಕೆಟ್ಟ ಕಾರ್ಯಗಳೇ ಆಗಿರಬೇಕೆಂದೇನಿಲ್ಲ. ಅಬ್ರಹಾಮನ ಮಗ ಇಸಾಕನು ಕೆಟ್ಟವನಾಗಿರಲಿಲ್ಲ. ಕೆಲವೊಮ್ಮೆ ಒಳ್ಳೆಯ ಕಾರ್ಯಗಳೇ ದೇವರ ಮೇಲೆ ನಿಮಗಿರುವ ಪ್ರೀತಿಯೊಂದಿಗೆ ಸ್ಪರ್ಧಿಸುತ್ತಿರುತ್ತವೆ. ಕೆಲವರಿಗೆ ದೇವರು ಅವರ ಉನ್ನತ ವ್ಯಾಸಂಗವನ್ನು ನಿಲ್ಲಿಸುವಂತೆ ಹೇಳುತ್ತಾನೆ ಯಾಕಂದರೆ ಅವರು ಪ್ರಮುಖ ಹುದ್ದೆಯ ಮೇಲೆ ಮನಸ್ಸಿಟ್ಟಿರುತ್ತಾರೆ, ಇನ್ನೂ ಕೆಲವರಿಗೆ ಉನ್ನತ ವ್ಯಾಸಂಗ ಮಾಡಲು ಇಷ್ಟವಿಲ್ಲದಿದ್ದರೂ ಮಾಡಬೇಕೆಂದು ದೇವರು ಬಯಸುತ್ತಾನೆ. ಸಂಗೀತ ವಾದ್ಯವಾಗಿರಬಹುದು, ಯಾರ ಮೇಲಾದರೂ ನಿಮಗೆ ಮನಸ್ಸಾಗಿರಬಹುದು, ಅಥವಾ ಇಷ್ಟದ ಕಾರ್ಟೂನ್ ಆಗಿರಬಹುದು. ಅನೇಕ ಕ್ರೈಸ್ತರು ತಮ್ಮ ಜೀವಿತಗಳಲ್ಲಿ ಬಿಟ್ಟು ಕೊಡಲು ಮನಸ್ಸಿಲ್ಲದವರಾಗಿದ್ದಾರೆ ಆದ್ದರಿಂದಲೇ ಅವರ ನಂಬಿಕೆ ಸ್ಥಗಿತಗೊಂಡಿರುತ್ತದೆ ಮತ್ತು ಯಾವ ಬೆಳವಣಿಗೆಯೂ ಅವರಲ್ಲಿ ಇರುವದಿಲ್ಲ, ಮರಿಯಳು ಪರೀಕ್ಷೆಗೆ ತಪ್ಪಾದ ವಿಷಯವನ್ನು ಓದಿದ ಹಾಗೆ ಅವರ ಜೀವನ ಇರುತ್ತದೆ. ದೇವರನ್ನು ಅಥವಾ ಬೇರೆಯದನ್ನು ಆಯ್ಕೆ ಮಾಡುವ ಸಮಯ ಬರುವಾಗ, ನೀವು ಯಾವುದನ್ನು ಆಯ್ಕೆ ಮಾಡುತ್ತೀರಿ?

ಅಬ್ರಹಾಮನು ಅತ್ಯಂತ ಕಷ್ಟಕರವಾದ ಪರಿಸ್ಥಿತಿಯಲ್ಲಿಯೂ ದೇವರಿಗೆ ವಿಧೇಯನಾಗುವ ಆಯ್ಕೆ ಮಾಡಿಕೊಂಡನು. ಅವನು ಇಸಾಕನನ್ನು ಕರೆದುಕೊಂಡು ಬೆಟ್ಟ ಹತ್ತಿದನು, ಅವನ ಕೈಕಾಲುಗಳನ್ನು ಕಟ್ಟಿದನು ಮತ್ತು ಅವನನ್ನು ಯಜ್ಞವೇದಿಯ ಮೇಲೆ ಮಲಗಿಸಿದನು. ಅಬ್ರಹಾಮನು ಇನ್ನೇನು ಕತ್ತಿಯಿಂದ ಇಸಾಕನನ್ನು ಕೊಲ್ಲಬೇಕೆಂದಿರುವಾಗ, ದೇವರು ಅವನನ್ನು ತಡೆದನು! ದೇವರು ಅವನಿಗೆ ಪೊದೆಯೊಳಗೆ ಸಿಕ್ಕಿಕೊಂಡಿದ್ದ ಟಗರನ್ನು ತೋರಿಸಿದನು ಮತ್ತು ಅವರು ಅದನ್ನೇ ಯಜ್ಞವಾಗಿ ಅರ್ಪಿಸಿದರು. ಆದರೆ ಅಬ್ರಹಾಮನು ಲೋಕದಲ್ಲಿರುವ ಎಲ್ಲವುಗಳಿಗಿಂತ ದೇವರನ್ನೇ ಹೆಚ್ಚಾಗಿ ಪ್ರೀತಿಸಿದನು ಎಂಬದು ಸ್ಪಷ್ಟವಾದ ಸಂಗತಿಯಾಗಿತ್ತು.

ನಮ್ಮ ಸ್ಥಳದಲ್ಲಿ ಸಾಯಲು ತನ್ನ ಮಗನಾದ ಯೇಸು ಕ್ರಿಸ್ತನನ್ನು ಕಳುಹಿಸಿಕೊಟ್ಟು ದೇವರು ಇಂಥದ್ದೇ ಕಾರ್ಯವನ್ನು ಮಾಡಿದನು. ಜನರು ನಮಗೇನು ಮಾಡಬೇಕೆಂದು ನಾವು ಬಯಸುತ್ತೇವೆಯೋ ಅದನ್ನು ನಾವು ಅವರಿಗೆ ಮಾಡಬೇಕು ಎಂಬದಾಗಿ ಯೇಸು ಕ್ರಿಸ್ತನು ಹೇಳಿದ್ದಾನೆ (ಮತ್ತಾಯ ೭:೧೨) ಮತ್ತು ತನ್ನ ಪ್ರಾಣವನ್ನು ಕೊಡುವ ಮೂಲಕ ಆತನು ತನ್ನ ಮಾತುಗಳಂತೆಯೇ ನಡೆದಿದ್ದಾನೆ. ದೇವರು ತನ್ನಲ್ಲಿದ್ದ ಎಲ್ಲವನ್ನೂ ನಮಗೆ ಕೊಟ್ಟನು ಮತ್ತು ನಾವೂ ಆತನಿಗೆ ಇದನ್ನೇ ಮಾಡಬೇಕೆಂದು ಆತನು ಬಯಸುತ್ತಾನೆ.

ನಾನು ಲೋಕದಲ್ಲಿರುವ ಎಲ್ಲವುಗಳಿಗಿಂತ ಹೆಚ್ಚಾಗಿ ದೇವರನ್ನು ಪ್ರೀತಿಸುತ್ತೇನೆ ಮತ್ತು ಆತನು ಕೇಳುವ ಎಲ್ಲವನ್ನೂ ಕೊಡುವ ಆಯ್ಕೆ ಮಾಡಿಕೊಳ್ಳುತ್ತೇನೆ.

## ವಿಶ್ಲೇಷಣೆ ೞ


ಪ್ರಶ್ನೆ ಪತ್ರಿಕೆಗೆ ಉತ್ತರಿಸುವಾಗ ಆಕೆಗೆ ಬಹಳ ಗಾಬರಿಯಾಯಿತು. ಎಲ್ಲರೂ ಪರೀಕ್ಷೆ ಬರೆದ ನಂತರ ಶಿಕ್ಷಕಿಯು ಉತ್ತರ ಪತ್ರಿಕೆಗಳನ್ನು ತಿದ್ದಿದರು ಮತ್ತು ಫಲಿತಾಂಶಗಳನ್ನು ತಿಳಿಸಿದರು. ಮರಿಯಳನ್ನು ಬಿಟ್ಟು ಉಳಿದವರೆಲ್ಲರೂ ಪರಿಕ್ಷೆಯಲ್ಲಿ ಉತ್ತೀರ್ಣರಾಗಿದ್ದರು. ಇದು ಆಕೆಯ ಸಹಪಾಠಿಗಳಿಗೆ ಗೊತ್ತಾದಾಗ ಅವರೆಲ್ಲರೂ ಆಕೆಯನ್ನು ಗೇಲಿ ಮಾಡಿದರು. ಮರಿಯಳಿಗೆ ಬಹಳ ದುಃಖವಾಯಿತು.



## ಚಟುವಟಿಕೆ ೞ

**ಕಂಡುಹಿಡಿಯುವ ತಂತ್ರ**

ಮಕ್ಕಳಿಗೆ ಲೌಕಿಕ ಕಾರ್ಯಗಳು ಬೇಕೋ ಅಥವಾ ಆತ್ಮೀಕ ಕಾರ್ಯಗಳು ಬೇಕೋ ಎಂಬದನ್ನು ತಿಳಿಯಲು ಈ ಚಟುವಟಿಕೆ ಸಹಕಾರಿಯಾಗಿರುತ್ತದೆ. ತರಗತಿಯ ಸಮಯದಲ್ಲಿ ಕಂಡು ಹಿಡಿಯುವ ಮೂರು ತಂತ್ರಗಳಿರುತ್ತವೆ; ಅವು ಯಾವು ಎಂಬದು ನಿಖರವಾಗಿ ಗೊತ್ತಿಲ್ಲ ಎಂದು ಮಕ್ಕಳಿಗೆ ಹೇಳಿರಿ.



ತಂತ್ರಗಳು:

೧. ಮಕ್ಕಳಿಗೆ ಕಾಣಿಸುವ ಹಾಗೆ ತರಗತಿಯೊಳಗೆ ಕೆಲವು ನಾಣ್ಯಗಳನ್ನು ಇಡಿರಿ. ಹಾಗೂ ತರಗತಿಯ ಸಮಯದಲ್ಲಿ ಯಾರಾದರೂ ಅವುಗಳನ್ನು ತೆಗೆದುಕೊಳ್ಳುತ್ತಾರೆಯೇ ಅಥವಾ ಅವುಗಳು ಕಣ್ಣಿಗೆ ಬೀಳುವಾಗ ಏನು ಮಾಡುತ್ತಾರೆ ಎಂದು ಗಮನಿಸಿರಿ. ನಾಣ್ಯಗಳನ್ನು ತೆಗೆದುಕೊಳ್ಳದಿದ್ದರೆ ಮಕ್ಕಳು ಪರೀಕ್ಷೆಯಲ್ಲಿ ಪಾಸಾಗುತ್ತಾರೆ.

೨. ಪ್ರತಿಯೊಂದು ಮಗುವಿಗೆ ಆಟದ ವಸ್ತುಗಳನ್ನು ತನ್ನಿರಿ, ಆದರೆ ಅವುಗಳು ಸಮಾನವಾಗಿರಬಾರದು. ಕೆಲವು ಉಳಿದವುಗಳಿಗಿಂತ ಉತ್ತಮವಾಗಿರುತ್ತವೆ. ನಿಮಗೆ ಆಟದ ವಸ್ತುಗಳನ್ನು ತಂದಿದ್ದೇವೆ ಆದ್ದರಿಂದ ನೀವು ಮುಂದೆ ಬಂದು ಒಂದನ್ನು ತೆಗೆದುಕೊಳ್ಳಬಹುದು ಎಂಬದಾಗಿ ಮಕ್ಕಳಿಗೆ ಹೇಳಿರಿ. ಯಾವ ಮಗು ಉತ್ತಮವಾಗಿರುವದನ್ನು ತೆಗೆದುಕೊಳ್ಳುವದಿಲ್ಲವೋ ಆ ಮಗು ಆಟದಲ್ಲಿ ಗೆಲ್ಲುತ್ತದೆ.

೩. ಅವರಿಗೆ ಸೇವೆ ಮಾಡುವ ಅವಕಾಶ ಕೊಡಿರಿ. ತರಗತಿ ಮುಗಿದ ನಂತರ ಕೊಠಡಿಯನ್ನು ಶುಚಿಗೊಳಿಸುವಂತೆ ಮಕ್ಕಳಿಗೆ ಹೇಳಿರಿ. ಯಾವ ಮಗು ಉತ್ತಮವಾಗಿ ಶುಚಿಗೊಳಿಸುತ್ತದೆ ಆ ಮಗು ಗೆಲ್ಲುತ್ತದೆ.

ಮುಕ್ತಾಯ: ಈ ಮೂರೂ ಪರೀಕ್ಷೆಗಳು ಮುಗಿದ ನಂತರ, ಪುರಾವೆ ಏನು, ಪಾಸಾದವರು ಯಾರು ಮತ್ತು ಯಾಕೆ ಎಂಬದನ್ನು ಮಕ್ಕಳಿಗೆ ವಿವರಿಸಿರಿ.

## ಟೈಮ್ ಲೈನ್ ೫

ಅಬ್ರಹಾಮನ ಜೀವನದ ಗೆರೆ ಎಳೆಯಿರಿ.

ಪ್ರಶ್ನೆ: ಅಬ್ರಹಾಮನು ಜನಿಸಿದಾಗ ನೋಹನಿಗೆ ಎಷ್ಟು ವರ್ಷ ವಯಸ್ಸಾಗಿತ್ತು? ಉತ್ತರ: ೮೯೦ ವರ್ಷಗಳು

ಪ್ರಶ್ನೆ: ಅಬ್ರಹಾಮನು ಎಷ್ಟು ವರ್ಷ ಬದುಕಿದನು? ಉತ್ತರ: ೧೭೫ ವರ್ಷಗಳು.

## ಒಗಟಿನ ಉತ್ತರಗಳು ೫




| | | | | | | | | | | |
|---|---|---|---|---|---|---|---|---|---|---|
| ಶ್ವ | ಷ | ಝ್ | ಕ್ರೈ | ತಿ | ಲ | ಬ | ತ್ಮೀ | ಳಿ | ವ | ಹ |
| ಕ | ನಾ | ವು | ಕ್ | ಪ್ರಾ | ಳಿ | ತ್ಮೀ | ತೆ | ರೀ | ಕ್ | ಕ್ರೈ |
| ಕ್ರೈ | ವೆ | ಅ | ಧ್ಯ | ಯ | ನ | ಯು | ದೇ | ರ | ಧ್ಯ | ಸ್ತ |
| ಪಾ | ಪ | ಶ್ವ | ಲ | ತ್ಮೀ | ಐ | ಜೀ | ವ | ನ | ಧ್ | ಯ |
| ಪ್ರಾ | ರೀ | ರ್ಯ | ಡ | ಇ್ | ಕ್ರೈ | ಸ್ತ | ರು | ದು | ಮು | ರಿ |
| ಣಿ | ಕ್ಷೆ | ತ್ಮೀ | ಮ್ಯೈ | ಐ | ಮೆ | ನಂ | ವಿ | ದ | ನು | ಶಿ |
| ದ | ಡ | ಲಿ | ಖ್ಯ | ಗ | ಧ್ಯ | ಣ | ಪಾ | ಫ | ಪ್ರಾ | ಸ್ತು |
| ನ | ಝು | ಮು | ತ್ಮೀ | ನೀ | ನು | ಯ | ಳ | ಪ್ರ | ಲ | ಜ |
| ಧ್ | ಪ್ರಾ | ಭ್ | ಹ | ತಿ | ಕ್ರೈ | ಮೆ | ಆ | ತ್ಮೀ | ಕ | ತೆ |
| ಫ | ಮು | ಭೂ | ಮಿ | ಗಿ | ಧಿ | ಜ್ | ಮಿ | ರ | ಪಿ | ಸಿ |



## ಪ್ರಶ್ನೆಗಳು ಮತ್ತು ಉತ್ತರಗಳು ೫

೧. ಯಾರೋ ಒಬ್ಬರು ನಿಮಗಿಂತ ಉತ್ತಮವಾಗಿ ಕಾರ್ಯಮಾಡಿದ ಕಾರಣದಿಂದ ನಿಮ್ಮ ಸ್ಥಾನವನ್ನು ಕಸಿದುಕೊಂಡರೆ ನೀವೇನು ಮಾಡುವಿರಿ? (ಕಹಿತನಕ್ಕೆ ಒಳಗಾಗದೆ, ಆ ವ್ಯಕ್ತಿಯನ್ನು ಅಥವಾ ಶಿಕ್ಷಕನನ್ನು ಕ್ಷಮಿಸಲು ಸಹಾಯ ಮಾಡುವಂತೆ ದೇವರನ್ನು ಹೇಗೆ ಬೇಡಿಕೊಳ್ಳುವಿರಿ ಎಂಬದನ್ನು ಚರ್ಚಿಸಿರಿ. ಮುಂದಿನ ಅವಕಾಶಕ್ಕಾಗಿ ನೀವು ಯಾವ ರೀತಿ ಓದುವಿರಿ ಅಥವಾ ಸಿದ್ಧರಾಗುವಿರಿ ಎಂಬದನ್ನೂ ಚರ್ಚಿಸಿರಿ).

೨. ದೇವರು ನಿಮಗೆ ಕಡೆಯದಾಗಿ ನೀಡಿದ ಪರೀಕ್ಷೆ ಯಾವುದು? (ದೊಡ್ಡವರಾಗಿರಬಹುದು ಅಥವಾ ಚಿಕ್ಕವರಾಗಿರಬಹುದು, ದೇವರು ತಮಗೆ ಸಹಾಯ ಮಾಡಿದ ಅಥವಾ ತಮ್ಮನ್ನು ಪ್ರೇರೇಪಿಸಿದ ಸಮಯವನ್ನು ಅವರೆಲ್ಲರೂ ಹಾದುಹೋಗಿರುತ್ತಾರೆ. ಒಂದು ಸಂದರ್ಭವನ್ನು ಹಂಚಿಕೊಳ್ಳಲು ಅವರಿಗೆ ಅವಕಾಶ ಕೊಡಿರಿ. ಈ ಪಠ್ಯದ ಬರಹಗಾರ್ತಿಯಾಗಿರುವ ಕ್ರಿಸ್ಟಿನಾರವರ ಜೀವಿತದಲ್ಲಿ ಒಂದು ಘಟನೆ ಸಂಭವಿಸಿದೆ, ಅವರು ಹೇಳುವದೇನೆಂದರೆ: ನಾನು ಚಿಕ್ಕವಳಾಗಿದ್ದಾಗ ನನಗೆದುರಾದ ಚಿಕ್ಕ ಪರೀಕ್ಷೆ ನನಗೆ ನೆನಪಿದೆ. ನಾನು ಯಾವ ನೃತ್ಯಗಳಿಗೂ ಹೋಗುವದಿಲ್ಲ ಎಂದು ಒಮ್ಮೆ ದೇವರಿಗೆ ಪ್ರಮಾಣ ಮಾಡಿದೆನು. ಅದು ಬಹಳ ಸುಲಭ ಎಂಬದಾಗಿ ನಾನು ಅಂದುಕೊಂಡಿದ್ದೆನು, ಆದರೆ ನನ್ನ ಸಭೆಯಲ್ಲಿ ಒಂದು ನೃತ್ಯ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು! ಎಂಥಾ ಆಶ್ಚರ್ಯ! ನನ್ನ ಪ್ರಮಾಣವನ್ನು ಕಾಪಾಡಿಕೊಳ್ಳುವದು ಮತ್ತು ಕ್ರೈಸ್ತೀಯ ಭಾಗಯಾಗದೆ ಹಿಂದೆ ಉಳಿಯುವದು ಬಹಳ ಕಷ್ಟವಾಗಿತ್ತು).

೩. ನಮ್ಮ ಆತ್ಮೀಕ ಜೀವಿತದಲ್ಲಿ ನಾವು ಒಳ್ಳೆಯ ಅಂಕಗಳನ್ನು ಪಡೆಯಲು ಹೇಗೆ ಸಾಧ್ಯ? (ಇಲ್ಲಿ ನಾವು ನಮ್ಮ ವಿದ್ಯಾರ್ಥಿಗಳಿಗೆ ಜನರು ನೋಡಲೆಂದು ಮಾತ್ರವೇ "ಧಾರ್ಮಿಕ ಕಾರ್ಯಗಳನ್ನು" ಮಾಡುವ ಫರಿಸಾಯರಾಗಲು ತರಬೇತಿ ಕೊಡದಂತೆ ಎಚ್ಚರವಹಿಸಬೇಕು). ಧಾರ್ಮಿಕ ಕಾರ್ಯಗಳು ಮತ್ತು ಪೂರ್ಣಹೃದಯದಿಂದ ಯೇಸು ಕ್ರಿಸ್ತನನ್ನು ಹಿಂಬಾಲಿಸುವದರ ನಡುವೆಯಿರುವ ವ್ಯತ್ಯಾಸವನ್ನು ತಿಳಿಯಲು ನಾವು ಅವರಿಗೆ ಸಹಾಯ ಮಾಡಬೇಕು. ಜನರು ನೋಡುವ ಕಾರ್ಯಗಳನ್ನು ಮಾತ್ರವೇ ನಾವು ಮಾಡುತ್ತಿದ್ದೇವೆಯೇ? ಯಾರೂ ನೋಡದಿದ್ದರೂ ದೇವರು ಬಯಸುತ್ತಿದ್ದಾನೆ ಎಂಬ ಕಾರಣದಿಂದ ನಾನು ಕಾರ್ಯಗಳನ್ನು ಮಾಡುತ್ತಿದ್ದೇನೆಯೇ?)

## ಆಟ ೫

### ವಸ್ತುವನ್ನು ಊಹಿಸಿರಿ



* ಹಲವಾರು ವಸ್ತುಗಳನ್ನು ಒಟ್ಟುಗೂಡಿಸಿರಿ (ಹೂವು, ಪೆನ್, ಬಟನ್ಸ್, ಬಾಲು, ಬಿಲ್ಲು, ಕಿವಿ ಓಲೆ, ಇತ್ಯಾದಿ). ಮಕ್ಕಳಿಗೆ ತೋರಿಸಬೇಡಿರಿ.
* ಮಕ್ಕಳ ಕಣ್ಣುಗಳಿಗೆ ಬಟ್ಟೆ ಕಟ್ಟಿರಿ ಮತ್ತು ವಾಸನೆ ನೋಡುವ ಮೂಲಕ ಯಾವ ವಸ್ತು ಎಂದು ಗುರುತಿಸಲು ಹೇಳಿರಿ.
* ನೀವು ಮಕ್ಕಳನ್ನು ಗುಂಪಾಗಿ ವಿಂಗಡಿಸಬೇಕು ನಂತರ ವಸ್ತುಗಳನ್ನು ಒಂದು ಚೀಲದೊಳಗೆ ಹಾಕಬೇಕು ಮತ್ತು ಅದನ್ನು ಪ್ರತಿಯೊಂದು ಗುಂಪಿಗೂ ಕೊಟ್ಟು ಸಾಧ್ಯವಾದಷ್ಟು ವಸ್ತುಗಳನ್ನು ಮುಟ್ಟು ಅದು ಏನು ಎಂದು ಹೇಳಬೇಕು.

## ಹಾಜರಾತಿ ೪




ತರಗತಿಗೆ ಹಾಜರಾದದ್ದಕ್ಕೆ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡುವ ಸಲುವಾಗಿ ಮತ್ತೊಂದು ಕಾರ್ಡ್ ಪಡೆಯಬೇಕಾದರೆ ಮುಂದಿನ ವಾರ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:

ಅಬ್ರಹಾಮ

## ಹೋಮ್ ವರ್ಕ್ ೫


### ಅಸೈನ್ಮೆಂಟ್

ನೀವು ನಿಮ್ಮ ಜೀವಿತದ ಮೂಲಕ ಮಾಡಬೇಕೆಂದು ಬಯಸುವ ಕಾರ್ಯಗಳು ಅಂದರೆ ನಿಮ್ಮ ಕನಸುಗಳನ್ನು ಬರೆಯಬೇಕಾದದ್ದು ಈ ವಾರದ ನಿಮ್ಮ ಅಸೈನ್ಮೆಂಟ್ ಆಗಿದೆ. ಅವು ನಿಮ್ಮ ಅಚ್ಚುಮೆಚ್ಚಿನ ವಸ್ತುಗಳಾಗಿರಬಹುದು, ಅಂದರೆ ಗಗನಯಾತ್ರಿಯಾಗುವದು, ಈಜುಗಾರನಾಗುವದು, ಸೈನಿಕನಾಗುವದು, ವೈದ್ಯನಾಗುವದು ಅಥವಾ ವ್ಯಾಪಾರಿಯಾಗುವದು. ದೊಡ್ಡದಾಗಿ ಕನಸು ಕಾಣಿರಿ-ನಿಮ್ಮ ದೇವರು ದೊಡ್ಡವನಾಗಿದ್ದಾನೆ. ನಂತರ ನೀವು ದೇವರಿಗಾಗಿ ಬಿಟ್ಟು ಕೊಡಬೇಕಾಗಿರುವದು ಏನಾದರೂ ಇದೆಯೇ ಎಂದು ವಿಚಾರಿಸಿರಿ, ಅದರ ಬಗ್ಗೆ ನಿಮ್ಮ ಶಿಕ್ಷಕರನ್ನು ಕೇಳಿರಿ, ನಂತರ ಈ ವಾರದಲ್ಲಿ ಮಾಡಿರಿ.

**ಓದಿರಿ**

ದಿನ ೧: ಆದಿಕಾಂಡ ೨೫:೧೯-೨೬
ದಿನ ೨: ಆದಿಕಾಂಡ೨೫:೨೭-೩೪
ದಿನ ೩: ಆದಿಕಾಂಡ ೨೭:೧-೧೭
ದಿನ ೪: ಆದಿಕಾಂಡ ೨೭:೧೮-೨೯
ದಿನ ೫: ಆದಿಕಾಂಡ ೨೭:೩೦-೪೫

# ೬. ಆತ್ಮೀಕ ವಿಷಯಗಳನ್ನು ಗೌರವಿಸಿರಿ



**ವೀರ: ಇಸಾಕ**

ಆದಿಕಾಂಡ ೨೫:೧೯-೩೪, ೨೭:೧-೪೦, ಇಬ್ರಿಯ ೧೧:೨೦

## ಕಂಠಪಾಠ ವಚನ ೬

ಮಾರ್ಕ ೮:೩೬ "ಒಬ್ಬನು ಪ್ರಪಂಚವನ್ನೆಲ್ಲಾ ಗೆದ್ದು, ಪ್ರಾಣವನ್ನೇ ಕಳೆದುಕೊಂಡರೆ ಅದರಿಂದ ಬರುವ ಲಾಭವಾದರೂ ಏನು?"

## ಕಥೆಯ ಅವಶ್ಯಕತೆ ೬



ಒಂದುದಿನ ಬೆಳಗ್ಗೆ ಮತ್ತಾಯನ ತಾಯಿ ಅವನನ್ನು ಎಬ್ಬಿಸಿ ಅಜ್ಜೀ ಮನೆಗೆ ಹೋಗಿ ಒಂದು ಲೋಟ ಸಕ್ಕರೆ ತೆಗೆದುಕೊಂಡು ಬರುವಂತೆ ಹೇಳಿದರು. ಅವನು ಎದ್ದು ತನ್ನ ಅಜ್ಜಿಯ ಮನೆಗೆ ಹೋದನು. ಮನೆಯೊಳಗೆ ಹೋದ ಕೂಡಲೇ ಮೇಜಿನ ಮೇಲೆ ಹತ್ತು ರುಪಾಯಿ ನೋಟು ಇರುವದನ್ನು ನೋಡಿದನು. ಅವನು, ಅಜ್ಜೀ ಅಜ್ಜೀ ಎಂದು ಕೂಗಿದನು ಆದರೆ ಆಕೆ ಯಾವ ಉತ್ತರವನ್ನೂ ಕೊಡಲಿಲ್ಲ. ಮನೆಯಲ್ಲಿ ಯಾರೂ ಇಲ್ಲ, ಒಂದುವೇಳೆ ನಾನು ಆ ಹತ್ತು ರುಪಾಯಿ ತೆಗೆದುಕೊಂಡರೆ ಯಾರಿಗೂ ಗೊತ್ತಾಗುವದಿಲ್ಲ, ನಾನು ಬೇಕಾದಷ್ಟು ಕ್ಯಾಂಡಿ ತೆಗೆದುಕೊಳ್ಳಬಹುದು ಎಂದು ಮತ್ತಾಯನು ಯೋಚಿಸಿದನು. ಕೆಲವು ನಿಮಿಷಗಳಾದ ನಂತರ ಅಜ್ಜಿ ಬಂದರು ಮತ್ತು ಅವನಿಗೆ ಒಂದು ಲೋಟ ಸಕ್ಕರೆ ಕೊಟ್ಟರು.

## ಮುಖ್ಯ ಪಾಠ ೬

ಕಳೆದ ವಾರ ನಾವು ಪರೀಕ್ಷೆಯಲ್ಲಿ ಪಾಸಾಗುವದರ ಬಗ್ಗೆ ಕಲಿತುಕೊಂಡೆವು. ಇಂದು ನಾವು ಶಾರೀರಿಕ ವಿಷಯಗಳಿಗಿಂತ ಹೆಚ್ಚಾಗಿ ಆತ್ಮೀಕ ವಿಷಯಗಳಿಗೆ ಗೌರವಿಸುವದನ್ನು ಕಲಿತುಕೊಳ್ಳೋಣ.

ಅಬ್ರಹಾಮನ ಮಗನಾದ ಇಸಾಕನು ಬೆಳೆದು ತನ್ನದೇ ಆದ ಕುಟುಂಬವನ್ನು ಹೊಂದಿದ್ದನು. ಅವನು ತಾನಾಗಿಯೇ ತನಗೆ ಹೆಂಡತಿಯನ್ನು ಆರಿಸಿಕೊಳ್ಳುವ ಬದಲು, ತನ್ನ ತಂದೆ ಹುಡುಗಿಯನ್ನು ಆರಿಸಿಕೊಡಲು ಅವಕಾಶ ಕೊಟ್ಟನು (ಆದಿಕಾಂಡ ೨೪). ನಂತರ ಇಸಾಕನು ಹಾಗೂ ಅವನ ಹೆಂಡತಿ ರೆಬೆಕ್ಕಳಿಗೆ ಅವಳಿ ಮಕ್ಕಳಾದರು. ಅವರ ಹೆಸರು ಏಸಾವ ಮತ್ತು ಯಾಕೋಬ.

ಒಂದುದಿನ ಏಸಾವನು ಬೇಟೆಯಿಂದ ಮನೆಗೆ ಹಿಂದಿರುಗಿ ಬಂದಾಗ ಬಹಳ ಹಸಿವೆಗೊಂಡಿದ್ದನು, ಹಸಿವೆಯಿಂದ ಸಾಯುವೆನೋನೋ ಎಂಬದಾಗಿ ಯೋಚಿಸಿದನು! ತಿನ್ನಲು ಏನಾದರು ದೊರೆತರೆ ಏನು ಬೇಕಾದರೆ ಕೊಡುವದಾಗಿ ಅಂದುಕೊಂಡನು. ನಿಮಗೆ ಏನಾದರು ಬೇಕಾಗಿದ್ದರೆ ಅದಕ್ಕಾಗಿ ಏನು ಬೇಕಾದರೂ ಮಾಡಲು ನೀವು ಸಿದ್ಧರಾಗುತ್ತೀರೋ? ಯಾಕೋಬನು ಏಸಾವನನ್ನು ವಂಚಿಸಲು ಯೋಚಿಸಿದನು. ಅವನು ಏಸಾವನಿಗೆ ನೀನು ನಿನ್ನ ಚೊಚ್ಚಲುತನಕ ಹಕ್ಕನ್ನು ಕೊಟ್ಟರೆ ನಾನು ನಿನಗೆ ತಿನ್ನಲು ಕೊಡುತ್ತೇನೆ ಎಂದು ಹೇಳಿದನು! ಅವನು ಅಲಸಂದಿ ಕಾಳುಗಳಿಗಾಗಿ ತನ್ನ ಜೀವಿತ ಪ್ರಾಮುಖ್ಯ ಭಾಗವನ್ನೇ ಕೊಟ್ಟುಬಿಟ್ಟನು.

ಆಗಿನ ದಿವಸಗಳಲ್ಲಿ ತಂದೆಗಳು ತಾವು ಸಾಯುವ ಮೊದಲು ತಮ್ಮ ಮಕ್ಕಳನ್ನು ಆಶೀರ್ವದಿಸುತ್ತಿದ್ದರು. ಇಸಾಕನು ವೃದ್ಧನಾಗಿದ್ದನು, ಅವನಿಗೆ ಕಣ್ಣು ಸರಿಯಾಗಿ ಕಾಣಿಸುತ್ತಿರಲಿಲ್ಲ, ಅವನು ಏಸಾವನನ್ನು ಆಶೀರ್ವದಿಸಲು ಬಯಸಿದನು. ಆದರೆ ಯಾಕೋಬನು ತನ್ನ ತಾಯಿಯ ಮಾತು ಕೇಳಿ, ಏಸಾವನ ವಸ್ತ್ರಗಳನ್ನು ಧರಿಸಿಕೊಂಡನು ಮತ್ತು ವಂಚನೆಯಿಂದ ಆಶೀರ್ವಾದಗಳನ್ನು ಪಡೆದುಕೊಂಡನು! ಕೆಲವು ಹಲಸಂದಿ ಕಾಳುಗಳಿಂದ

ಯಾವ ವ್ಯತ್ಯಾಸವೂ ಆಗುವದಿಲ್ಲವೆಂದು ಏಸಾವನು ಅಂದುಕೊಂಡಿದ್ದನು, ಆದರೆ ಅವನು ತನ್ನ ಚೊಚ್ಚಲುತನಕ ಹಕ್ಕನ್ನು ಪುನಃ ಪಡೆಯಲು ಬಯಸಿದಾಗ ಅದನ್ನು ಪಡೆಯಲು ಆಗಲಿಲ್ಲ! ಅವನು ಅದನ್ನು ಶಾಶ್ವತವಾಗಿ ಕಳೆದುಕೊಂಡನು!

ಇಸಾಕನು ಆತ್ಮೀಕ ವಿಷಯಗಳನ್ನು ಗೌರವಿಸಿದನು. ತನ್ನ ಸಂತತಿಯವರು ವಾಗ್ದಾನ ದೇಶವನ್ನು ಸ್ವತಂತ್ರಿಸಿಕೊಳ್ಳುವರು ಎಂಬ ದೇವರ ವಾಗ್ದಾನವನ್ನು ಅವನು ನಂಬಿದನು ಮತ್ತು ಯಾಕೋಬನಿಗೂ ಅದೇ ವಾಗ್ದಾನಗಳನ್ನು ಆಶೀರ್ವಾದ ಮಾಡಿದನು.

ದೇವರು ನಮ್ಮ ಪ್ರತಿಯೊಬ್ಬರ ವಿಷಯದಲ್ಲಿಯೂ ಜನ್ಮ ಹಕ್ಕು, ಯೋಜನೆ ಮತ್ತು ಆಶೀರ್ವಾದವನ್ನು ಹೊಂದಿದ್ದಾನೆ. ಆದರೆ ನಾವು ಎಚ್ಚರಿಕೆಯಿಂದ ಇರದೆ ಹೋದರೆ, ನಮ್ಮ ಆಯ್ಕೆಗಳ ಮೂಲಕ ನಮಗಿರುವ ಯೋಜನೆಯನ್ನು ಕಳೆದುಕೊಳ್ಳುತ್ತೇವೆ! ಹೀಗೆ ಮಾಡುವದು ಒಂದು ರೀತಿಯಲ್ಲಿ ಪಾಪವಾಗಿದೆ. ನೀವು ಸುಳ್ಳು ಹೇಳಿ, ನಿಮಗೆ ಬಂದಿರುವ ಅಂಕಗಳಿಗಿಂತ ಹೆಚ್ಚು ಅಂಕಗಳು ಬಂದಿವೆ ಎಂದು ಹೇಳುವದಾದರೆ, ಸ್ವಲ್ಪ ಕಾಲ ಒಳ್ಳೆಯವರಾಗಿ ತೋರಬಹುದು ಆದರೆ ನಿಮ್ಮ ಯಥಾರ್ಥತೆಯನ್ನು ನೀವು ಕಳೆದುಕೊಂಡಿರುವಿರಿ! ಇದಕ್ಕೂ ಮೊದಲು ಮತ್ತಾಯನು ತನ್ನ ಅಜ್ಜಿಯ ಮನೆಯಲ್ಲಿದ್ದ ಹತ್ತು ರುಪಾಯಿಯನ್ನು ತೆಗೆದುಕೊಳ್ಳಲು ಯೋಚಿಸುತ್ತಿದ್ದನು, ಆದರೆ ರೂತಳು ಮನೆಯೊಳಗೆ ಬಂದು ಅದನ್ನು ತಪ್ಪಿಸಿದಳು! ಹತ್ತು ರುಪಾಯಿಗಿಂತ ನಿಮ್ಮ ಆತ್ಮ ಬೆಲೆಯುಳ್ಳದ್ದಾಗಿದೆ ಎಂದು ಆಕೆ ಅವನಿಗೆ ಹೇಳಿದಾಗ, ಅವನು ಅದನ್ನು ಅಲ್ಲಿಯೇ ಇಟ್ಟುಬಿಟ್ಟನು.

ನೀವು ದೊಡ್ಡವರಾದ ಮೇಲೆ ಇದು ಮತ್ತಷ್ಟು ಅಪಾಯಕಾರಿಯಾಗುತ್ತದೆ. ಅನೇಕ ಕ್ರೈಸ್ತರು ಒಬ್ಬ ವ್ಯಕ್ತಿಯ ಹೃದಯವನ್ನು ಅರ್ಥಮಾಡಿಕೊಳ್ಳುವ ಬದಲು ಸೌಂದರ್ಯ ಮತ್ತು ಸ್ಥಾನಮಾನಗಳ ಆಧಾರದ ಮೇರೆಗೆ ಮದುವೆ ಮಾಡಿಕೊಳ್ಳುತ್ತಾರೆ. ನಂತರ, ಅವರು ದೇವರ ಸೇವೆ ಮಾಡಲು ಮುಂದಾಗುವಾಗ, ಅವರ ಸಂಗಾತಿಯಿಂದಲೇ ಅವರಿಗೆ ಅಡ್ಡಿ ಎದುರಾಗುತ್ತದೆ. ನೋಡಿ ಯಾರನ್ನು ಮದುವೆ ಮಾಡಿಕೊಳ್ಳಬೇಕು ಎಂಬ ತೀರ್ಮಾನವು ಶಾಶ್ವತವಾದದ್ದಾಗಿದೆ! ಇಸಾಕನು ಮತ್ತು ರೆಬೆಕ್ಕಳಿಗೆ ಅಗೌರವವನ್ನು ತಂದ ಸ್ತ್ರೀಯನ್ನು ಏಸಾವನು ಮದುವೆ ಮಾಡಿಕೊಂಡನು (ಆದಿಕಾಂಡ ೨೭:೪೬). ಆದರೆ ಇಸಾಕನು ಮತ್ತು ನಂತರದಲ್ಲಿ ಅವನ ಮಗನಾದ ಯಾಕೋಬನು ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಸಮಯದಲ್ಲಿ ಆತ್ಮೀಕ ಕಾರ್ಯಗಳನ್ನು ಗೌರವಿಸಿದರು.

ನಾವು ನಮ್ಮ ವಾಗ್ದಾನ ಫಲವನ್ನು ಹೊಂದದಂತೆ ಈ ಲೋಕದ ಚಿಂತೆ ಮತ್ತು ಐಶ್ವರ್ಯದಿಂದಾಗುವ ವಂಚನೆಯು ನಮಗೆ ತೊಂದರೆಯನ್ನುಂಟು ಮಾಡುತ್ತವೆ ಎಂಬದಾಗಿ ಯೇಸು ಕ್ರಿಸ್ತನು ಹೇಳಿದ್ದಾನೆ (ಮತ್ತಾಯ ೧೩:೨೨). ನೀವು ನಿಮಗೆ ದೊರೆತಿರುವ ವಾಗ್ದಾನವನ್ನು ಕಡೆಗಣಿಸಬೇಡಿರಿ ಮತ್ತು ಯಾವುದಕ್ಕಾಗಿಯೂ ಅದನ್ನು ಬಿಟ್ಟು ಕೊಡಬೇಡಿರಿ.

ನಾನು ಲೌಕಿಕ ಕಾರ್ಯಗಳಿಗಿಂತ ಹೆಚ್ಚಾಗಿ ನನ್ನ ಜೀವಿತದ ಆತ್ಮೀಕ ಕಾರ್ಯಗಳನ್ನು ಗೌರವಿಸುತ್ತೇನೆ.

## ವಿಶ್ಲೇಷಣೆ ೬



ಆ ಕ್ಷಣದಲ್ಲಿ ರೂತಳು ಮನೆಯೊಳಗೆ ಪ್ರವೇಶಿಸಿದಳು ಮತ್ತು ಕಳ್ಳತನವನ್ನು ತಪ್ಪಿಸಿದಳು! ಹತ್ತು ರುಪಾಯಿಗಳಿಗಿಂತ ನಿನ್ನ ಆತ್ಮ ಹೆಚ್ಚು ಬೆಲೆಯುಳ್ಳದಾಗಿದೆ ಎಂದು ಅವಳು ಮತ್ತಾಯನಿಗೆ ಹೇಳಿದಳು! ಮತ್ತಾಯನಿಗೆ ತಾನು ಮಾಡುತ್ತಿದ್ದ ಕಾರ್ಯ ಅರ್ಥವಾಯಿತು ಮತ್ತು ಕೂಡಲೇ ಹಣವನ್ನು ಮೇಜಿನ ಮೇಲೆ ಇಟ್ಟುಬಿಟ್ಟನು, ಅವನ ಸ್ನೇಹಿತೆ ರೂತಳಿಗೆ ಕೃತಜ್ಞತೆ ಸಲ್ಲಿಸಲೇಬೇಕು.

## ಚಟುವಟಿಕೆ ೬

### ತೀರ್ಮಾನಗಳ ಸ್ಮಾರಕ



ಈ ಚಟುವಟಿಕೆಯಲ್ಲಿ, ಮಕ್ಕಳು ಒಂದು ರಿಬ್ಬನ್ ತುಂಡನ್ನು ಸೇಫ್ಟಿ ಪಿನ್ ಗೆ ಸುತ್ತಬೇಕು ಮತ್ತು ಈ ವಾರದಲ್ಲಿ ಅವರು ತೆಗೆದುಕೊಳ್ಳುವ ಪ್ರಾಮುಖ್ಯವಾದ ತೀರ್ಮಾನಗಳನ್ನು ನೆನಪಿಸಿಕೊಳ್ಳಲು ಅದನ್ನು ಉಪಯೋಗಿಸಬೇಕು.

ರಿಬ್ಬನ್ ಅನ್ನು ಗಟ್ಟಿಯಾಗಿ ಕಟ್ಟಬೇಕು. ಆತ್ಮೀಕ ಆಯ್ಕೆಗಳನ್ನು ಮಾಡಿಕೊಳ್ಳುವಂತೆ ದೇವರು ಅವರಿಗೆ ಜ್ಞಾಪಕಪಡಿಸಲಿ ಎಂದು ಒಟ್ಟಾಗಿ ಪ್ರಾರ್ಥಿಸೋಣ.

## ಟೈಮ್ ಲೈನ್ ೬


ಇಸಾಕನ ಜೀವಿತದ ಗೆರೆಯನ್ನು ಎಳೆಯಿರಿ.


ಪ್ರಶ್ನೆ: ಇಸಾಕನು ಜನಿಸಿದಾಗ ಅಬ್ರಹಾಮನು ಎಷ್ಟು ವರ್ಷದವನಾಗಿದ್ದನು? ಉತ್ತರ: ನೂರು ವರ್ಷದವನಾಗಿದ್ದನು

ಪ್ರಶ್ನೆ: ಇಸಾಕನು ಎಷ್ಟು ವರ್ಷ ಬದುಕಿದನು? ಉತ್ತರ: ೧೮೦ ವರ್ಷಗಳು.

## ಒಗಟಿನ ಉತ್ತರಗಳು ೬

| | | | | | | | | | | |
|---|---|---|---|---|---|---|---|---|---|---|
| ಧೇ | ಡು | ಹೋ | ರಿ | ಬ | ಮ | ಇ | ಕಾ | ಕ | ನೀ | ನು |
| ಯಾ | ಟಿ | ಸೂ | ಆ | ಯ್ಕೆ | ಳ | ಸ್ | ಮ | ಯ | ಶ್ | ಇ |
| ತೆ | ಶ | ರು | ತ್ಮೀ | ಶೀ | ಝು | ಢ | ಸೂ | ಭ | ಬೇ | ವ |
| ಹ | ಇ | ಸಾ | ಕ | ಸ | ವಾರ್ | ತ | ರ | ಬ್ಬ | ರು | ಕು |
| ಭ್ | ಲ್ಲ | ಲ | ತೆ | ಫ | ವಿ | ದ | ಥ | ಸ | ಐ | ಬಾ |
| ಶಾ | ಬ | ಸ | ಮ | ಥಿ | ಹೋ | ಅ | ಧ್ಯ | ಯ | ನ | ಧ್ಯ |
| ಪ | ರೀ | ಕ್ಷೆ | ಯಿ | ಸ | ಸೂ | ಹ | ವಿ | ಧೇ | ಯ | ತೆ |
| ಕ | ಇ | ರಿ | ಧೇ | ಲಿ | ಯಾ | ರಿ | ಯ | ಷ | ಯಾ | ಆ |
| ಏ | ಸಾ | ವ | ಕ | ರು | ಡು | ತ | ನ | ಹ | ಕೋ | ತ್ಮೀ |
| ಥ್ | ಧ | ಷ | ತೆ | ಹೋ | ಎ | ಠ | ಪ | ವ | ಬ | ಕ |





## ಪ್ರಶ್ನೆಗಳು ಮತ್ತು ಉತ್ತರಗಳು ೬

೧. ನಾವು ಶಾರೀರಿಕವಾದವುಗಳಿಗಿಂತ ಆತ್ಮೀಕವಾದವುಗಳನ್ನು ಗೌರವಿಸುತ್ತೇವೆ ಎಂಬದನ್ನು ತೋರಿಸುವ ಕೆಲವು ಉದಾಹರಣೆಗಳು ಯಾವುವು? (ವಿದ್ಯಾರ್ಥಿಗಳು ಕೆಲವು ಆಲೋಚನೆಗಳನ್ನು ಚರ್ಚಿಸಲಿ: ಸ್ನೇಹಿತರು, ಕೆಲಸ, ಪ್ರಸಿದ್ಧಿ, ಸಭೆಯ ಸೇವೆ ಇತ್ಯಾದಿ).


೨. ಯಾವುದೋ ಕಾರ್ಯ ಸರಿಯಾಗಿ ಕಾಣುತ್ತಿಲ್ಲ ಎಂದು ನಿಮಗೆ ಅನ್ನಿಸಿದರೆ ಏನು ಮಾಡುವಿರಿ? (ವಿದ್ಯಾರ್ಥಿಗಳಿಗೆ ತಮ್ಮ ಅನುಭವ ಹಂಚಿಕೊಳ್ಳಲು ಅವಕಾಶ ಕೊಡಿರಿ).

೩. ನಾನೊಬ್ಬನೋ ಭಾಗವಹಿಸದೆ ಹೋದರೆ ಏನಾಗುವದು? (ಯಾರೋ ಒಳ್ಳೆಯ ಕಾರ್ಯವನ್ನು ಮಾಡದಿರುವಾಗ ಒಬ್ಬರು ಮಾತ್ರವೇ ಒಳ್ಳೆಯ ಕಾರ್ಯವನ್ನು ಮಾಡೂವದು ಎಷ್ಟು ಕಷ್ಟ ಎಂಬದನ್ನು ಹೇಳಿಕೊಳ್ಳಲು ಅವರಿಗೆ ಅವಕಾಶ ಕೊಡಿರಿ. ನಿರ್ದಿಶ್ಟವಾದ ಪರಿಸ್ಥಿತಿಗಳ ಬಗ್ಗೆ ಮಾತನಾಡಿರಿ).

## ಆಟ ೬

### ಒಳ್ಳೇದು ಮತ್ತು ಕೆಟ್ಟದ್ದು

ಮಕ್ಕಳಿಗೆ ಒಳ್ಳೇದು ಮತ್ತು ಕೆಟ್ಟದ್ದರ ನಡುವೆ ವ್ಯತ್ಯಾಸ ತಿಳಿದುಕೊಳ್ಳಲು ಕಷ್ಟವಾಗುತ್ತದೆ. ಈ ಆಟದಲ್ಲಿ ನಾವು ಆತ್ಮೀಕ ಬೆಲೆಯನ್ನು ಪ್ರತಿನಿಧಿಸುವದನ್ನು ಗುರುತಿಸುವ ಅಭ್ಯಾಸ ಮಾಡಿಕೊಳ್ಳೋಣ.




ಎರಡು ಡಬ್ಬಿಗಳಲ್ಲಿ ಅರ್ಧ ಅರ್ಧ ಅಕ್ಕಿಯನ್ನು ತುಂಬಿಸಿರಿ, ಪ್ರತಿಯೊಂದು ಡಬ್ಬಿಯೊಳಗೆ ೧೫ ಚಿಕ್ಕ ಸೇಪ್ಟಿ ಪಿನ್ ಗಳನ್ನು ಹಾಕಿರಿ. (ಪಿನ್ ಗಳಲ್ಲಿ ಯಾವುದೂ ತೆರೆದಿರಬಾರದು). ಅಕ್ಕಿ ಮತ್ತು ಸೇಪ್ಟಿ ಪಿನ್ ಗಳನ್ನು ಒಟ್ಟಾಗಿ ಬೆರೆಸಿರಿ. ಎರಡು ತಂಡಗಳನ್ನು ಮಾಡಿರಿ. ಪ್ರತಿಯೊಂದು ತಂಡದಿಂದ ಒಂದೊಂದು ಮಗುವಿನ ಕಣ್ಣಿಗೆ ಬಟ್ಟೆ ಕಟ್ಟಿರಿ.

ಶಿಕ್ಷಕಿ 'ಗೋ' ಎಂದು ಹೇಳುವಾಗ ಕಣ್ಣಿಗೆ ಬಟ್ಟೆ ಕಟ್ಟಿರುವ ಇಬ್ಬರು ಮಕ್ಕಲು ತಮ್ಮ ಕೈಯಿಂದ ಸೇಪ್ಟಿ ಪಿನ್ ಗಳನ್ನು ಸಾಧ್ಯವಾದಷ್ಟು ಅಕ್ಕಿ ಡಬ್ಬದಿಂದ ಹುಡುಕಿ ತೆಗೆಯಬೇಕು. ಅಕ್ಕಿಯೊಳಗೆ ಕೈ ಹಾಕುವಾಗ ಅಕ್ಕಿ ಮತ್ತು ಪಿನ್ ಗಳ ನಡುವೆ ವ್ಯತ್ಯಾಸ ತಿಳಿಯುವದು ಅವರಿಗೆ ಕಷ್ಟವಾಗುವದು. ಪ್ರತಿಯೊಂದು ಮಗು ಪಡೆದಿರುವ ಸೇಪ್ಟಿ ಪಿನ್ ಗಳನ್ನು ನೀವು ಲೆಕ್ಕಿಸಬೇಕು. ಯಾವ ತಂಡದವರ ಬಳಿ ಹೆಚ್ಚಿ ಪಿನ್ ಗಳಿರುತ್ತದೆಯೋ ಅವರು ಗೆಲ್ಲುತ್ತಾರೆ.

## ಹಾಜರಾತಿ ೬

ತರಗತಿಗೆ ಹಾಜರಾದದ್ದಕ್ಕೆ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡುವ ಸಲುವಾಗಿ ಮತ್ತೊಂದು ಕಾರ್ಡ್ ಪಡೆಯಬೇಕಾದರೆ ಮುಂದಿನ ವಾರ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:




**ಇಸಾಕ**

## ಹೋಮ್ ವರ್ಕ್ ೬

### ಅಸೈನ್ಮೆಂಟ್

ಈ ವಾರದ ನಿಮ್ಮ ಅಸೈನ್ಮೆಂಟ್, ನೀವು ಬೆಳೆಯಬೇಕಾಗಿರುವ ನಿಮ್ಮ ಚೊಚ್ಚಲುತನಕ ಹಕ್ಕಿನ ಬರೆಯಬೇಕು. ನಿಮ್ಮ ಕುಟುಂಬದ ಚೊಚ್ಚಲುತನಕ ಹಕ್ಕು ಏನೂ ಇಲ್ಲ ಎಂಬದಾಗಿ ಮೊದಲು ಆಲೋಚಿಸಬೇಡಿರಿ. ಅದು ಹೆಚ್ಚು ಬೆಲೆಯುಳ್ಳದ್ದಾಗಿದೆ. ಅದು ಮೆಕಾನಿಕ್ ಆಗಿರಬಹುದು ಅಥವಾ ಇಂಜಿನಿಯರ್ ಆಗಿರಬಹುದು ಅಥವಾ ನರ್ಸ್ ಆಗಿರಬಹುದು. ನೀವು ನಿಮ್ಮ ನೆರೆಹೊರೆಯವರ ಮಧ್ಯದಲ್ಲಿ ಅಥವಾ ನಿಮ್ಮ ದೇಶದಲ್ಲಿ

ವ್ಯತ್ಯಾಸವನ್ನುಂಟು ಮಾಡಬಹುದು. ಹಾಗೇ ನಿಮ್ಮ ಆತ್ಮೀಕ ಚೊಚ್ಚಲುತನದ ಹಕ್ಕಿನ ಬಗ್ಗೆಯೂ ಬರೆಯಿರಿ. ನೀವು ದೇವರ ಮಗುವಾಗಿದ್ದೀರಿ ಮತ್ತು ಆತನ ಸರ್ವಶಕ್ತವಾದ ಕುಟುಂಬಕ್ಕೆ ಸೇರಿದವರಾಗಿದ್ದೀರಿ. ದೇವರು ನಿಮಗೆ ವಿವಿಧ ಕೌಶಲ್ಯಗಳು ಹಾಗೂ ಬಯಕೆಗಳನ್ನು ಕೊಟ್ಟಿದ್ದಾನೆ ಹಾಗೂ ನಿಮ್ಮ ಆತ್ಮೀಕ ಕುಟುಂಬದಲ್ಲಿ ನಿಮ್ಮನ್ನು ಯಶಸ್ವಿಗೆ ನಡೆಸಲು ಆತನು ಇವುಗಳನ್ನು ಉಪಯೋಗಿಸುತ್ತಾನೆ. ಇದನ್ನು ನೀವು ನಿಮ್ಮ ಶಿಕ್ಷಕಿಗೆ ತೋರಿಸಬಹುದು, ಆದರೆ ತೋರಿಸಲೇ ಬೇಕೆಂಬ ಅವಶ್ಯಕತೆಯಿಲ್ಲ. ನಿಮ್ಮ ಹೃದಯವು ದೇವರಿಗೆ ಅಮೂಲ್ಯವಾಗಿದೆ.

**ಓದಿರಿ**

ದಿನ ೧: ಆದಿಕಾಂಡ ೨೮:೧೦-೧೫

ದಿನ ೨: ಆದಿಕಾಂಡ ೨೮:೧೬-೨೨

ದಿನ ೩: ಆದಿಕಾಂಡ ೩೨:೧-೮

ದಿನ ೪: ಆದಿಕಾಂಡ ೩೨:೨೨-೨೭

ದಿನ ೫: ಆದಿಕಾಂಡ ೩೨:೨೮-೩೨

# ೭. ದೇವರ ಆಶೀರ್ವಾದ



**ವೀರ: ಯಾಕೋಬ**

ಆದಿಕಾಂಡ ೨೭:೪೧-೨೮:೨, ೨೮:೧೦-೧೫, ೨೮:೨೦-೨೨, ೩೧:೩-೧೩, ೩೧:೨೨-೨೪, ೩೨:೬-೧೨, ೩೨:೨೨-೩೦, ೩೩:೧-೧೧, ೩೫:೧-೫, ಇಬ್ರಿಯ ೧೧:೨೧

## ಕಂಠಪಾಠ ವಚನ ೭

ಲೂಕ ೧೧:೨೮ " ಅದಕ್ಕೆ ಯೇಸು, "ಅದಕ್ಕಿಂತಲೂ ದೇವರ ವಾಕ್ಯವನ್ನು ಕೇಳಿ, ಅದನ್ನು ಅನುಸರಿಸುವವನು ಹೆಚ್ಚು ಭಾಗ್ಯವಂತನು!" ಎಂದರು."

## ಕಥೆಯ ಅವಶ್ಯಕತೆ ೭



ಮಾರ್ಕನಿಗೆ ಒಬ್ಬ ಸ್ನೇಹಿತನಿದ್ದನು, ಅವನು ಯಾವಾಗಲೂ ಮಾರ್ಕನನ್ನು ಪಾರ್ಟಿಗಳಿಗೆ ಆಹ್ವಾನಿಸುತ್ತಿದ್ದನು, ಆದರೆ ಒಂದುದಿನ ಪಾರ್ಟಿಗೆ ಬಂದಿದ್ದ ಮಕ್ಕಳೆಲ್ಲರೂ ತುಂಬಾ ಕೆಟ್ಟದಾಗಿ ನಡೆದುಕೊಳ್ಳುವದನ್ನು ಮಾರ್ಕನು ಗಮನಿಸಿದನು. ಇನ್ನು ಮುಂದೆ ಪಾರ್ಟಿಗೆ ಹೋಗುವದು ಅವನಿಗೆ ಸರಿ ಕಾಣಿಸಲಿಲ್ಲ. ಮಕ್ಕಳು ಕೆಟ್ಟದಾಗಿ ನಡೆದುಕೊಳ್ಳುವದು ದೇವರಿಗೆ ಇಷ್ಟವಿಲ್ಲ ಎಂಬದು ಅವನು ತಿಳಿದಿದ್ದನು. ನಂತರ ಮತ್ತೊಂದು ರಜಾದಿನದಂದು ಅವನ ಸ್ನೇಹಿತ ಬಂದು ಅವನನ್ನು ಪಾರ್ಟಿಗೆ ಆಹ್ವಾನಿಸಿದನು ಮತ್ತು ಅದು ಉತ್ತಮವಾಗಿರುತ್ತದೆ ಎಂಬದಾಗಿ ಹೇಳಿದನು. ಮಾರ್ಕನು ನಿಜವಾಗಿಯೂ ಹೋಗಬೇಕೆಂದು ಬಯಸಿದನು, ಆದರೆ ಅವನು ದೃಢವಾಗಿ "ಬರುವದಿಲ್ಲ" ಎಂದು ಹೇಳಿದನು. ಮಾರ್ಕನ ಮಾತುಗಳನ್ನು ಕೇಳಿದೊಡನೆ ಅವನ ಸ್ನೇಹಿತನು, "ಒಂದುವೇಳೆ ನೀನು ನನ್ನ ಜೊತೆಯಲ್ಲಿ ಬರಲಿಲ್ಲವೆಂದರೆ, ನಾನು ಇನ್ನೆಂದಿಗೂ ನಿನ್ನ ಜೊತೆಯಲ್ಲಿ ಮಾತನಾಡುವದಿಲ್ಲ. ನೀನು ನಿನ್ನ ಪ್ರಿಯ ಮಿತ್ರನನ್ನು ಕಳೆದುಕೊಳ್ಳಬೇಕಾಗುತ್ತದೆ" ಎಂದು ಹೇಳಿದನು. ಆಗ ಮಾರ್ಕನಿಗೆ ಬಹಳ ಬೇಸರವಾಯಿತು. ಪಾರ್ಟಿಗಳಿಗೆ ಹೋಗುವದು ತಪ್ಪು ಎಂಬದು ಅವನಿಗೆ ಗೊತ್ತಿತ್ತು ಆದರೆ ತನ್ನ ಸ್ನೇಹಿತನನ್ನು ಕಳೆದುಕೊಳ್ಳಲು ಅವನಿಗೆ ಇಷ್ಟವಿರಲಿಲ್ಲ. ಈ ಸಮಯದಲ್ಲಿ ಏನು ಮಾಡಬೇಕೆಂದೇ ಅವನಿಗೆ ಗೊತ್ತಾಗಲಿಲ್ಲ.

## ಮುಖ್ಯ ಪಾಠ ೭

ನಮಗೆ ಜೀವಿತದಲ್ಲಿ (ಶಾರೀರಿಕ) ಭೌತಿಕ ಕಾರ್ಯಗಳು ಅಥವಾ (ಆತ್ಮೀಕ) ದೇವರ ಆಶೀರ್ವಾದಗಳಿಗಳಲ್ಲಿ ಯಾವುದಾದರು ಒಂದಕ್ಕೆ ಹೋರಾಡುವ ಆಯ್ಕೆ ಮಾಡಿಕೊಳ್ಳುವ ಪರಿಸ್ಥಿತಿ ಎದುರಾಗುತ್ತದೆ. ಏಸಾವನ ಚೊಚ್ಚಲುತನದ ಹಕ್ಕನ್ನು ಕಸಿದುಕೊಂಡ ನಂತರ, ಏಸಾವನು ತನ್ನನ್ನು (ಶಾರೀರಿಕವಾಗಿ) ಕೊಲ್ಲುವನೇನೋ ಎಂದು ಭಯಪಟ್ಟು ಯಾಕೋಬನು ಓಡೀ ಹೋದನು ಆದರೂ ತನ್ನ ತಂದೆತಾಯಿಗಳಿಗಳ ಮಾತುಗಳಿಗೆ ವಿಧೇಯನಾಗುವ (ಆತ್ಮೀಕ) ಮೂಲಕ ದೇವರ ಆಶೀರ್ವಾದವನ್ನೂ ಪಡೆದುಕೊಂಡನು. ಅವನು ಹೋಗುವಾಗ ಅವನ ಕೈಯಲ್ಲಿ ಒಂದು ಕೋಲು (ಶಾರೀರಿಕ) ಮಾತ್ರವೇ ಇತ್ತು ಎಂಬದಾಗಿ ಸತ್ಯವೇದವು ಹೇಳುತ್ತದೆ. ಅವನು ಮಲಗಿರುವಾಗ ಒಂದು ಕನಸು ಕಂಡನು ಅದರಲ್ಲಿ ದೇವದೂತರು ನೆಚ್ಚಣಿಗೆಯ ಮೇಲೆ ಪರಲೋಕಕ್ಕೆ ಹೋಗುತ್ತಾ ಬರುತ್ತಾ ಇದ್ದರು ಮತ್ತು ದೇವರು ಅವನಿಗೆ ನಿನ್ನ ಸಂತತಿಯು ವೃದ್ಧಿಯಾಗುವದು ಮತ್ತು ಅವರು ದೇಶವನ್ನು ಸ್ವತಂತ್ರಿಸಿಕೊಳ್ಳುವರು ಎಂದು ವಾಗ್ದಾನ (ಆತ್ಮೀಕ) ಮಾಡಿದನು. ಯಾಕೋಬನು ದೇವರನ್ನು ತನ್ನೊಂದಿಗೆ ಇರುವಂತೆ ಬೇಡಿಕೊಂಡನು (ಆತ್ಮೀಕ) ಯಾಕಂದರೆ ಅದು ಎಲ್ಲಾ ಸ್ವಾಸ್ಥ್ಯಕ್ಕಿಂತಲೂ ಉತ್ತಮವಾದದ್ದಾಗಿತ್ತು.

ಯಾಕೋಬನು ತನ್ನ ದೂರದ ಸಂಬಂಧಿಕರನ್ನು ಭೇಟಿ ಮಾಡಿದನು, ಮದುವೆ ಮಾಡಿಕೊಂಡನು, ಅವನಿಗೆ ಮಕ್ಕಳಾದರು ಮತ್ತು ತನ್ನ ಮಾವನಾದ ಲಾಬಾನನ ಮನೆಯಲ್ಲಿ ೨೦ ವರ್ಷಗಳ ಕಾಲ ದುಡಿದನು! ಅವನ ಮಾವನು ಪದೇ ಪದೇ ಅವನನ್ನು ವಂಚಿಸಿದನು (ಶಾರೀರಿಕ). ಆದರೆ ದೇವರು ಯಾಕೋಬನೊಂದಿಗಿದ್ದನು ಮತು ಅವನನ್ನು ದೊಡ್ಡ ಕುಟುಂಬ (ಆತ್ಮೀಕ) ಮತ್ತು ಐಶ್ವರ್ಯದಿಂದ (ಶಾರೀರಿಕ) ಆಶೀರ್ವದಿಸಿದನು. ಯಾಕೋಬನ ನಿಮಿತ್ತ ಲಾಬಾನನು ಆಶೀರ್ವಾದ ಹೊಂದಿದನು! (ಆದಿಕಾಂಡ ೩೦:೨೭) ಕೆಲವೊಮ್ಮೆ ದೇವರು ನಮ್ಮ ಜೀವಿತಗಳಿಗೆ ಕೊಡುವ ಆಶೀರ್ವಾದ ನಮ್ಮ ಸುತ್ತಮುತ್ತಲಿನಲ್ಲಿರುವ ಜನರನ್ನು ಸಹ ಮುಟ್ಟುತ್ತದೆ. ಆದರೆ ಯಾಕೋಬನು ಬೇಸರಗೊಂಡು ಲಾಬಾನನ ಬಳಿಯಿಂದ ಓಡಿ ಹೋಗುವಾಗ (ಶಾರೀರಿಕ), ದೇವರು ಲಾಬಾನನೊಂದಿಗೆ ಮಾತನಾಡಿದನು ಮತ್ತು ಯಾಕೋಬನನ್ನು ಕಾಪಾಡಿದನು (ಆತ್ಮೀಕ).

ಯಾಕೋಬನು ತನ್ನ ಸ್ವದೇಶಕ್ಕೆ ಹಿಂದಿರುಗಿ ಹೋಗುವಾಗ ಬಹಳ ಭಯಪಟ್ಟಿದ್ದನು! ಒಂದುವೇಳೆ ಏಸಾವನು ತನ್ನನ್ನು ಕೊಲ್ಲಬೇಕೆಂದು ಇನ್ನೂ ಯೋಚಿಸುತ್ತಿರಬಹುದೇನೋ ಎಂಬದಾಗಿ ಚಿಂತಿಸಿದನು? ಅವನು ತನ್ನ ಕುಟುಂಬ ಮತ್ತು ಆಸ್ತಿಯನ್ನು ಎರಡು ಭಾಗ ಮಾಡಿದನು, ಒಂದುವೇಳೆ ಏಸಾವನು ಒಂದರ ಮೇಲೆ ಬಿದ್ದರೆ ಮತ್ತೊಂದು ತಪ್ಪಿಸಿಕೊಳ್ಳುವದು ಎಂಬದಾಗಿ ಯೋಚಿಸಿದನು (ಶಾರೀರಿಕ). ರಾತ್ರಿಯ ಸಮಯದಲ್ಲಿ ಅವನು ದೇವರ ಆಶೀರ್ವಾದಕ್ಕಾಗಿ ಆತನೊಂದಿಗೆ ಹೋರಾಡಿದನು (ಆತ್ಮೀಕ).

ಆಶ್ಚರ್ಯ ರೀತಿಯಲ್ಲಿ ಏಸಾವನು ಓಡಿ ಬಂದು ಯಾಕೋಬನನ್ನು ಅಪ್ಪಿಕೊಂಡನು! ಮತ್ತು ಯಾಕೋಬನು ಏಸಾವನಿಗೆ ಕಾಣಿಕೆಗಳನ್ನು ಕೊಟ್ಟನು. ನಾವು ಶಾರೀರಿಕ ಆಶೀರ್ವಾದಗಳಿಗಿಂತ ಹೆಚ್ಚಾಗಿ ದೇವರ ಆಶೀರ್ವಾದಗಳಿಗೆ ಆದ್ಯತೆಯನ್ನು ಕೊಡುವಾಗ, ಜನರಿಗೆ ಹೆದರುವ ಬದಲು ಉದಾರಿಗಳಾಗಲು ಸಾಧ್ಯವಾಗುತ್ತದೆ.

ನಂತರ, ದೇವರು ಯಾಕೋಬನಿಗೆ ಮತ್ತು ಅವನ ಕುಟುಂಬದವರಿಗೆ ಅನ್ಯದೇವತೆಗಳನ್ನು ತ್ಯಜಿಸುವಂತೆ ಹೇಳಿದನು, ಆದ್ದರಿಂದ ಅವರು ತಮ್ಮ ವಿಗ್ರಹಗಳು ಮತ್ತು ಬಂಗಾರದ ಒಡವೆಗಳನ್ನು ಹೂಣಿಟ್ಟರು (ಶಾರೀರಿಕ). ಅವರು ಈ ಕಾರ್ಯವನ್ನು ಮಾಡಿದಾಗ, ಅವರಿಗೆ ತೊಂದರೆ ಕೊಡಲು ಮುಂದಾಗುವವರು ಹೆದರಿಕೊಂಡು ಹಿಂದೆ ಸರಿದರು! (ಆತ್ಮೀಕ) ಯಾಕೋಬನು ಹೇಳಿದ್ದೇನೆಂದರೆ, "ದೇವರು ನಾನು ಹೋದ ಮಾರ್ಗದಲ್ಲೆಲ್ಲಾ ನನ್ನ ಸಂಗಡ ಇದ್ದನು" (ಆದಿಕಾಂಡ ೩೫:೩).

ಯಾಕೋಬನ ಹಾಗೆ, ನಾವು ಸಹ ಶಾರೀರಿಕ ಹಾಗೂ ಆತ್ಮೀಕ ಗುಣಗಳಿರುವ ಲೋಕದಲ್ಲಿ ಜೀವಿಸುವವರಾಗಿದ್ದೇವೆ. ಇಡೀ ಲೋಕವು ಹೆಚ್ಚು ಮಾನ್ಯತೆ, ಆಟದ ಗೊಂಬೆಗಳು, ಒಳ್ಳೆಯ ಸೌಂದರ್ಯ, ಪ್ರಖ್ಯಾತಿ ಮತ್ತು ಉತ್ತಮವಾದ ಅರ್ಹತೆಗಳಿಗಾಗಿ ಹೋರಾಡುತ್ತಿದೆ. ಕ್ರೈಸ್ತರು ಸಹ ಸಭೆಗೆ ಹೋಗುತ್ತಾರೆ ಮತ್ತು ನಾವು ಸತ್ಯವೇದವನ್ನು ನಂಬುತ್ತೇವೆ ಎಂದು ಹೇಳುತ್ತಾರೆ, ನಂತರ ಶಾರೀರಿಕ ವಿಷಯಗಳಿಗಾಗಿ ಕಿತ್ತಾಡುತ್ತಾರೆ. ನೀವು ದೇವರನ್ನು ಮತ್ತು ಧನವನ್ನು ಸೇವಿಸಲಾರಿರಿ ಎಂದು ಯೇಸು ಕ್ರಿಸ್ತನು ಹೇಳಿದ್ದರೂ ಅವರಿಗೆ ಅದರ ಪ್ರಾಮುಖ್ಯತೆಯೇ ಅರ್ಥವಾಗಿರುವದಿಲ್ಲ (ಲೂಕ ೧೬:೧೩).

ದೇವರ ಆತ್ಮೀಕ ಆಶೀರ್ವಾದಗಳಿಗಾಗಿ ಹೋರಾಡುವದು ಹೆಚ್ಚು ಉತ್ತಮವಾಗಿದೆ. ನಾವು ದೇವರಿಗೆ ಹತ್ತಿರವಾಗಲು, ದೇವರ ಸೇವೆ ಮಾಡಲು, ಸಭೆಯ ಸೇವೆ ಮಾಡಲು ಮತ್ತು ಆತನ ಬಗ್ಗೆ ಇತರರಿಗೆ ಹೇಳಲು ಹೋರಾಡಬಹುದಾಗಿದೆ. ನಮ್ಮ ಹೃದಯವನ್ನು ದೇವರಿಗಾಗಿ ಸಂಪೂರ್ಣವಾಗಿ ತೆರೆಯಲು ಮತ್ತು ಆತನಿಂದ ಯಾವುದನ್ನೂ ಮರೆ ಮಾಡದಿರಲು ನಾವು ಹೋರಾಡ ಬಹುದಾಗಿದೆ. ಇತರರನ್ನು ನಮಗಿಂತ ಶ್ರೇಷ್ಠರೆಂದು ಎಣಿಸಲು ಮತ್ತು ದೇವರಿಗೆ ಮೆಚ್ಚಿಕೆಯಾಗುವ ಕಾರ್ಯಗಳನ್ನು ಮಾಡಲು ನಾವು ಹೋರಾಡಬಹುದು. ದೇವರ ವಾಕ್ಯಗಳನ್ನು ಕೇಳಿ ಅದರಂತೆ ನಡೆಯುವವರು ಧನ್ಯರು ಎಂದು ಯೇಸು ಕ್ರಿಸ್ತನು ಹೇಳಿದ್ದಾನೆ (ಲೂಕ ೧೧:೨೮). ಯಾಕೋಬನ ಜೀವಿತದ ಹಾಗೆ, ಕೆಲವೊಮ್ಮೆ ದೇವರ ಆಶೀರ್ವಾದಗಳು ಭೌತಿಕ ವಸ್ತುಗಳ ರೂಪದಲ್ಲಿ ದೊರೆಯುತ್ತವೆ; ಆದರೆ ಸಹಜವಾಗಿ ಅವುಗಳು ರಕ್ಷಣೆ ಅಥವಾ ಬದಲಾದ ಹೃದಯದ ರೂಪದಲ್ಲಿ ದೊರೆಯುತ್ತವೆ. ಈಗಾಗಲೇ ನಾವು ನೋಡಿರುವ ಪ್ರಕಾರ ಮಾರ್ಕನು ಆ ಪಾರ್ಟಿಗಳಿಗೆ ಹೋಗುವ ಬದಲು ದೇವರ ಆಶೀರ್ವಾದಗಳಿಗಾಗಿ ಹೋರಾಡ ಬಹುದಾಗಿದೆ.

ನಾನು ಭೌತಿಕ ಆಶೀರ್ವಾದಗಳನ್ನು ಬಯಸದೆ ಆತ್ಮೀಕ ಆಶೀರ್ವಾದಗಳಿಗಾಗಿ ಹೋರಾಡುವ ಆಯ್ಕೆ ಮಾಡಿಕೊಳ್ಳುತ್ತೇನೆ.


## ವಿಶ್ಲೇಷಣೆ ೭



ಅವನು ಬಹಳ ದುಃಖದಲ್ಲಿದ್ದನು, ಆಗ ಮರಿಯಳು ಬಂದು “ಏನಾಯಿತು” ಎಂದು ಕೇಳಿದಾಗ, ಮಾರ್ಕನು ನಡೆದ ಸಂಗತಿಯನ್ನು ಅವಳಿಗೆ ವಿವರಿಸಿದನು. ಆಗ ಮರಿಯಳು ಅವನಿಗೆ ಬೇಸರಗೊಳ್ಳಬೇಡ, ದೇವರನ್ನು ಮೆಚ್ಚಿಸುವದೇ ಉತ್ತಮವಾದ ಆಯ್ಕೆಯಾಗಿದೆ ಎಂದು ಹೇಳಿದಳು. ದೇವರಿಗೆ ಎಲ್ಲರಿಗಿಂತ ಹೆಚ್ಚು ಸ್ನೇಹಿತರಿದ್ದಾರೆ. ಪಾರ್ಟಿಗೆ ಹೋಗದಿರುವ ಕಾರಣ ಸ್ನೇಹಿತನನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದು ಚಿಂತಿಸಬೇಡ. ಆಕೆ ಅವನ ಬೆನ್ನು ತಟ್ಟಿ ಹೊರಟು ಹೋದಳು. ಮಾರ್ಕನು ಅರ್ಥಮಾಡಿಕೊಂಡನು ಮತ್ತು ಪಾರ್ಟಿಗೆ ಹೋಗುವ ಬದಲು ದೇವರನ್ನು ಮೆಚ್ಚಿಸುವ ತೀರ್ಮಾನ ತೆಗೆದುಕೊಂಡನು.

## ಚಟುವಟಿಕೆ ೭

**ಆಶೀರ್ವಾದಗಳಿಗಾಗಿ ಹೋರಾಡುವದು**



ಪೋಸ್ಟರ್ ಬೋರ್ಡ್ ಮೇಲೆ “ಆಶೀರ್ವಾದಗಳಿಗಾಗಿ ಹೋರಾಡುವದು” ಎಂದು ಬರೆಯಿರಿ ಮತ್ತು ಅದನ್ನು ಗೋಡೆಗೆ ಅಂಟಿಸಿರಿ. ಸಣ್ಣ ಹಾಳೆಗಳ ಮೇಲೆ ವಿವಿಧ ರೀತಿಯ ಆಶೀರ್ವಾದಗಳನ್ನು ಬರೆಯಿರಿ. ಅವುಗಳನ್ನು ಮರೆಯಾಗಿ ಮತ್ತು ಯಾವುದಾದರೂ ವಸ್ತುಗಳ ಕೆಳಗಿಟ್ಟು ಕೋಣೆಯೊಳಗಿರುವವರಿಗೆ ಹಂಚಿರಿ. ಮಕ್ಕಳು ಆಶೀರ್ವಾದಗಳನ್ನು ಹುಡುಕಬೇಕು ಮತ್ತು “ಆಶೀರ್ವಾದಗಳಿಗಾಗಿ ಹೋರಾಡುವದು” ಎಂಬದಾಗಿ ಬರೆದಿರುವ ಕಾರ್ಡ್ ಮೇಲೆ ಅಂಟಿಸಬೇಕು. ನೇಮಿಸಿದ ಸಮಯವು ಮುಗಿದ ನಂತರ, ಮಕ್ಕಳು ಪೋಸ್ಟರ್ ಬೋರ್ಡ್ ಎದುರಿನಲ್ಲಿ ನಿಲ್ಲಬೇಕು ಮತ್ತು ಆಶೀರ್ವಾದಗಳನ್ನು ಒಬ್ಬರ ನಂತರ ಒಬ್ಬರು ಗಟ್ಟಿಯಾಗಿ ಓದಬೇಕು. ತಾವು ಓದುವ ಆಶೀರ್ವಾದದಲ್ಲಿ ಯಾವುದು ಅವರಿಗೆ ದೊರೆಯಿತು ಎಂಬದಾಗಿ ಮಕ್ಕಳನ್ನು ಕೇಳಿರಿ.

## ಟೈಮ್ ಲೈನ್ ೭

ಯಾಕೋಬನ ಜೀವಿತದ ಗೆರೆಯನ್ನು ಎಳೆಯಿರಿ.


ಪ್ರಶ್ನೆ: ಯಾಕೋಬನು ಜನಿಸಿದಾಗ ಇಸಾಕನು ಎಷ್ಟು ವರ್ಷದವನಾಗಿದ್ದನು?

ಉತ್ತರ: ೬೦ ವರ್ಷದವನಾಗಿದ್ದನು

ಪ್ರಶ್ನೆ: ಯಾಕೋಬನು ಎಷ್ಟು ವರ್ಷ ಬದುಕಿದನು? ಉತ್ತರ: ೧೪೭ ವರ್ಷಗಳು.

## ಒಗಟಿನ ಉತ್ತರಗಳು ೭

| | | | | | | | | | |
|---|---|---|---|---|---|---|---|---|---|
| ಪ | ಳು | ರಾ | ಟ | ಸ್ | ಏ | ಕಾ | ಹೇ | ಲ | ಳು |
| ವ್ | ಕು | ಹೇ | ಗ | ನು | ಸಾ | ಣ | ನು | ಮ್ | ದೇ |
| ಇ | ಯ್ | ಲ | ಮ | ಮ | ಮ | ಹೋ | ರಾ | ಟ | ವ್ |
| ಸ್ರಾ | ಭ್ | ಳು | ಗ | ಯ | ಚ | ಆ | ರ | ಶ್ | ಇ |
| ಯೇ | ಗ | ಬ | ನು | ಳು | ನ್ | ಎ | ಸಾ | ಮ್ | ಸ್ರಾ |
| ಲ್ | ಕೋ | ಆ | ಶೀ | ದ್ದ | ರ್ವಾ | ದ | ಯ | ಳು | ಯೇ |
| ಯಾ | ಸ್ | ಶೀ | ಪ | ದೇ | ವ | ದೂ | ತ | ನು | ಲ್ |
| ದೇ | ಬಿ | ರ್ವಾ | ಕ | ವ | ರಾ | ಧ | ಕಾ | ಟ | ಶ |
| ಸ | ಹೋ | ದ | ರ | ರು | ಹೋ | ರಾ | ಟ್ | ನಾ | ಗ |
| ಕು | ಲ | ಗ್ | ಳು | ಲ | ಕ | ನ | ಸು | ಲ | ನ್ |





## ಪ್ರಶ್ನೆಗಳು ಮತ್ತು ಉತ್ತರಗಳು ೭

೧. ನನ್ನಲ್ಲಿ ಉತ್ತಮವಾದದ್ದನ್ನು ಕಂಡುಕೊಳ್ಳಲು ಮುಂದಾಗುವದು ತಪ್ಪಾಗಿದೆಯೇ? (ಇದರ ಬಗ್ಗೆ ಮಾತನಾಡಲು ಪ್ರಯತ್ನಿಸಿರಿ. ಉತ್ತಮವದದ್ದಕ್ಕಾಗಿ ದೇವರೊಂದಿಗೆ ಯಾಕೋಬನು ಹೋರಾಡಿದ್ದು ಒಳ್ಳೆಯದಾಗಿದೆ. ನಾನು ಇತರರಿಗೆ ಪ್ರಥಮ ಆದ್ಯತೆಯನ್ನು ಕೊಡಬೇಕು ಆದರೂ ನಾವು ನಮ್ಮ ಪ್ರಾಣ ಹಾಗೂ ಆತ್ಮವನ್ನು ಚೆನ್ನಾಗಿ ನೋಡಿಕೊಳ್ಳುವವರಾಗಿದ್ದು ನಮ್ಮ ಜೀವಿತಗಳಿಗೆ ಉತ್ತಮವಾದ ಆಶೀರ್ವಾದಗಳನ್ನು ಬಯಸುವವರಾಗಿರಬೇಕು!).

೨. ಎಲ್ಲರೂ ನನ್ನನ್ನು ಇಷ್ಟಪಡುತ್ತಾರೆ ಅದುವೇ ಅತ್ಯಂತ ಪ್ರಾಮುಖ್ಯ, ಅಲ್ಲವೇ? (ದೇವರಿಗೆ ಪ್ರಥಮ ಆದ್ಯತೆಯನ್ನು ಕೊಟ್ಟು ನಮ್ಮ ನೆರೆಯವರನ್ನು ಪ್ರೀತಿಸಬೇಕು ಎಂಬ ಒತ್ತಡದ ಬಗ್ಗೆ ಅವರು ಚರ್ಚಿಸಲಿ. ನಾವು ಸಾಧ್ಯವಾದಷ್ಟು ಎಲ್ಲರ ಸಂಗಡ ಸಮಾಧಾನದಿಂದಿರಬೇಕು ಎಂಬದಾಗಿ ಸತ್ಯವೇದವು ಕಲಿಸುತ್ತದೆ (ರೋಮಾ ೧೨:೧೮), ಆದರೂ ಜನರು ಯಾವುದೇ ತೀರ್ಮಾನ ತೆಗೆದುಕೊಂಡರೂ ನಾವು ದೇವರನ್ನು ಹಿಂಬಾಲಿಸುವವರಾಗಿರಬೇಕು (ಯೋಹಾನ ೨೧:೨೨). ನಿರ್ದಿಷ್ಟವಾದ ಪರಿಸ್ಥಿತಿಗಳ ಬಗ್ಗೆ ಚರ್ಚಿಸಿರಿ).

೩. ಒಂದುವೇಳೆ ತಪ್ಪು ಮಾಡಿದರೆ ಅಥವಾ ಕೆಟ್ಟದಾಗಿ ಜೀವಿಸಿದರೆ ದೇವರ ಆಶೀರ್ವಾದಗಳನ್ನು ಕಳೆದುಕೊಳ್ಳುತ್ತೇನೆಯೇ? (ಕಳೆದ ವಾರದ ಪಾಠವನ್ನು ನೆನಪಿಗೆ ತಂದುಕೊಳ್ಳಿರಿ? ಏಸಾವನ ಆದ್ಯತೆ ತಪ್ಪಾಗಿದ್ದರಿಂದ ಅವನು ಎಲ್ಲವನ್ನೂ ಕಳೆದುಕೊಂಡನು. ಯಾಕೋಬನು ಆಶೀರ್ವಾದಗಳಿಗಾಗಿ ಹೋರಾಡಿದ್ದರಿಂದ ಅವುಗಳನ್ನು ಹೆಚ್ಚಾಗಿ ಪಡೆದುಕೊಂಡನು!).

## ಆಟ ೭

**ಬಾಟಲ್ ಬ್ಯಾಟಲ್**

ಖಾಲಿಯಾಗಿರುವ ಸೋಡಾ ಬಾಟಲಿನೊಳಗೆ ಸ್ವಲ್ಪ ಮಣ್ಣು ತುಂಬಿಸಿರಿ, ಬಾಟಲಿ ತೂಕ ಬರುವದಕ್ಕಾಗಿ ಹೀಗೆ ಮಾಡಬೇಕು.

* ಸಮವಾದ ನೆಲವನ್ನು ಆಯ್ಕೆ ಮಾಡಿರಿ.
* ಹುಡುಕಲು ಒಂದು ಮಗುವನ್ನು ಆಯ್ಕೆ ಮಾಡಿರಿ.
* ಹುಡುಕುವವನು ಸಾಧ್ಯವಾದಷ್ಟು ದೂರ ಬಾಟಲಿಯನ್ನು ಬಿಸಾಡಬೇಕು.
* ಮಕ್ಕಳೆಲ್ಲರೂ ಬಾಟಲಿ ಬಿಸಾಡಿರುವ ಕಡೆಗೆ ಓಡದೆ ಅದರ ವಿರುದ್ಧ ದಿಕ್ಕಿಗೆ ಓಡಿ ಬಿಸಾಡಬೇಕು. ಹುಡುಕುವವನು ಬಾಟಲಿ ತಲುಪುವುದರೊಳಗೆ ಅವರೆಲ್ಲರೂ ಬಚ್ಚಿಟ್ಟುಕೊಳ್ಳಬೇಕು.
* ಆರಿಸಲಾಗದ ಸಮವಾದ ನೆಲದ ಬಳಿಗೆ ಬಾಟಲಿ ತಂದ ನಂತರ ಹುಡುಕುವವನು ಬಚ್ಚಿಟ್ಟುಕೊಂಡಿರುವ ಮಕ್ಕಳಲ್ಲಿ ಯಾರಾದರು ಒಬ್ಬರನ್ನು ಕಂಡು ಹಿಡಿಯಬೇಕು.



* ಅವನು ಯಾರನ್ನಾದರೂ ಕಂಡು ಹಿಡಿದ ಮೇಲೆ, ಸಮವಾದ ನೆಲದ ಬಳಿಗೆ ಹಿಂದಿರುಗಿ ಬರಬೇಕು. ಅವನು ಬಾಟಲನ್ನು ತೆಗೆದುಕೊಂಡು, ೧,೨,೩ ಎಂದು ಕೂಗಿ ಲೂಸಿ ಮರದ ಹಿಂದೆ ಇದ್ದಾಳೆ ಎಂದು ಹೇಳಬೇಕು. ನಂತರ ಹುಡುಕುವವನು ಉಳಿದವರನ್ನು ಹುಡುಕಲು ಹೊರಡಬೇಕು.
* ಇನ್ನೂ ಬಚ್ಚಿಟ್ಟುಕೊಂಡಿರುವ ಮಕ್ಕಳು ಉಳಿದವರನ್ನು ಈ ರೀತಿಯಾಗಿ ಕಾಪಾಡಬಹುದು: ಹುಡುಕುವವನ ಕೈಗೆ ತಪ್ಪಿಸಿಕೊಂಡು, ಟೋನಿ ಸಮವಾದ ನೆಲದ ಬಳಿಗೆ ಓಡಬೇಕು ಮತ್ತು ಬಾಟಲಿಯನ್ನು ನೆಲಕ್ಕೆ ಬಡಿದು "ನನಗೆ ಮತ್ತು ನನ್ನ ಸ್ನೇಹಿತರಿಗೆ ೧,೨,೩ ಎಂದು ಹೇಳಬೇಕು." ಹುಡುಕುವವನು ಹಿಡಿದಿರುವವನು ಕಳೆದುಕೊಳ್ಳುವನು ಮತ್ತು ಟೋನಿ ತನ್ನ ಸಂಗಡಿಗರನ್ನು ಕಾಪಾಡುತ್ತಾನೆ.
* ಒಂದುವೇಳೆ ತಪ್ಪಿಸಲು ಆಗದಿದ್ದರೆ, ಮತ್ತು ಹುಡುಕುವವನು ಉಳಿದವರನ್ನು ಹುಡುಕಿದರೆ, ಅವನೇ ಜಯಶಾಲಿಯಾಗುತ್ತಾನೆ.
* ಮತ್ತೆ ಆಡಬೇಕೆಂದರೆ, ಮೊದಲು ಹಿಡಿಯಲ್ಪಟ್ಟವನು ಹೊಸ ಹುಡುಕುವವನಾಗುತ್ತಾನೆ.

## ಹಾಜರಾತಿ ೭




ತರಗತಿಗೆ ಹಾಜರಾದದ್ದಕ್ಕೆ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡುವ ಸಲುವಾಗಿ ಮತ್ತೊಂದು ಕಾರ್ಡ್ ಪಡೆಯಬೇಕಾದರೆ ಮುಂದಿನ ವಾರ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:

ಯಾಕೋಬ

## ಹೋಮ್ ವರ್ಕ್ ೭

ಅಸೈನ್ಮೆಂಟ್

ಈ ವಾರದ ನಿಮ್ಮ ಅಸೈನ್ಮೆಂಟ್ ಕಳೆದ ಎರಡು ವಾರಗಳಲ್ಲಿ ನೀವು ಏನು ಯೋಚಿಸಿದಿರಿ ಮತ್ತು ಬರೆದಿರಿ ಅಂದರೆ ನಿಮ್ಮ ಕನಸುಗಳು ಮತ್ತು ಚೊಚ್ಚಲುತನದ ಬಗ್ಗೆ ನೆನಪಿಸಿಕೊಳ್ಳುವದಾಗಿದೆ. ಅವುಗಳ ಬಗ್ಗೆ ಮತ್ತೆ ಯೋಚಿಸಿರಿ, ಮತ್ತು ಕೆಲವು ಬೇಡವಾದ ಕಾರ್ಯಗಳನ್ನು ಮಾಡುವ ಮೂಲಕ ಅವುಗಳನ್ನು ಹೇಗೆ ಕಳೆದುಕೊಳ್ಳಬಹುದು ಎಂಬದನ್ನೂ ಯೋಚಿಸಿರಿ. ಒಂದುವೇಳೆ ನೀವು ಮನೆಯಲ್ಲಿ ಎದುರುಬೀಳುವವರಾಗಿದ್ದರೆ, ಅದು ನಿಮ್ಮ ಸ್ವಾಭಾವಿಕ ಚೊಚ್ಚಲುತನಕ್ಕೆ ಗಂಭೀರವಾದ ತೊಂದರೆಯನ್ನುಂಟು ಮಾಡುತ್ತದೆ. ಒಂದುವೇಳೆ ನೀವು ಡಾಕ್ಟರ್ ಅಥವಾ ಇಂಜಿನಿಯರ್ ಆಗುವ ಕನಸು ಕಾಣುತ್ತಿದ್ದರೆ, ಶಾಲೆಯಲ್ಲಿ ಚೆನ್ನಾಗಿ ಓದದಿದ್ದರೆ ಆ ಕನಸನ್ನು ಹಾಳುಮಾಡಿಕೊಳ್ಳುವಿರಿ. ಒಂದುವೇಳೆ ಒಳ್ಳೆಯ ಆರೋಗ್ಯ ಪಡೆಯುವದು ನಿಮ್ಮ ಕನಸಾಗಿರುವದಾದರೆ, ಧೂಮಪಾನ, ಮದ್ಯಪಾನ ಅಥವಾ ಮಾದಕ ಪದಾರ್ಥಗಳ ಸೇವನೆಯಿಂದ ಆ ಕನಸನ್ನು ಹಾಳುಮಾಡಿಕೊಳ್ಳುವಿರಿ. ನಿಮ್ಮ ಕನಸು ಮತ್ತು ಚೊಚ್ಚಲುತನದ ಹಕ್ಕನ್ನು ಸಾಧಿಸಿಕೊಳ್ಳಲು ಯಾವ ರೀತಿ ಜೀವಿಸಬೇಕು ಎಂಬದನ್ನು ಬರೆಯಿರಿ.

**ಓದಿರಿ**

ದಿನ ೧: ಆದಿಕಾಂಡ ೩೭:೧-೧೧

ದಿನ ೨: ಆದಿಕಾಂಡ ೩೭:೧೨-೨೪

ದಿನ ೩: ಆದಿಕಾಂಡ ೩೭:೨೫-೩೬

ದಿನ ೪: ಆದಿಕಾಂಡ ೪೧:೧-೧೩

ದಿನ ೫: ಆದಿಕಾಂಡ ೪೧:೨೫-೪೧

# ೮. ದೇವರಲ್ಲಿ ಭರವಸೆಯನ್ನಿಡುವದು



**ವೀರ: ಯೋಸೇಫ**

ಆದಿಕಾಂಡ ೩೭:೨-೧೧, ೩೭:೧೮-೩೬, ೩೯:೧-೪೧:೧೩, ೪೧:೧೪-೧೬, ೪೧:೨೮-೪೦, ೪೧:೫೬-೪೨:೫, ೪೫:೧-೧೫, ೪೭:೫, ಇಬ್ರಿಯ ೧೧:೨೨

## ಕಂಠಪಾಠ ವಚನ ೮

ಗಲಾತ್ಯರಿಗೆ ೬:೯ " ಸತ್ಕಾರ್ಯಗಳನ್ನು ಮಾಡುವುದರಲ್ಲಿ ಬೇಸರಪಡದಿರೋಣ, ಎದೆಗುಂದದಿರೋಣ; ಆಗ ಸೂಕ್ತಕಾಲದಲ್ಲಿ ಸತ್ಫಲವನ್ನು ಕೊಯ್ಯುವೆವು."

## ಕಥೆಯ ಅವಶ್ಯಕತೆ ೮



ಮರಿಯಳು ಶಾಲೆಯಲ್ಲಿದ್ದಳು ಮತ್ತು ಅವಳ ಪಕ್ಕದಲ್ಲಿ ಅವಳ ಸ್ನೇಹಿತೆ ದೆಬೋರ ಕುಳಿತುಕೊಂಡಿದ್ದಳು. ಅವರಿಗೆ ಶಾಲೆಗೆ ಹೋಗುವದೆಂದರೆ ಬಹಳ ಇಷ್ಟವಿತ್ತು. ಇಂದು ಬೆಳಗ್ಗೆ ಅವರ ಶಿಕ್ಷಕಿ ಒಂದು ಕಥೆ ಬರೆಯುವಂತೆ ಹೇಳಿದರು. ಮರಿಯಳಿಗೆ ಕಥೆ ಹೇಳುವದೆಂದರೆ ಬಹಳ ಇಷ್ಟ ಆದ್ದರಿಂದ ಬೇಗನೇ ಅವಳೊಂದು ಕಥೆ ಬರೆದಳು. ಎಲ್ಲರಿಗಿಂತ ಮೊದಲು ಅವಳೇ ಕಥೆ ಬರೆದಳು ಮತ್ತು ತಾನು ಬರೆದಾಯಿತೆಂದು ಶಿಕ್ಷಕಿಗೆ ಹೇಳಿದಳು. ಆಗ ಏನಾಯಿತೆಂದು ನಿಮಗೆ ಅನ್ನಿಸುತ್ತದೆ? ಶಿಕ್ಷಕಿ ಅವಳ ಕಡೆಗೆ ಗಮನ ಕೊಡಲಿಲ್ಲ, ಉತ್ತರವನ್ನೂ ಕೊಡಲಿಲ್ಲ. ಹತ್ತು ನಿಮಿಷಗಳ ನಂತರ ದೆಬೋರಳು ಬರೆದು ಮುಗಿಸಿ ತಾನು ಬರೆದಾಯಿತೆಂದು ಶಿಕ್ಷಕಿಗೆ ಹೇಳಿದಳು. ಕೂಡಲೇ ಶಿಕ್ಷಕಿ ಅವಳ ಹತ್ತಿರ ಬಂದು ನೋಡಿ, "ದೆಬೋರ ನೀನು ಬರೆದಿರುವ ಕಥೆ ಬಹಳ ಆಸಕ್ತಿಕರವಾಗಿದೆ" ಎಂದು ಹೇಳಿದಳು. ಮರಿಯಳಿಗೆ ಬಹಳ ಕೋಪ ಬಂದಿತು, ಆದ್ದರಿಂದ "ನಾನೇನೇ ಮಾಡಿದರೂ ಶಿಕ್ಷಕಿ ನನ್ನ ಕಡೆಗೆ ಗಮನ ಕೊಡುವದಿಲ್ಲವಾದ್ದರಿಂದ ಇನ್ನು ಮೇಲೆ ಆಕೆ ಹೇಳುವ ಯಾವುದನ್ನೂ ನಾನು ಮಾಡುವದಿಲ್ಲ. ನಾನು ಮಾಡಿದರೂ ಆಕೆ ನೋಡುವದಿಲ್ಲವಲ್ಲ" ಎಂದು ಹೇಳಿದಳು.

## ಮುಖ್ಯ ಪಾಠ ೮

ಕಳೆದ ವಾರ ನಾವು ಯಾಕೋಬನ ಬಗ್ಗೆ ಕಲಿತುಕೊಂಡೆವು ಅವನಿಗೆ ೧೨ ಮಂದಿ ಮಕ್ಕಳಿದ್ದರು. ಯಾಕೋಬನಿಗೆ ತನ್ನ ಮಕ್ಕಳಲ್ಲಿ ಯೋಸೇಫನೆಂದರೆ ಬಹಳ ಪ್ರೀತಿ ಇತ್ತು ಆದ್ದರಿಂದ ಅವನು ಯೋಸೇಫನಿಗೆ ವಿಶೇಷವಾದ ಅಂಗಿಯನ್ನು ಮಾಡಿಸಿಕೊಟ್ಟಿದ್ದನು. ಆದರೆ ಯೋಸೇಫನು ತಾನು ಅವರೆಲ್ಲರ ಮೇಲೆ ದೊರೆತನ ಮಾಡುವ ಹಾಗೆ ಕನಸು ಬಿತ್ತು, ಆದ್ದರಿಂದ ಅವನ ಅಣ್ಣಂದಿರು ಅವನನ್ನು ಬಹಳವಾಗಿ ದ್ವೇಷಿಸುತ್ತಿದ್ದರು ಹಾಗೂ ಕೊಲ್ಲಬೇಕೆಂದು ಯೋಚಿಸಿದರು! ಆದರೆ ಕೊಲ್ಲುವ ಬದಲು ಅವನನ್ನು ದಾಸತ್ವಕ್ಕೆ ಮಾರಿಬಿಟ್ಟರು. ಸಹಜವಾಗಿ ಕ್ರೈಸ್ತರು ತಮಗೆ ಯಾವ ಹಾನಿಯೂ ಆಗದಂತೆ ದೇವರ ಆಶೀರ್ವಾದಗಳು ತಮ್ಮನ್ನು ಕಾಯುತ್ತವೆ ಎಂಬದಾಗಿ ಅಂದುಕೊಂಡಿರುತ್ತಾರೆ. ಆದರೆ ನಮ್ಮನ್ನು ತನ್ನ ಉದ್ದೇಶಗಳಿಗನುಸಾರ ಸಿದ್ಧಮಾಡಲು ದೇವರು ಕಠಿಣ ಸಮಯಗಳನ್ನು ಉಪಯೋಗಿಸುತ್ತಾನೆ ಮತ್ತು ನಾವು ಆತನಲ್ಲಿ ಭರವಸೆಯನ್ನಿಡಲು ನಮಗೆ ಸಹಾಯ ಮಾಡುತ್ತಾನೆ.

ಐಗುಪ್ತದ ದಳವಾಯಿಯಾಗಿದ್ದ ಪೋಟೀಫರನಿಗೆ ಯೋಸೇಫನನ್ನು ಮಾರಲಾಯಿತು. ಅವನು ದುಃಖಿಸುವ ಬದಲು ದೇವರಲ್ಲಿ ಭರವಸೆಯನ್ನಿಟ್ಟನು ಮತ್ತು ಉತ್ತಮವಾಗಿ ಕಾರ್ಯನಿರ್ವಹಿಸಿದನು, ಆದ್ದರಿಂದ ಪೋಟೀಫರನು ಅವನನ್ನು ತನ್ನ ಮನೆಯ ಅಧಿಕಾರಿಯನ್ನಾಗಿ ನೇಮಿಸಿದನು!

ಫೋಟೀಫರನ ಹೆಂಡತಿ ಯೋಸೇಫನನ್ನು ಮೋಹಿಸಿದಳು ಮತ್ತು ಅವನೊಂದಿಗೆ ಅಕ್ರಮ ಸಂಬಂಧ ಬೆಳೆಸಲು ಬಯಸಿದಳು. ಯೋಸೇಫನು ದೇವರಿಗೆ ಭಯಪಡುವವನಾಗಿದ್ದು ತಪ್ಪು ಮಾಡಲು ನಿರಾಕರಿಸಿದನು. ಯಾರಾದರು ನಿಮ್ಮನ್ನು ತಪ್ಪು ಮಾಡಲು ಪ್ರೇರೇಪಿಸಿದರೆ, ಯೋಸೇಫನು ಮಾಡಿದ ಕಾರ್ಯವನ್ನು ಮಾಡಿರಿ: ಆ ವ್ಯಕ್ತಿಯೊಂದಿಗೆ ಕೊಠಡಿಯನ್ನು ಸಹ ಹಂಚಿಕೊಳ್ಳಬೇಡಿರಿ. ಯೋಸೇಪನು ಯಾವ ತಪ್ಪನ್ನೂ ಮಾಡಲಿಲ್ಲವಾದರೂ, ಆಕೆ ಅವನ ಮೇಲೆ ಸುಳ್ಳು ಆರೋಪ ಹೊರಿಸಿದಳು ಮತ್ತು ಅನ್ಯಾಯವಾಗಿ ಅವನನ್ನು ಸೆರೆಮನೆಗೆ ಹಾಕಲಾಯಿತು!

ಯೋಸೇಫನು ದೇವರಲ್ಲಿ ಭರವಸೆಯನ್ನಿಟ್ಟನು ಮತ್ತು ದೇವರು ಅವನನ್ನು ಆಶೀರ್ವದಿಸಿದ್ದರಿಂದ ಇಡೀ ಸೆರೆಮನೆಯನ್ನು ಅವನೇ ನೋಡಿಕೊಳ್ಳುತ್ತಿದ್ದನು! ಫರೋಹನು ಭಕ್ಷಗಾರನು ಮತ್ತು ಪಾನದಾಯಕನು ಸೆರೆಮನೆಗೆ ಹೋದರು ಮತ್ತು ಒಂದುದಿನ ರಾತ್ರಿ ಅವರಿಬ್ಬರೂ ಕನಸು ಕಂಡರು. ದೇವರು ಕನಸಿನ ಅರ್ಥವನ್ನು ತನಗೆ ತಿಳಿಸುವನು ಎಂದು ಯೋಸೇಫನು ದೇವರಲ್ಲಿ ಭರವಸೆಯನ್ನಿಟ್ಟನು. ಯೋಸೇಫನು ಹೇಳಿದಂತೆಯೇ ಭಕ್ಷ್ಯಗಾರನು ಮೃತಪಟ್ಟನು ಮತ್ತು ಪಾನದಾಯಕನು ಪುನಃ ಕೆಲಸಕ್ಕೆ ಸೇರಿದನು. ಆದರೆ ಪಾನದಾಯಕನು ಯೋಸೇಫನನ್ನು ಮರೆತುಹೋದನು! ಪುನಃ ಅವನಿಗೆ ಅನ್ಯಾಯವಾಯಿತು!

ಎರಡು ವರ್ಷಗಳ ನಂತರ, ಫರೋಹನಿಗೆ ಒಂದು ಕನಸು ಬಿತ್ತು ಆಗ ಪಾನದಾಯಕನಿಗೆ ಯೋಸೇಫನ ನೆನಪಾಯಿತು. ಯೋಸೇಫನು ದೇವರಲ್ಲಿ ಭರವಸೆಯಿಡುವದನ್ನು ಅಭ್ಯಾಸ ಮಾಡಿಕೊಂಡಿದ್ದನು ಮತ್ತು ಅವನು ಫರೋಹನ ಎದುರಿನಲ್ಲಿ ದೇವರ ಮೇಲೆ ಭರವಸೆಯನ್ನಿಟ್ಟನು. ಕನಸಿನ ಅರ್ಥವೇನೆಂದರೆ ೭ ವರ್ಷಗಳ ಕಾಲ ಸಮೃದ್ಧವಾದ ಬೆಳೆಯಿರುವದು ನಂತರ ೭ ವರ್ಷಗಳು ಕ್ಷಾಮವಿರುವದು. ಯೋಸೇಫನು ೧೩ ವರ್ಷಗಳ ಕಾಲ ದಾಸತ್ವ ಹಾಗೂ ಸೆರೆಮನೆಯಲ್ಲಿದ್ದ ನಂತರ ಫರೋಹನು ಯೋಸೇಫನನ್ನು ಐಗುಪ್ತದೇಶದ ಪ್ರಧಾನ ಮಂತ್ರಿಯನ್ನಾಗಿ ಮಾಡಿದನು! ದೇಶವನ್ನು ಮುನ್ನಡೆಸಲು ದೇವರು ಯೋಸೇಫನಿಗೆ ತರಬೇತಿಯನ್ನು ಕೊಟ್ಟದ್ದು ಅವನ ಪ್ರಯೋಜನಕ್ಕಾಗಿಯಲ್ಲ ಬದಲಾಗಿ ಎಲ್ಲರನ್ನು ರಕ್ಷಿಸುವದಕ್ಕಾಗಿಯಾಗಿತ್ತು.

ಕ್ಷಾಮವು ಎಲ್ಲಾ ಕಡೆಗಳಲ್ಲಿಯೂ ಘೋರವಾಗಿದ್ದರಿಂದ, ಯೋಸೇಫನ ಕುಟುಂಬದವರೂ ಸೇರಿ ಜನರೆಲ್ಲರೂ ಕಷ್ಟಪಡುತ್ತಿದ್ದರು. ಯೋಸೇಫನನ್ನು ದಾಸತ್ವಕ್ಕೆ ಮಾರಿದ ಅವನ ಅಣ್ಣಂದಿರೇ ಧಾನ್ಯವನ್ನು ಕೊಳ್ಳಲು ಅವನ ಬಳಿಗೆ ಬಂದರು! ಆದರೆ ಅವರಿಗೆ ಅವನ ಗುರುತು ಸಿಗಲಿಲ್ಲ ಮತ್ತು ಅವರು ಬದಲಾಗಿದ್ದಾರೇನೋ ಎಂದು ತಿಳಿಯಲು ಅವನು ಅವನನ್ನು ಪರೀಕ್ಷಿಸಿದನು. ನಂತರ ಯೋಸೇಫನು ತನ್ನ ಅಣ್ಣಂದಿರನ್ನು ಕ್ಷಮಿಸಿದನು ಮತ್ತು ದೇಶದಲ್ಲಿ ಅವರಿಗೆ ಉತ್ತಮ ಸ್ಥಾನವನ್ನು ಒದಗಿಸಿದನು. ನಾವು ದೇವರಲ್ಲಿ ಭರವಸೆಯನ್ನಿಡುವಾಗ ಇತರರನ್ನು ಕ್ಷಮಿಸಬಹುದು ಮತ್ತು ಅವರೊಂದಿಗೆ ಪ್ರೀತಿಯಿಂದ ನಡೆದುಕೊಳ್ಳಬಹುದು.

ಯೋಸೇಫನ ಹಾಗೆ ಯೇಸು ಕ್ರಿಸ್ತನನ್ನೂ ಜನರು ತಿರಸ್ಕರಿಸಿದರು. ಆತನು ಯಾವ ತಪ್ಪನ್ನೂ ಮಾಡಲಿಲ್ಲವಾದರೂ ಆತನ ಮೇಲೆ ಸುಳ್ಳು ಆರೋಪಗಳನ್ನು ಹೊರಿಸಿದರು. ನಂತರ ಯೇಸು ಕ್ರಿಸ್ತನನ್ನು ಶಿಲುಬೆಗೇರಿಸಿದರು! ಯೋಸೇಫನ ಹಾಗೆ ಆತನು ಇವೆಲ್ಲವುಗಳಲ್ಲಿಯೂ ತನ್ನ ತಂದೆಯಾದ ದೇವರಲ್ಲಿ ಭರವಸೆಯನ್ನಿಟ್ಟನು. ಯೋಸೇಫನು ಪ್ರಧಾನ ಮಂತ್ರಿಯಾದನು, ಆದರೆ ಯೇಸು ಕ್ರಿಸ್ತನು ಇಡೀ ಲೋಕದ ಅರಸನಾದನು! ಕಷ್ಟದ ಸಮಯಗಳಲ್ಲಿ ನನ್ನಲ್ಲಿ ಭರವಸೆಯನ್ನಿಡಿರಿ ಎಂದು ದೇವರು ಹೇಳುತ್ತಾನೆ ಮತ್ತು ಅವೆಲ್ಲವುಗಳಲ್ಲಿ ನಮ್ಮೊಂದಿಗಿರುವ ವಾಗ್ದಾನ ಮಾಡಿದ್ದಾನೆ. ಸತ್ಯವೇದವು ಹೇಳುವದೇನೆಂದರೆ ದೇವರು ತನ್ನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳನ್ನು ಅನುಕೂಲ ಮಾಡುತ್ತಾನೆ (ರೋಮಾ ೮:೨೮). ದೇವರು ತನ್ನ ಮನಸ್ಸಿನಲ್ಲಿರುವ ಹಾಗೆ ನಿಮ್ಮ ಸಿದ್ಧಮಾಡಲು ಕಠಿನ ಪರಿಸ್ಥಿತಿಗಳನ್ನು ಉಪಯೋಗಿಸಿಕೊಳ್ಳುವಂತೆ ನೀವು ಅನುಮತಿಸುತ್ತೀರೋ?

ಕಷ್ಟಕರವಾದ ಪರಿಸ್ಥಿತಿಗಳಲ್ಲಿಯೂ ನಾನು ನನ್ನ ಜೀವಿತದಲ್ಲಿ ದೇವರಲ್ಲಿ ಭರವಸೆಯನ್ನಿಡುವ ಆಯ್ಕೆ ಮಾಡಿಕೊಳ್ಳುತ್ತೇನೆ.

## ವಿಶ್ಲೇಷಣೆ ೮




ನಂತರ ಆಕೆಯ ಸ್ನೇಹಿತ ಮತ್ತಾಯನು ಮರಿಯಳಿಗೆ ಏನಾಯಿತೆಂದು ಅರ್ಥಮಾಡಿಕೊಂಡನು. ಅವನು ಅವಳೊಂದಿಗೆ ಮಾತನಾಡಿದನು ಮತ್ತು ಕ್ರೈಸ್ತರು ತಮ್ಮ ಅನುದಿನದ ಜೀವಿತದಲ್ಲಿ ವಿಧೇಯತೆಯನ್ನು ಅಭ್ಯಾಸಿಸಬೇಕೆಂದು ಅರ್ಥಮಾಡಿಸಿದನು. ಬಹುಶಃ ಶಿಕ್ಷಕಿಗೆ ಅವಳು ಹೇಳಿದ್ದು ಕೇಳಿಸದಿರಬಹುದು ಆದ್ದರಿಂದಲೇ ಆಕೆ ಯಾವ ಉತ್ತರವನ್ನೂ ಕೊಡಲಿಲ್ಲವೆನಿಸುತ್ತದೆ. ಮರಿಯಳಿಗೆ ತನ್ನ ನಡವಳಿಗೆ ಸರಿಯಲ್ಲ ಎಂದು ಗೊತ್ತಾಯಿತು ಮತ್ತು ಅವಳು ತನ್ನ ಶಿಕ್ಷಕಿಯೊಂದಿಗೆ ಸರಿಯಾಗಿ ನಡೆದುಕೊಳ್ಳಲು ಮುಂದುವರೆಸಿದಳು.

## ಚಟುವಟಿಕೆ ೮

### ವಿಶ್ವಾಸಾರ್ಹವಾದ ದಿನಚರಿ ಪುಸ್ತಕ

ವಾರದ ದಿನಗಳಲ್ಲಿ ದೇವರಲ್ಲಿ ಭರವಸೆಯನ್ನಿಡುವದು ಹೇಗೆ ಎಂಬದನ್ನು ಬರೆಯಲು ಮಕ್ಕಳು ಒಂದು ಚಿಕ್ಕ ಪುಸ್ತಕವನ್ನು ಮಾಡಬೇಕು. ಮಕ್ಕಳಿಗೆ ಎರಡು ಹಾಳೆಗಳನ್ನು ನಾಲ್ಕು ಭಾಗವಾಗಿ ಮಡಚಿ ಕೊಡಿರಿ. ಮಕ್ಕಳು ಅವುಗಳನ್ನು ಹರಿದು, ಒಟ್ಟಾಗಿ ಜೋಡಿಸಬೇಕು ಮತ್ತು ಮಧ್ಯದಲ್ಲಿ ಪಿನ್ ಹೊಡೆದು ಚಿಕ್ಕ ಪುಸ್ತಕ ಮಾಡಿಕೊಳ್ಳಬೇಕು. ನಂತರ ಮುಖಪುಟವನ್ನು ಅಲಂಕರಿಸಬೇಕು.



ಈ ವಾರದ ಎಲ್ಲಾ ದಿವಸಗಳು ಅವರು ದೇವರಲ್ಲಿ ಹೇಗೆ ಭರವಸೆಯನ್ನಿಡಬಹುದು ಎಂಬದನ್ನು ಬರೆಯಿರಿ. ತರಗತಿಯ ಮೊದಲನೆ ದಿನ ಮಾಡಿ ತೋರಿಸುವ ಮೂಲಕ ಅವರಿಗೆ ಸಹಾಯ ಮಾಡಿರಿ.

## ಟೈಮ್ ಲೈನ್ ೮


ಯೋಸೇಫನ ಜೀವಿತದ ಗೆರೆ ಎಳೆಯಿರಿ.

ಪ್ರಶ್ನೆ: ಯೋಸೇಫನು ಜನಿಸಿದಾಗ ಯಾಕೋಬನು ಎಷ್ಟು ವರ್ಷದವನಾಗಿದ್ದನು? ಉತ್ತರ: ನಿಖರವಾದ ವಯಸ್ಸು ಗೊತ್ತಿಲ್ಲ ಆದರೆ ಯಾಕೋಬನು ೧೦೦ ವರ್ಷದವನಾಗಿರಬಹುದು

ಪ್ರಶ್ನೆ: ಯೋಸೇಫನು ಎಷ್ಟು ವರ್ಷ ಬದುಕಿದನು? ಉತ್ತರ: ೧೧೦ ವರ್ಷಗಳು.

## ಒಗಟಿನ ಉತ್ತರಗಳು ೮

| | | | | | | | | | |
|---|---|---|---|---|---|---|---|---|---|
| ಉ | ದಾ | ಹ | ರ | ಣೆ | ಗೆ | ಳ | ಫ | ಮ | ತ |
| ಮಾ | ಶ | ಐ | ವ | ಸ್ತ್ರ | ಹ | ಜ್ಞ | ರೋ | ಗುಏ | ಗ |
| ಐ | ರಾ | ಮಾ | ಯೋ | ಸೇ | ಪ್ರ | ರೋ | ಹ | ಮಾ | ವಿ |
| ಸು | ಪ | ಟ | ಸ್ತ್ರ | ಗು | ತಿ | ಷ | ಗಾ | ಬಾ | ಸ |
| ಗಾ | ರು | ನ್ನು | ಐ | ತ | ಕಾ | ಯ | ದ್ವೇ | ಧ | ದ್ವೇ |
| ಲ | ಕ | ನ | ಸು | ಗಾ | ರ | ಡೆ | ಐ | ಗು | ಷ್ಟ |
| ಅ | ದ್ವೇ | ಏ | ಯೋ | ಸೇ | ಫ | ಸ್ತ್ರ | ಮ | ಅ | ಹ |
| ಭಾ | ಣ್ಣಂ | ಮೋ | ಜ | ಕ್ಕೆ | ಬ | ಣ್ಣ | ಗ | ಳು | ನ್ನು |
| ದ್ವೇ | ಷ | ದಿ | ನೆ | ಗು | ತು | ತಿ | ಸಿ | ರು | ದಾ |
| ಸ | ಮಾ | ಕ | ರು | ಇ | ಯೋ | ಟಿ | ದ್ವೇ | ಣ | ಸ |





## ಪ್ರಶ್ನೆಗಳು ಮತ್ತು ಉತ್ತರಗಳು ಲ

೧. ದೇವರಿಂದ ಅಸಾಧ್ಯವಾದ ಕಾರ್ಯಗಳು ಏನಾದರೂ ಇದೆಯೇ? (ಇಲ್ಲ, ಸತ್ಯವೇದವು ಹೇಳುವದೇನೆಂದರೆ ದೇವರು ಸರ್ವಶಕ್ತನಾಗಿದ್ದಾನೆ. ಆತನು ಆದಿಯಿಂದ ಇಂದಿನ ತನಕ ಮತ್ತು ಭವಿಷ್ಯದ ಎಲ್ಲವನ್ನೂ ನೋಡುತ್ತಾನೆ ಮತ್ತು ಅರ್ಥಮಾಡಿಕೊಳ್ಳುತ್ತಾನೆ).

೨. ನಮ್ಮ ಜೀವಿತದಲ್ಲಿ ಕೆಟ್ಟ ಕಾರ್ಯಗಳು ನಡೆಯಲು ದೇವರು ಯಾಕೆ ಅನುಮತಿಸುತ್ತಾನೆ? (ಯೋಸೇಫನ ವಿಷಯವನ್ನು ನೋಡುವದಾದರೆ, ತಾನು ಬಯಸುವ ಸ್ಥಳಕ್ಕೆ ಬರುವಂತೆ ಮತ್ತು ತನ್ನಿಂದ ತರಬೇತಿಯನ್ನು ಹೊಂದುವಂತೆ ದೇವರು ಯೋಸೇಫನಿಗೆ ಸಂಭವಿಸಿದ ಕಷ್ಟಗಳನ್ನೆ ಉಪಯೋಗಿಸಿದನು. ದೇವರು ನಮ್ಮ ಆತ್ಮದ ಬಗ್ಗೆ ಚಿಂತಿಸುತ್ತಾನೆ, ಅನೇಕ "ಕೆಟ್ಟ" ಕಾರ್ಯಗಳಿದ್ದರೂ ಅವು ನಿಜವಾಗಿಯೂ ನಮಗೆ ಕೆಟ್ಟದವುಗಳಲ್ಲ, ಬದಲಾಗಿ ನಮಗೆ ಹಿತಕರವಾಗುತ್ತವೆ. ನಾವು ಜೀವಿಸುತ್ತಿರುವ ಲೋಕದಲ್ಲಿ ಅತ್ಯಧಿಕವಾದ ಪಾಪವಿದೆ ಮತ್ತು ದೇವರು ದುರಾತ್ಮನಿಗೆ ಲೋಕದಲ್ಲಿ ಕಾರ್ಯಮಾಡುವ ಅಧಿಕಾರ ಕೊಟ್ಟಿದ್ದಾನೆ ಎಂಬದನ್ನು ಮನವರಿಕೆ ಮಾಡಿಕೊಳ್ಳುವದು ಪ್ರಾಮುಖ್ಯವಾಗಿದೆ. ಆದ್ದರಿಂದ ಮರಣ, ಯುದ್ಧಗಳು, ಭೂಕಂಪಗಳು, ವಿಕೋಪಗಳು ಉಂಟಾಗುತ್ತವೆ ಮತ್ತು ಅನೇಕ ಜನರು ಕೆಟ್ಟ ಕಾರ್ಯಗಳನ್ನು ಮಾಡುತ್ತಾರೆ ಅದು ಕ್ರೈಸ್ತರು ಹಾಗೂ ಅವಿಶ್ವಾಸಿಗಳ ಮೇಲೆ ಸಮಾನ ರೀತಿಯಲ್ಲಿ ಪರಿಣಾಮ ಬೀರುತ್ತದೆ).


೩. ಇತರೆ ಧರ್ಮಗಳು ಯಾಕೆ ಒಳ್ಳೆಯವುಗಳಲ್ಲ? (ಯೇಸು ಕ್ರಿಸ್ತನೊಬ್ಬನೇ ರಕ್ಷಣೆ ಹೊಂದುವ ಮಾರ್ಗ ಎಂದು ಸತ್ಯವೇದವು ಹೇಳುತ್ತದೆ. ದೇವರೆದುರಿನಲ್ಲಿ ನೀತಿವಂತರಾಗಲು ಏನು ಮಾಡಬೇಕೆಂದು ಇತರೆ ಧರ್ಮಗಳು ಹೇಳುತ್ತವೆ?)

## ಆಟ ಲ

ಹಗ್ಗ

* ಮೂರು ಬೇರೆಬೇರೆ ಮರಗಳಿಗೆ ಅಥವಾ ಕಂಬಗಳಿಗೆ ಹಗ್ಗಗಳನ್ನು ಕಟ್ಟಿರಿ, ಅವುಗಳ ನಡುವೆ ಕನಿಷ್ಠ ೧ ಮೀಟರ್ ನಷ್ಟು ಅಂತರ ಇರಬೇಕು ಮತ್ತು ಅವುಗಳಿಗೆ ೧, ೨ ಮತ್ತು ೩ ಎಂಬದಾಗಿ ಬರೆದು ಅಂಟಿಸಿರಿ.

* (ನಿಮ್ಮ ತರಗತಿಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಗನುಸಾರವಾಗಿ) ಆರು ಮಂದಿ ಟ್ಯಾಗ್ ಮಾಡಿದವರನ್ನು ಕರೆಯಿರಿ, ಅವರು ಉಳಿದವರನ್ನು ಎಳೆದು ತರಬೇಕು.
* ಉಳಿದ ಮಕ್ಕಳು ಮರಗಳಿಂದ ಸುಮಾರು ೧೦ ಮೀಟರ್ ದೂರದಲ್ಲಿ ಚದುರಿರಬೇಕು. ಆರು ಮಂದಿ ಟ್ಯಾಗ್ ಮಾಡಿಸಿಕೊಂಡವರನ್ನು ಇತರರು ಹಾಗೂ ಮರಗಳ ನಡುವೆ ಬಿಡಿರಿ.



* ಶಿಕ್ಷಕಿಯು "ಹಗ್ಗವನ್ನು ಹಿಡಿಯಿರಿ" ಎಂದು ಹೇಳುವಾಗ ಆರು ಮಂದಿಯಲ್ಲಿ ಯಾರಿಂದಲೂ ಮುಟ್ಟಿಸಿಕೊಳ್ಳದೆ ಹಗ್ಗವನ್ನು ಹಿಡಿಯಬೇಕು. ಯಾರೆಲ್ಲಾ ಹಿಡಿಸಿಕೊಳ್ಳುತ್ತಾರೋ ಅವರು ಅಲ್ಲಿಯೇ ಸ್ತಬ್ಧರಾಗಿ ನಿಲ್ಲಬೇಕು.

* ಒಂದುವೇಳೆ ಅವರು ಹಗ್ಗದ ಬಳಿ ತಲುಪುವದಾದರೆ, ಮತ್ತು ಹಗ್ಗದ ಬಳಿ ಆಗಲೇ ಬೇರೊಬ್ಬರು ಇರುವದಾದರೆ, ಅವರು ಆ ಮಗುವಿನ ಕೈಯನ್ನು ಹಿಡಿದು ಸಾಲನ್ನು ಮುಂದುವರೆಸಬೇಕು. ಹಗ್ಗವನ್ನು ಹಿಡಿಯುವ ಅಥವಾ ಮಕ್ಕಳ ಸಾಲಿನಲ್ಲಿ ಸೇರಿರುವವರೆಲ್ಲರೂ ಹಗ್ಗವನ್ನು ರೂಪಿಸುತ್ತಾರೆ ಮತ್ತು ಸುರಕ್ಷಿತರಾಗಿರುತ್ತಾರೆ, ಅವರು ಸ್ತಬ್ಧರಾಗುವ ಅವಶ್ಯಕತೆಯಿಲ್ಲ.

* ಎಲ್ಲರೂ ಒಟುಗೂಡಿರುವಾಗ ಅಥವಾ ಸ್ತಬ್ಧರಾಗಿರುವಾಗ, ಆಟವನ್ನು ಮುಂದುವರೆಸಲು ವಿಶಲ್ ಊದಿರಿ. ಶಿಕ್ಶಕಿ ಸಂಖ್ಯೆ ೨ ಅಥವಾ ಸಂಖ್ಯೆ ೩ ಎಂದು ಹೇಳುವಾಗ, ಆ ಹಗ್ಗವನ್ನು ಹಿಡಿದಿರುವ ಮಕ್ಕಳು ತಮ್ಮ ಹಗ್ಗವನ್ನು ಬಿಡಬೇಕು ಮತ್ತು ಕಟ್ಟಲ್ಪಡದೆ ಬೇರೆಯದನ್ನು ಹಿಡಿಯಬೇಕು. ಸ್ತಬ್ದರಾಗಿರುವ ಮಕ್ಕಳು ಸಹ ಆ ಸಮಯದಲ್ಲಿ ಓಡಬಹುದು. ಮಕ್ಕಳಿಗೆ ಓಡಲು ಅವಕಾಶ ಕೊಡುವ ಸಲುವಾಗಿ ಆರು ಮಂದಿ ಕಟ್ಟಲ್ಪಟ್ಟಿರುವವರು ಪುನಃ ಪ್ರಾರಂಭಿಸುವ ಮೊದಲು ಆರು ಹೆಚ್ಚು ಹಿಂದಕ್ಕೆ ಹೋಗಬೇಕು.

* ಶಿಕ್ಷಕಿಯು ಸಂಖ್ಯೆ ೧ ಎಂಬದಾಗಿ ಹೇಳುವದಿಲ್ಲ ಯಾಕಂದರೆ ಮಕ್ಕಳೆಲ್ಲರೂ ಸಂಖ್ಯೆ ೧ ಹಗ್ಗವನ್ನು ಹಿಡಿದಿರುವಾಗ ಅಥವಾ ಸ್ತಬ್ದರಾಗಿರುವಾಗ ಆಟ  ಕೊನೆಗೊಳ್ಳುತ್ತದೆ.

* ಮಕ್ಕಳೆಲ್ಲರೂ ಸಂಖ್ಯೆ ೧ ಹಗ್ಗದ ಮೇಲೆ ಆತುಕೊಳ್ಳಬಹುದು ಎಂಬದನ್ನು ತಿಳಿಯುವದು ಮತ್ತು ಅಲ್ಲಿಗೆ ಮೊದಲು ಓಡಲು ಮುಂದಾಗುವ ತನಕ ಆಟವನ್ನು ಮುಂದುವರೆಸಿರಿ.

* ೨ ಮತ್ತು ೩ ಖಾಲಿಯಾಗಿರುವಾಗ ಮಕ್ಕಳೆಲ್ಲರೂ ಯಾಕೆ ೧ರ ಬಳಿಗೆ ಓಡುತ್ತಿದ್ದಾರೆ ಎಂದು ಕೇಳಿರಿ.

* ದೇವರಲ್ಲಿ ಭರವಸೆಯಿಡುವದಕ್ಕೆ ಇದು ಹೇಗೆ ಸಮಾನವಾಗಿದೆ ಎಂಬದರ ಬಗ್ಗೆ ಮಾತನಾಡಿರಿ. ಆತನು ಯಾವಾಗಲೂ ನಂಬಿಗಸ್ತನಾಗಿದ್ದಾನೆ ಮತ್ತು ನಾವು ಮೊದಲು ಆತನ ಬಳಿಗೆ ಓಡುವದಾದರೆ, ಬೇರೆ ಕಡೆಗೆ ಓಡುವ ಅವಶ್ಯಕತೆಯಿರುವದಿಲ್ಲ..

## ಹಾಜರಾತಿ ಲ




ತರಗತಿಗೆ ಹಾಜರಾದದ್ದಕ್ಕೆ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡುವ ಸಲುವಾಗಿ ಮತ್ತೊಂದು ಕಾರ್ಡ್ ಪಡೆಯಬೇಕಾದರೆ ಮುಂದಿನ ವಾರ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:

ಯೋಸೇಫ

## ಹೋಮ್ ವರ್ಕ್ ಲ

ಅಸೈನ್ಮೆಂಟ್

ಈ ವಾರದ ನಿಮ್ಮ ಅಸೈನ್ಮೆಂಟ್ ಜನರನ್ನು ಕ್ಷಮಿಸುವದಾಗಿದೆ. ನಾವೆಲ್ಲರೂ ಜನರಿಂದ ತೊಂದರೆಗೆ ಒಳಗಾಗಿದ್ದೇವೆ. ಆಗ ನಮಗೆ ಕೋಪ ಬರುತ್ತದೆ ಮತ್ತು ಸೇಡು ತೀರಿಸಿಕೊಳ್ಳಲು ಬಯಸುತ್ತೇವೆ ಅಥವಾ ನಾವು ಕ್ಷಮಿಸುವ ಹಾಗೂ ದೇವರಲ್ಲಿ ಭರವಸೆಯನ್ನಿಡುವ ಆಯ್ಕೆ ಮಾಡಿಕೊಳ್ಳಬಹುದು. ಈ ವಾರದಲ್ಲಿ ಯಾರಾದರು ನಿಮ್ಮನ್ನು ಹೇಗೆ ನೋಯಿಸಿದರು ಎಂಬದರ ಬಗ್ಗೆ ನೀವು ಯೋಚಿಸುವಾಗ, "ನಾನು ಅವರನ್ನು ಕ್ಷಮಿಸಿದ್ದೇನೆಯೇ" ಎಂಬದಾಗಿಯೂ ಯೋಚಿಸಿರಿ. ನೀವು ಅದನ್ನು ಆ ವ್ಯಕ್ತಿಗೆ ಹೇಳುವ ಅವಶ್ಯಕತೆಯಿಲ್ಲ, ಬದಲಾಗಿ ನೀವು ಏಕಾಂಗಿಯಾಗಿರುವಾಗಲೂ ಅದನ್ನು ಗಟ್ಟಿಯಾಗಿ ಹೇಳಬಹುದು. ಅದು ನಿಮ್ಮನ್ನು ನಿಮಗಿರುವ ಕೋಪದಿಂದ ಬಿಡುಗಡೆ ಮಾಡುತ್ತದೆ ಮತ್ತು ನೀವು ಪುನಃ ಸಂತೋಷದಿಂದಿರಬಹುದು. ನೀವು ಸಹ ನಿಮ್ಮ ಪರಲೋಕದ ತಂದೆಯಾದ ದೇವರ ಹಾಗೆ ಇರುವಿರಿ, ಯಾಕಂದರೆ ಆತನು ನಮ್ಮೆಲ್ಲರನ್ನು ಕ್ಷಮಿಸುತ್ತಾನೆ.  ನೀವು ಜನರನ್ನು ಹೆಚ್ಚಾಗಿ ಕ್ಷಮಿಸಿದಷ್ಟು, ನಿಮ್ಮೊಳಗೆ ಅಷ್ಟು ಸ್ವತಂತ್ರತೆಯನ್ನು ಅನುಭವಿಸಬಹುದಾಗಿದೆ.

**ಓದಿರಿ**

ದಿನ ೧: ವಿಮೋಚನಕಾಂಡ ೩:೨-೧೦

ದಿನ ೨: ವಿಮೋಚನಕಾಂಡ ೭:೧೦-೧೧, ೨೦-೨೧, ೮:೬-೮, ೧೬-೨೨

ದಿನ ೩: ವಿಮೋಚನಕಾಂಡ ೯:೨-೩, ೬-೧೯, ೧೦:೩-೫, ೨೧-೨೩

ದಿನ ೪: ವಿಮೋಚನಕಾಂಡ ೧೧:೪, ೧೨:೧೨-೧೪, ೨೯-೩೦

ದಿನ ೫: ವಿಮೋಚನಕಾಂಡ ೧೪:೫-೯, ೧೩, ೨೧-೨೭

# ೯. ಪಾಪವನ್ನು ಹಿಂದಕ್ಕೆ ಬಿಡಿರಿ



**ವೀರ: ಮೋಶೆ**

ವಿಮೋಚನಕಾಂಡ ೧:೧-೨:೧೫, ೩:೧-೧೨, ೪:೧೦-೧೭, (೭:೮-೧೩:೪೨), ೧೪:೫-೩೧, ಅಪೊ ೭:೨೦-೩೪, ಇಬ್ರಿಯ ೧೧:೨೩-೨೯

## ಕಂಠಪಾಠ ವಚನ ೯

೨ ತಿಮೊಥೆಯನಿಗೆ ೨:೨೧ " ಹೀಗಿರಲಾಗಿ, ಒಬ್ಬನು ಕೀಳುತನದಿಂದ ತನ್ನನ್ನು ತಾನೇ ಶುದ್ಧೀಕರಿಸಿಕೊಂಡರೆ, ಅವನು ಉತ್ತಮ ಬಳಕೆಗೆ ಯೋಗ್ಯನಾಗುತ್ತಾನೆ. ಅಂಥವನು ದೇವರ ಸೇವೆಗೆ ಮೀಸಲಾಗುತ್ತಾನೆ. ಸತ್ಕಾರ್ಯಗಳನ್ನು ಕೈಗೊಳ್ಳಲು ಸಿದ್ಧನಾಗಿರುತ್ತಾನೆ."

## ಕಥೆಯ ಅವಶ್ಯಕತೆ ೯



ಮತ್ತಾಯ ತಾಯಿ ಅಡುಗೆ ಮಾಡುತ್ತಿದ್ದರು ಆದರೆ ಮನೆಯಲ್ಲಿ ಮೊಟ್ಟೆಯಿರಲಿಲ್ಲ, ಆದ್ದರಿಂದ ಮೊಟ್ಟೆ ತರಲು ಅವನು ವೇಗವಾಗಿ ಅಂಗಡಿಗೆ ಹೋಗುತ್ತಿದ್ದನು. ಅವನು ಅಂಗಡಿಯ ಮುಂದೆ ಜೋರಾಗಿ ಕೂಗಿದನು ಆದರೆ ಅಂಗಡಿಯಲ್ಲಿ ಯಾರೂ ಇರಲಿಲ್ಲ. ಆದರೆ ಅಂಗಡಿಯಲ್ಲಿ ಬಹಳ ಹಣ ಇರುವದನ್ನು ನೋಡಿದನು. ಯಾರೋ ಮರೆತು ಹಣವನ್ನು ಬಿಟ್ಟು ಹೋಗಿದ್ದರು. ಯಾರೂ ಇರಲಿಲ್ಲವಾದ್ದರಿಂದ, ಮತ್ತಾಯನು ಆ ಹಣವನ್ನು ತೆಗೆದುಕೊಂಡನು.

## ಮುಖ್ಯ ಪಾಠ ೯

ಯಾಕೋಬನ ಕುಟುಂಬವು ಇಸ್ರಾಯೇಲ್ ಜನಾಂಗವಾಗಿ ಬೆಳೆಯಿತು. ಆದರೆ ಐಗುಪ್ತ್ಯರು ಅವರನ್ನು ದಾಸರನ್ನಾಗಿ ಮಾಡಿಕೊಂಡರು ಮತ್ತು ಫರೋಹನು ಅವನಿಗೆ ಹುಟ್ಟಿದ ಎಲ್ಲಾ ಗಂಡು ಮಕ್ಕಳನ್ನು ಕೊಲ್ಲಲು ತೀರ್ಮಾನಿಸಿದನು. ಆದರೆ ಇಸ್ರಾಯೇಲಿನ ಒಬ್ಬ ಸ್ತ್ರೀ ತನ್ನ ಗಂಡು ಮಗುವನ್ನು ಬುಟ್ಟಿಯೊಳಗಿಟ್ಟು ನೈಲ್ ನದಿಯಲ್ಲಿ ಬಿಟ್ಟಳು. ಫರೋಹನ ಮಗಳು ಆ ಮಗುವನ್ನು ಸಾಕಿದಳು ಮತ್ತು ಅವನಿಗೆ ಮೋಶೆ ಎಂದು ಹೆಸರಿಟ್ಟಳು. ಮೋಶೆ ದೇವಜನರ ಜೊತೆ ಗುರುತಿಸಿಕೊಳ್ಳುವ ಸಲುವಾಗಿ ಐಗುಪ್ತದ ರಾಜಮನೆತನದಲ್ಲಿ ತನಗಿದ್ದ ಶ್ರೇಷ್ಠವಾದ ಸ್ಥಾನವನ್ನು ತಿರಸ್ಕರಿಸುವ ಮೂಲಕ ತನ್ನ ನಂಬಿಕೆಯನ್ನು ವ್ಯಕ್ತಪಡಿಸಿದನು. ಅವನು ಇಸ್ರಾಯೇಲ್ಯರನ್ನು ಕಾಪಾಡಬೇಕೆಂದಿದ್ದನು ಆದರೆ ಅವನ ಪಾಪ ಅವನಿಗೆ ಅಡ್ಡಿಪಡಿಸಿತು. ಒಂದುದಿನ ಒಬ್ಬ ಐಗುಪ್ತ್ಯನು ಇಸ್ರಾಯೇಲ್ಯನನ್ನು ಹೊಡೆಯುವದನ್ನು ನೋಡಿ ಮೋಶೆ ಅವನನ್ನು ಕೊಂದು ಬಿಟ್ಟನು. ಆದರೆ ಮೋಶೆಯ ಹೃದಯದಲ್ಲಿ ಮತ್ತೊಂದು ಪಾಪವಿತ್ತು: ಗರ್ವ. ಮೋಶೆ ತನ್ನ ಮಾರ್ಗದನುಸಾರ ಇಸ್ರಾಯೇಲ್ಯರನ್ನು ಕಾಪಾಡಬಹುದೆಂದು ಅಂದುಕೊಂಡಿದ್ದನು. ದೇವರು ಅಹಂಕಾರಿಗಳನ್ನು ಎದುರಿಸುತ್ತಾರೆ ಆದರೆ ದೀನರಿಗಾದರೋ ಕೃಪೆಯನ್ನು ಕೊಡುತ್ತಾನೆ ಎಂದು ಸತ್ಯವೇದವು ಹೇಳುತ್ತದೆ. ದೇವರು ಯೋಸೇಫನ ಹೃದಯದಲ್ಲಿ ಕಾರ್ಯಮಾಡಿದ ಹಾಗೆಯೇ, ಮೋಶೆಯ ಹೃದಯದಲ್ಲಿಯೂ ಕಾರ್ಯ ಮಾಡಿದನು. ಮೋಶೆ ಮಾಡಿದ ತಪ್ಪು ಎಲ್ಲರಿಗೂ ಗೊತ್ತಾಯಿತು, ಆದ್ದರಿಂದ ಅವನು ತನ್ನ ಪ್ರಾಣ ಉಳಿಸಿಕೊಳ್ಳಲು ಓಡಿ ಹೋದನು ಮತ್ತು ಅರಣ್ಯದಲ್ಲಿ ಜೀವಿಸಿದನು.

೪೦ ವರ್ಷಗಳ ನಂತರ, ದೇವರು ಉರಿಯುವ ಪೊದೆಯಲ್ಲಿ ಕಾಣಿಸಿಕೊಳ್ಳುವ ಮೂಲಕ ಮೋಶೆಯೊಂದಿಗೆ ಮಾತನಾಡಿದನು, ಆ ಪೊದೆಗೆ ಬೆಂಕಿ ಬಿದ್ದಿದ್ದರೂ ಅದು ಉರಿಯದೆ ಹಾಗೆ ಇತ್ತು. ದೇವರು ಮೋಶೆಗೆ ಹಿಂದಿರುಗಿ ಹೋಗುವಂತೆ ಹೇಳಿದನು, ಆದರೆ ಈ ಸಲ ದೇವರು ಇಸ್ರಾಯೇಲ್ಯರನ್ನು ಕಾಪಾಡುವವನಾಗಿದ್ದನು ಮತ್ತು ಮೋಶೆ ದೇವರ ಮಾರ್ಗದನುಸಾರವಾಗಿ ಕಾರ್ಯಗಳನ್ನು ಮಾಡಬೇಕಾಗಿತ್ತು. ಇಸ್ರಾಯೇಲ್ಯರನ್ನು ಕಾಪಾಡಲು ತನ್ನಿಂದ ಆಗುವದಿಲ್ಲ, ತನಗೆ ಮಾತನಾಡಲು ಬರುವದಿಲ್ಲ ಮತ್ತು ಜನರನ್ನು ಮುನ್ನಡೆಸುವ ಸಾಮರ್ಥ್ಯ ತನ್ನಲ್ಲಿ ಇಲ್ಲ ಎಂದು ಮೋಶೆ

ಅಂದುಕೊಂಡಿದ್ದನು. ಆದರೆ ಇವು ಪರಿಪೂರ್ಣವಾಗಿದ್ದವು! ಸಹಜವಾಗಿ ನಾವು ಯಾವ ಕ್ಷೇತ್ರದಲ್ಲಿ ಬಲಹೀನರಾಗಿರುತ್ತೇವೆಯೋ ದೇವರು ಅದರಲ್ಲಿಯೇ ನಮ್ಮನ್ನು ಉಪಯೋಗ ಮಾಡುತ್ತಾನೆ, ಆದ್ದರಿಂದಲೇ ದೇವರೇ ನಮ್ಮ ಮೂಲಕ ಮಾಡುತ್ತಿದ್ದಾನೆ ಎಂಬದು ನಮಗೆ ದೃಢವಾಗುತ್ತದೆ.

ಈಗಾಗಲೇ ನಾವು ಮತ್ತಾಯನು ಅಂಗಡಿಯಲ್ಲಿ ಕದಿಯುವದನ್ನು ಕೇಳಿದ್ದೇವೆ. ಮತ್ತಾಯನು ಕದಿಯುವಾಗ ದೇವರಿಂದ ಉಪಯೋಗವಾಗಲು ಆಗುವದಿಲ್ಲ. ಒಂದುವೇಳೆ ನಾವು ಪಶ್ಚಾತ್ತಾಪಪಟ್ಟರೆ ಅಥವಾ ನಮ್ಮ ಗರ್ವ ಹಾಗೂ ಪಾಪವನ್ನು ತ್ಯಜಿಸಿದರೆ, ದೇವರು ನಮ್ಮನ್ನು ಉಪಯೋಗ ಮಾಡುತ್ತಾನೆ. ಆಗ ದೇವರು ನಮ್ಮನ್ನು ಕರೆಯುವ ಸಮಯದಲ್ಲಿ, ನಾವು ಭಯಪಡುವ ಅವಶ್ಯಕತೆ ಇರುವದಿಲ್ಲ ಯಾಕಂದರೆ, ದೇವರು ನಮ್ಮ ಮೂಲಕ ಕಾರ್ಯ ಮಾಡುತ್ತಾನೆ ಎಂಬದು ನಮಗೆ ಗೊತ್ತಿರುತ್ತದೆ.

ಚರಿತ್ರೆಯಲ್ಲಿಯೇ ದೇವರ ಶಕ್ತಿಯ ಮಹದಾದ ಪ್ರದರ್ಶನದೊಂದಿಗೆ ಇಸ್ರಾಯೇಲ್ಯರನ್ನು ಬಿಡಿಸಲು ದೇವರು ಮೋಶೆಯನ್ನು ಐಗುಪ್ತ ದೇಶದಲ್ಲಿ ಉಪಯೋಗ ಮಾಡಿದನು. ದೇವರು ಐಗುಪ್ತದ ಮೇಲೆ ೧೦ ಉಪದ್ರವಗಳನ್ನು ಬರಮಾಡಿದನು: ನೀರನ್ನು ರಕ್ತವಾಗಿ ಮಾರ್ಪಡಿಸಿದನು, ಹೇನುಗಳು, ಹುಳುಗಳನ್ನು ಬರಮಾಡಿದನು, ಪಶುಗಳೆಲ್ಲಾ ಸತ್ತು ಹೋದವು, ಜನರ ಮೈಯಲ್ಲಿ ಹುಣ್ಣುಗಳಾದವು, ಕಲ್ಮಳೆ ಉಂಟಾಯಿತು, ಮಿಡತೆಗಳುಂಟಾದವು, ಕಾರ್ಗತ್ತಲು ಉಂಟಾಯಿತು ಮತ್ತು ಅಂತಿಮವಾಗಿ ಐಗುಪ್ತ್ಯರ ಚೊಚ್ಚಲು ಮಕ್ಕಳು ಸತ್ತು ಹೋದರು. ಕಡೆಯ ಉಪದ್ರವದ ಸಮಯದಲ್ಲಿ, ದೇವರು ಇಸ್ರಾಯೇಲ್ಯರಿಗೆ ಆಹಾರಕ್ಕಾಗಿ ಕುರಿಮರಿಯನ್ನು ಕೊಯ್ಯಿರಿ ಮತ್ತು ಅದರ ರಕ್ತವನ್ನು ನಿಮ್ಮ ಮನೆಯ ಬಾಗಿಲುಗಳ ನಿಲುವು ಪಟ್ಟಿಗಳಿಗೆ ಹಚ್ಚಿರಿ ಎಂದು ಹೇಳಿದನು. ದೇವರಿಗೆ ವಿಧೇಯರಾದ ಪ್ರತಿಯೊಬ್ಬರ ಮನೆಯ ಚೊಚ್ಚಲು ಮಕ್ಕಳು ರಕ್ಷಣೆ ಹೊಂದಿದರು. ದೇವರು ತನ್ನ ಮಗನನ್ನು ಕುರಿಮರಿಯ ಹಾಗೆ ಸಾಯಲು ಕಳುಹಿಸುವನು ಎಂಬದಕ್ಕೆ ಇದು ಚಿತ್ರಣವಾಗಿತ್ತು. ಅನೇಕ ಜನರು ಯೇಸುವನ್ನು ನಂಬದೆ, ಪಶ್ಚಾತ್ತಾಪಪಡದೆ ಮತ್ತು ದೇವರಿಗೆ ವಿಧೇಯರಾಗದೆ ತಮ್ಮ ಮಾರ್ಗದನುಸಾರ ತಮ್ಮನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ನೀವು ದೇವರ ಮಾರ್ಗವನ್ನು ಆರಿಸಿಕೊಳ್ಳುತ್ತೀರೋ?

ಇಸ್ರಾಯೇಲ್ಯರು ದೇವರನ್ನು ಹಿಂಬಾಲಿಸುತ್ತಿದ್ದ ಕೆಂಪು ಸಮುದ್ರವನ್ನು ತಲುಪಿದರು, ನಂತರ ಐಗುಪ್ತ್ಯರು ಅವರನ್ನು ಹಿಂಬಾಲಿಸಿಕೊಂಡು ಬಂದರು! ದೇವರು ನಮಗಾಗಿ ಹೋರಾಡುವನು ಮತ್ತು ನಮ್ಮನ್ನು ಕಾಯುವನು ನಾವು ಭಯಪಡುವ ಅವಶ್ಯಕತೆಯಿಲ್ಲ ಎಂದು ಮೋಶೆ ಇಸ್ರಾಯೇಲ್ಯರಿಗೆ ಹೇಳಿದನು. ದೇವರು ಕೆಂಪು ಸಮುದ್ರವನ್ನು ವಿಭಾಗಿಸಿದನು ಮತ್ತು ಇಸ್ರಾಯೇಲ್ಯರು ಒಣ ನೆಲದ ಮೇಲೆ ನಡೆದಾಗ ಸಮುದ್ರದ ನೀರು ಎರಡು ಕಡೆಗಳಲ್ಲಿ ಗೋಡೆಯಂತೆ ನಿಂತಿತ್ತು, ಆದರೆ ಅವರನ್ನು  ಹಿಂಬಾಲಿಸಿಕೊಂಡು ಬಂದ ಐಗುಪ್ತ್ಯರು ನೀರಿನಲ್ಲಿ ಮುಳುಗಿ ಹೋದರು. ದೇವರು ದೀನತೆಯೊಂದಿಗೆ ಮತ್ತು ಬಹುತೇಕ ದೇವರಿಗೆ ಸಂಪೂರ್ಣ ವಿಧೇಯನಾಗಿ ಮೋಶೆ ಇಸ್ರಾಯೇಲ್ಯರನ್ನು ತನ್ನ ಜೀವನ ಪರ್ಯಂತರ ಮುನ್ನಡೆಸಿದನು.

ನಾನು ನನ್ನ ಪಾಪಗಳಿಗೆ ಪಶ್ಚಾತ್ತಾಪಪಟ್ಟು ದೇವರ ಎದುರಿನಲ್ಲಿ ಶುದ್ಧನಾಗಿ ಜೀವಿಸುವ ಆಯ್ಕೆ ಮಾಡಿಕೊಳ್ಳುತ್ತೇನೆ.

## ವಿಶ್ಲೇಷಣೆ ೯

ಒಳ್ಳೆಯ ಕೆಲಸ ಮಾಡಿ ಹಣವನ್ನು ಅಂಗಡಿಗೆ ಹಿಂದಿರುಗಿಸುವ ಅವಕಾಶ ಮತ್ತಾಯನಿಗೆ ದೊರೆಯಿತು. ಅವನ ಅದರ ಬಗ್ಗೆಯೇ  ಯೋಚಿಸುತ್ತಿದ್ದನು, ನಂತರ ಯಥಾರ್ಥ ಮನಸ್ಸಿನ ಅವನ ಸ್ನೇಹಿತೆ ರೂತಳು ಅವನಿಗೆ ಸಹಕಾರ ನೀಡಿದಳು. "ನನಗೆ ಖಂಡಿತವಾಗಿಯೂ ನಿನ್ನ ಸಹಕಾರದ ಅವಶ್ಯಕತೆಯಿದೆ" ಎಂದು ಮತ್ತಾಯನು ಅವಳಿಗೆ ಹೇಳಿದನು. ತನ್ನ ಸ್ನೇಹಿತೆಯ ಸಹಾಯದಿಂದ ಅವನ ಒಳ್ಳೆಯ ಕೆಲಸ ಮಾಡಿದನು ಮತ್ತು ಹಣವನ್ನು ಹಿಂದಿರುಗಿಸಿದನು.



## ಚಟುವಟಿಕೆ ೯

ಕಥೆ ಹೇಳಿರಿ



ಮಾಸಪತ್ರಿಕೆಗಳನ್ನು ತನ್ನಿರಿ ಅಥವಾ ಜನರ, ಸ್ಥಳಗಳ ಮತ್ತು ವಸ್ತುಗಳನ್ನು ಚಿತ್ರಗಳನ್ನು ಕತ್ತರಿಸಿ ತರಗತಿಗೆ ತೆಗೆದುಕೊಂಡು ಬನ್ನಿರಿ (ಅನಾವಶ್ಯಕವಾದ ಚಿತ್ರಗಳನ್ನು ತಾರದಂತೆ ಎಚ್ಚರವಹಿಸಿರಿ). ಮಕ್ಕಳು ೨ ಅಥವಾ ಹೆಚ್ಚು ತಂಡಗಳಾಗಿ ವಿಭಜಿಸಿರಿ. ಪಾಪ, ಪಶ್ಚಾತ್ತಾಪ ಮತ್ತು ಜೀವಿತವನ್ನೊಳಗೊಂಡ ಕಥೆಯನ್ನು ಸೃಷ್ಟಿಸುವ ಸಲುವಾಗಿ ಪ್ರತಿಯೊಂದು ತಂಡವು ಮಾಸ ಪತ್ರಿಕೆಗಳಿಂದ ಕತ್ತರಿಸಿರುವ ಚಿತ್ರಗಳನ್ನು ಉಪಯೋಗಿಸಬೇಕು.

## ಟೈಮ್ ಲೈನ್ ೯

ಮೋಶೆಯ ಜೀವಿತದ ಗೆರೆಯನ್ನು ಎಳೆಯಿರಿ.

ಪ್ರಶ್ನೆ: ಯೋಸೇಫನ ಜನನದಿಂದ ಮೋಶೆಯ ಜನನದ ತನಕ ಎಷ್ಟು ವರ್ಷಗಳ ಅಂತರವಿದೆ? ಉತ್ತರ: ನಿಖರವಾಗಿ ಎಷ್ಟು ವರ್ಷಗಳೆಂದು ನಮಗೆ ಗೊತ್ತಿಲ್ಲ, ಆದರೆ ಸುಮಾರು ೩೮೦ ವರ್ಷಗಳಿರಬಹುದು ಎಂದು ಅಂದಾಜಿಸಲಾಗಿದೆ.

ಪ್ರಶ್ನೆ: ಮೋಶೆ ಎಷ್ಟು ವರ್ಷಗಳ ಕಾಲ ಬದುಕಿದನು? ಉತ್ತರ: ೧೨೦ ವರ್ಷಗಳು.

## ಆಟ ೯

**ದಶಾಜ್ಞೆಗಳು**



* ಈ ಚಟುವಟಿಕೆಗೆ, ಹತ್ತು ಮೊಟ್ಟೆಗಳು, ಒರೆಸುವ ಬಟ್ಟೆಗಳು ಮತ್ತು ತನ್ನ ಮೇಲೆ ಕಸ ಹಾಕಿಸಿಕೊಳ್ಳಲು ಸಿದ್ಧನಿರುವ ಒಬ್ಬ ವ್ಯಕ್ತಿ ಬೇಕು.
* ದಶಾಜ್ಞೆಯ ಪ್ರತಿಯೊಂದು ಆಜ್ಞೆಗೂ ಹುಡುಗನು ಕೈಯಲ್ಲಿ ಒಂದೊಂದು ಮೊಟ್ಟೆಯನ್ನು ಹಿಡಿದುಕೊಳ್ಳಬೇಕು. ವಿವಿಧ ರೀತಿಯಲ್ಲಿ ಮೊಟ್ಟೆಗಳನ್ನು ಹಿಡಿದುಕೊಳ್ಳುವಂತೆ ಹೇಳಿರಿ, ಉದಾಹರಣೆಗೆ: ತನ್ನ ಕೈಯಲ್ಲಿ, ಕಾಲಲ್ಲಿ, ಮೊಣಕಾಲುಗಳ ನಡುವೆ, ತೋಳಿನ ಕೆಳಗೆ, ಬಾಯಲ್ಲಿ ಇತ್ಯಾದಿ.
* ಪ್ರತಿ ಬಾರಿ ಮೊಟ್ಟೆ ಬೀಳದಂತೆ ಹಿಡಿದುಕೊಳ್ಳುವದು ಕಷ್ಟವಾಗುತ್ತದೆ. ಅಂತಿಮವಾಗಿ ೧೦ನೇ ಆಜ್ಞೆಗೆ ಮೊಟ್ಟೆಯನ್ನು ಅವನ ತಲೆಯ ಮೇಲೆ ಇಡಿರಿ.
* ಆಟದ ಸಮಯದಲ್ಲಿ, ಒಂದೊಂದೇ ಆಜ್ಞೆಯನ್ನು ಪಾಲಿಸುವದು ಸುಲಭ ಆದರೆ ಎಲ್ಲವನ್ನೂ ಒಟ್ಟಾಗಿ ಪಾಲಿಸುವದು ಎಷ್ಟು ಕಷ್ಟ ಎಂಬದರ ಬಗ್ಗೆ ಮಾತನಾಡಿರಿ. ಉದಾಹರಣೆಗೆ, ೬ನೇ ಆಜ್ಞೆ, ನರಹತ್ಯ ಮಾಡಬಾರದು ಎಂದು ಹೇಳುವದು ಸುಲಭ, ಆದರೆ ಮೊಟ್ಟೆಯನ್ನು ಅತ್ಯಂತ ಸುಲಭವಾದ ಸ್ಥಳದಲ್ಲಿ ಹಾಕಿರಿ (ಮೊಟ್ಟೆಯನ್ನು ಎಲ್ಲಿ ಹಾಕಬೇಕೆಂದು ಮಕ್ಕಳು ಕೂಗುತ್ತಾ ಹೇಳಬಹುದು). ನಾವೆಲ್ಲರೂ ಪಾಪ ಮಾಡಿದ್ದೇವೆ ಮತ್ತು ಮೊಟ್ಟೆಯನ್ನು ಬೀಳಿಸಿದ್ದೇವೆ ಎಂಬದನ್ನು ಮಕ್ಕಳಿಗೆ ತೋರಿಸುವದೇ ಮುಖ್ಯ ವಿಷಯವಾಗಿದೆ.
* ಕಡೆಯಲ್ಲಿ, ಹುಡುಗನ ತಲೆಯ ಮೇಲೆ ಮೊಟ್ಟೆಯನ್ನು ಹೊಡೆಯಿರಿ. (ಮಕ್ಕಳು ತೋರಿಸದೆ ಇಟ್ಟುಕೊಂಡಿರುವ ಕಲ್ಲಿನಿಂದ ಮೊಟ್ಟೆಯನ್ನು ಹೊಡೆಯಿರಿ. ಹುಡುಗನ ತಲೆಗೇ ಮೊಟ್ಟೆಯನ್ನು ಹೊಡೆಯಬೇಡಿರಿ, ನೋವಾಗುತ್ತದೆ). ಆ ಹುಡುಗನಿಗೆ ಹೀಗೇ ಮಾಡುತ್ತಾರೆ ಎಂದು ಮೊದಲೇ ಗೊತ್ತಿರಬೇಕು. ಇದು ಅತ್ಯಂತ ಪರಿಣಾಮಕಾರಿಯಾದ ದೃಶ್ಯ ಮಾಧ್ಯಮ ಪಾಠವಾಗಿದೆ.

**ದಶಾಜ್ಞೆಗಳು**

೧. ಬೇರೆ ದೇವರುಗಳು ಇರಬಾರದು

೨. ಯಾವ ವಿಗ್ರಹಗಳನ್ನೂ ಮಾಡಿಕೊಳ್ಳಬಾರದು, ಅವುಗಳಿಗೆ ಅಡ್ಡಬೀಳಬಾರದು

೩. ದೇವರ ನಾಮವನ್ನು ಅಯೋಗ್ಯಕಾರ್ಯಕ್ಕಾಗಿ ಬಳಸಬಾರದು

೪. ಸಬ್ಬತ್ ದಿನವನ್ನು ಆಚರಿಸಬೇಕು

೫. ನಿಮ್ಮ ತಂದೆತಾಯಿಗಳನ್ನು ಸನ್ಮಾನಿಸಬೇಕು

೬. ನರಹತ್ಯ ಮಾಡಬಾರದು

೭. ವ್ಯಭಿಚಾರ ಮಾಡಬಾರದು

೮. ಕದಿಯಬಾರದು


೯. ಸುಳ್ಳು ಸಾಕ್ಷಿ ಹೇಳಬಾರದು (ಸುಳ್ಳಿನಿಂದ ಮತ್ತೊಬ್ಬರನ್ನು ಕಷ್ಟಕ್ಕೆ ಗುರಿಪಡಿಸಬಾರದು)

೧೦. ಮತ್ತೊಬ್ಬನ ಯಾವದನ್ನೂ ಆಶಿಸಬಾರದು

## ಒಗಟಿನ ಉತ್ತರಗಳು ೯

| | | | | | | | | | |
|---|---|---|---|---|---|---|---|---|---|
| ಐ | ಧ | ಯಾ | ಣ | ತ | ಪು | ಪೊ | ದೆ | ಳ್ | ಪ |
| ಕೋ | ಲು | ಕೋ | ೧ | ರ | ಕ | ಕೊ | ಮೋ | ೧ | ದ್ದ |
| ವ | ಕೆಂ | ಬ | ದ | ರೋ | ಗ | ಲ್ಲು | ಡ | ಔ | ನ್ |
| ದೇ | ಪು | ಹೋ | ಉ | ಪ | ದ್ರ | ವ | ಗ | ಳು | ಆ |
| ವ | ನ | ಐ | ದೆ | ಪಾ | ಋ | ದು | ಳು | ಮು | ರಾ |
| ದೂ | ಮು | ಲ್ಲು | ಗು | ಕು | ಲ | ಗ | ಳು | ಮೋ | ಶೆ |
| ನು | ದ್ರ | ಉ | ಡ | ಪ್ತ | ಸು | ದೆ | ಫ | ಕ್ಷ | ಮ್ |
| ಝು | ಶ | ಕೋ | ಪ | ಕೂ | ಪಾ | ಬಿ | ಕೋ | ರೋ | ಳ |
| ಪಾ | ಠ | ೧ | ೦ | ಪು | ಮು | ಟ್ಟ | ಬೆಂ | ಕಿ | ಹ |
| ಚ | ದೇ | ವ | ರು | ಕ | ರ್ತ | ನು | ತ್ | ರೋ | ಪ |



## ಪ್ರಶ್ನೆಗಳು ಮತ್ತು ಉತ್ತರಗಳು ೯

೧. ಒಂದುವೇಳೆ ದೇವರು ನನ್ನನ್ನು ಕ್ಷಮಿಸುತ್ತಾನಾದರೇ, ನಾನು ಯಾಕೆ ಪಾಪ ಮಾಡಬಾರದು? (ರೋಮಾ ೭ರ ಗೊಂದಲ. ದೇವರು ನನ್ನನ್ನು ಕ್ಷಮಿಸುತ್ತಾನಾದ್ದರಿಂದ ನಾನು ಪಾಪ ಮಾಡದಂತೆ ಯಾಕೆ ಎಚ್ಚರದಿಂದಿರಬೇಕು? ಪಾಪವು ಯಾವಾಗಲೂ ದೇವರಿಗೆ ವಿರುದ್ಧವಾದದ್ದಾಗಿದೆ ಮತ್ತು ಶಿಕ್ಷೆಗೆ ಅರ್ಹವಾದದ್ದಾಗಿದೆ. ಯೇಸು ಕ್ರಿಸ್ತನು ನಮ್ಮನ್ನು ಕ್ಷಮಿಸುತ್ತಾನೆ, ಆದರೆ ಪಾಪದ ಪರಿಣಾಮಗಳನ್ನು ತಪ್ಪದೆ ಎದುರಿಸಬೇಕಾಗುತ್ತದೆ. ಉದಾಹರಣೆಗೆ, ಒಂದುವೇಳೆ ನಾನು ತರಗತಿಯಲ್ಲಿ ತಪ್ಪಾಗಿ ನಡೆದುಕೊಂಡರೆ ದೇವರು ನನ್ನನ್ನು ಕ್ಷಮಿಸುತ್ತಾನೆ ಆದರೆ ತರಗತಿಯಲ್ಲಿ ನನಗೆ ಶಿಕ್ಷೆಯಾಗುತ್ತದೆ).

೨. ಒಂದುವೇಳೆ ನಾವು ಅತ್ಯಂತ ಹೀನವಾದ ಕಾರ್ಯ ಮಾಡಿದರೆ ಏನಾಗುತ್ತದೆ? (ದೇವರು ದೊಡ್ಡ ಪಾಪಗಳನ್ನೂ ಕ್ಷಮಿಸುತ್ತಾನೆ ಆದರೂ ನಾವು ಪಶ್ಚಾತ್ತಾಪಪಡಬೇಕು ಮತ್ತು ಕ್ಷಮಾಪಣೆ ಕೇಳಬೇಕು ಎಂಬದನ್ನು ಮಕ್ಕಳಿಗೆ ಅರ್ಥಮಾಡಿಸಲು ಈ ಪ್ರಶ್ನೆ ಸಹಾಯ ಮಾಡುತ್ತದೆ. ಹಾಗೆಯೇ ಒಂದುವೇಳೆ  ನಾವು ಯಾರನ್ನಾದರೂ ಬಹಳವಾಗಿ ನೋಯಿಸಿದರೆ, ದೇವರು ನಮ್ಮನ್ನು ಕ್ಷಮಿಸಿದರೂ ನಾವು ಕೆಲವೊಮ್ಮೆ ಸೆರೆವಾಸವನ್ನು ಅನುಭವಿಸಬೇಕಾಗುತ್ತದೆ. ಮಾದಕ ಪದಾರ್ಥಗಳು, ಹಿಂಸೆ ಅಥವಾ ಲೈಂಗಿಕ ಕಾರ್ಯಗಳು ನಮ್ಮ ಭವಿಷ್ಯವನ್ನು ನಾವಂದುಕೊಳ್ಳದ ರೀತಿಯಲ್ಲಿ ಸಂಪೂರ್ಣವಾಗಿ ಬದಲಾಯಿಸುತ್ತದೆ)

೩. ನಾನೇನೋ ಒಳ್ಳೇದನ್ನೇ ಮಾಡಬೇಕೆಂದಿರುತ್ತೇನೆ ಆದರೆ ಒಳ್ಳೇದು ಮಾಡಲು ಹೋಗಿ ಕೆಟ್ಟದ್ದು ನಡೆದರೆ ತೊಂದರೆಯಿಲ್ಲವೇ? (ಇದು ನಮ್ಮ ಉದ್ದೇಶಗಳು ಹಾಗೂ ಕ್ರಿಯೆಗಳ ನಡುವೆ ಏರ್ಪಡುವ ಹೋರಾಟವಾಗಿದೆ. ದೇವರು ನಮ್ಮ ಉದ್ದೇಶಗಳ ಬಗ್ಗೆ ಚಿಂತಿಸುತ್ತಾನೆ, ಆದರೆ ಪೌಲನು ಕೇಳುವದೇನೆಂದರೆ, “ಒಳ್ಳೇದಾಗಲಿ ಎಂದು ನಾವು ಪಾಪ ಮಾಡುತ್ತಲೇ ಇರಬೇಕೋ?” ಇದಕ್ಕೆ ಉತ್ತರ, “ಖಂಡಿತವಾಗಿಯೂ ಇಲ್ಲ!”
– ರೋಮಾ ೩:೫-೮).

## ಹಾಜರಾತಿ ೯




ತರಗತಿಗೆ ಹಾಜರಾದದ್ದಕ್ಕೆ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡುವ ಸಲುವಾಗಿ ಮತ್ತೊಂದು ಕಾರ್ಡ್ ಪಡೆಯಬೇಕಾದರೆ ಮುಂದಿನ ವಾರ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:

ಮೋಶೆ

## ಹೋಮ್ ವರ್ಕ್ ೯

ಅಸೈನ್ಮೆಂಟ್

ನಿಮ್ಮ ಅಸೈನ್ಮೆಂಟ್ ಏನೆಂದರೆ ನೀವು ಪಾಪ ಮಾಡಿದಾಗ ಅಂದರೆ ಅದನ್ನು ಮರೆಮಾಡುವಾಗ ಅಥವಾ ಸುಳ್ಳು ಹೇಳುವಾಗ ಯಾವ ರೀತಿ ಪ್ರತಿಕ್ರಿಯಿಸುವಿರಿ ಎಂಬದನ್ನು ಬರೆಯಬೇಕು. ಕೆಲವೊಮ್ಮೆ ನಾನು, “ನಾನು ಒಳ್ಳೇ ವ್ಯಕ್ತಿಯಲ್ಲ, ಅದ್ದರಿಂದ ಇದನ್ನು ಮಾಡುವ ಅರ್ಹತೆ ನನಗಿಲ್ಲ” ಎಂಬದಾಗಿ ಹೇಳುವ ಮೂಲಕ ನಮ್ಮನ್ನೇ ಶಿಕ್ಷಿಸಿಕೊಳ್ಳುತ್ತೇವೆ ಹಾಗೂ ನಿರಾಸೆಗೊಳಗಾಗುತ್ತೇವೆ. ಆದರೆ ನಾವು ಪಾಪ ಮಾಡಿದ್ದೇವೆ ಎಂದು ಒಪ್ಪಿಕೊಳ್ಳುವದು ಮತ್ತು ಆ ಪಾಪವನ್ನು ಕ್ಷಮಿಸುವಂತೆ ಯೇಸು ಕ್ರಿಸ್ತನನ್ನು ಬೇಡಿಕೊಳ್ಳುವದು ಉತ್ತಮವಾದ ಪ್ರತಿಕ್ರಿಯೆಯಾಗಿದೆ. ನಿಮ್ಮ ಪಾಪದ ವಿಷಯದಲ್ಲಿ ನೀವು ಚಿಂತಿಸಬೇಕೆಂದು ದೇವರು ಬಯಸುವದಿಲ್ಲ. ಆದನ್ನು ಅದನ್ನು ಕ್ಷಮಿಸಲು ಬಯಸುತ್ತಾನೆ ಯಾಕಂದರೆ ಆಗ ಇತರರನ್ನು ಪ್ರೋತ್ಸಾಹಪಡಿಸುವ ಬಲ ನಿಮಗೆ ಸಿಗುತ್ತದೆ.

**ಓದಿರಿ**

ದಿನ ೧: ಅರಣ್ಯಕಾಂಡ ೧೩:೧-೩, ೧೮-೨೫

ದಿನ ೨: ಅರಣ್ಯಕಾಂಡ ೧೩:೨೭-೩೩

ದಿನ ೩: ಅರಣ್ಯಕಾಂಡ ೧೪:೧-೯

ದಿನ ೪: ಅರಣ್ಯಕಾಂಡ ೧೪:೧೦-೧೭

ದಿನ ೫: ಅರಣ್ಯಕಾಂಡ ೧೪:೧೮-೨೪

# ೧೦. ಹೌದು ನಮ್ಮಿಂದ ಸಾಧ್ಯ



**ವೀರ: ಕಾಲೇಬ**

ಅರಣ್ಯಕಾಂಡ ೧೩:೧-೩, ೧೩:೧೭-೧೪:೯, ೧೪:೭-೨೪, ೧೪:೩೦-೪೫

## ಕಂಠಪಾಠ ವಚನ ೧೦

ಪ್ರೇಷಿತರ ಕಾರ್ಯಕಲಾಪಗಳು ೧:೮ "ಆದರೆ ಪವಿತ್ರಾತ್ಮ ಅವರು ನಿಮ್ಮ ಮೇಲೆ ಬಂದಾಗ ನೀವು ಶಕ್ತಿಯುತರಾಗುವಿರಿ. ಆಗ ನೀವು ಜೆರುಸಲೇಮಿನಲ್ಲೂ ಜುದೇಯದಲ್ಲೂ ಸಮಾರಿಯದಲ್ಲೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗುವಿರಿ,"

## ಕಥೆಯ ಅವಶ್ಯಕತೆ ೧೦



ಸಂಡೇ ಸ್ಕೂಲ್ ನಲ್ಲಿ, ನಾವು ನಮ್ಮ ನಂಬಿಕೆಯನ್ನು ಹಂಚಿಕೊಳ್ಳಬೇಕು ಎಂಬದಾಗಿ ದೇವರು ಬಯಸುತ್ತಾನೆ ಯಾಕಂದರೆ ಅದರಿಂದ ಇತರರು ಸಹ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡಲು ಸಾಧ್ಯವಾಗುತ್ತದೆ ಎಂಬದಾಗಿ ಮರಿಯಳು ಕಲಿತುಕೊಂಡಳು. ಸೋಮವಾರದಂದು, ಮರಿಯಳು ಹೊರಗೆ ಹೋಗಿ ಹಿಂದಿರುಗಿ ಬರುವಾಗ ಒಬ್ಬ ಹುಡುಗಿ ಬೆಂಚ್ ಮೇಲೆ ಒಂಟಿಯಾಗಿ ಕೂತಿರುವದನ್ನು ನೋಡಿದಳು. ತರಗತಿ ಬಂದ ನಂತರ, ಆಕೆ ತನ್ನ ಸ್ನೇಹಿತ ಮತ್ತಾಯನಿಗೆ, "ಬೆಂಚ್ ಮೇಲೆ ಕುಳಿತಿರುವ ಆ ಹುಡುಗಿಯನ್ನು ನೀನು ನೋಡಿದೆಯಾ? ಆಕೆ ಒಂಟಿಯಾಗಿದ್ದಾಳೆ" ಎಂದು ಹೇಳಿದಳು. ಅದಕ್ಕೆ ಮತ್ತಾಯನು, "ನೀನು ಹೋಗಿ ಅವಳನ್ನು ಮಾತನಾಡಿಸು. ನೀನು ಅವಳಿಗೆ ಯೇಸುವಿನ ಬಗ್ಗೆ ತಿಳಿಸು ಮತ್ತು ಸಭೆಗೆ ಬರುವಂತೆ ಹೇಳು, ಜನರೊಂದಿಗೆ ಬರೆತರೆ ಸರಿಯಾಗಬಹುದು" ಎಂದು ಹೇಳಿದನು. ಆಗ ಮರಿಯಳು, "ನನಗಂತೂ ಹೇಗೆ ಮಾತನಡಿಸುವುದೆಂದೇ ಗೊತ್ತಿಲ್ಲ. ನಾನೇನಾದರೂ ಅವಳನ್ನು ಮಾತನಾಡಿಸಿದರೆ, ನನ್ನ ಉಳಿದ ಸ್ನೇಹಿತರು ನನ್ನ ಬಗ್ಗೆ ಏನಂದುಕೊಳ್ಳುತ್ತಾರೋ ಯೋಚಿಸಬೇಕು" ಎಂದು ಹೇಳಿದಳು.

## ಮುಖ್ಯ ಪಾಠ ೧೦

ನೂರಾರು ವರ್ಷಗಳ ನಂತರ ದೇವರು ಅಬ್ರಹಾಮನ್, ಇಸಾಕ ಮತ್ತು ಯಾಕೋಬನಿಗೆ ಮಾಡಿದ ವಾಗ್ದಾನವನ್ನು ನೆರವೇರಿಸಲು ಇಸ್ರಾಯೇಲ್ ಜನರನ್ನು ಮುನ್ನಡೆಸುತ್ತಿದ್ದನು. ವಾಗ್ದಾನ ದೇಶವನ್ನು ಸಂಚರಿಸಿ ನೋಡಲು ಮೋಶೆ ೧೨ ಮಂದಿ ಗೂಢಾಚಾರರನ್ನು ಕಳುಹಿಸಿದನು. ಆ ದೇಶದಲ್ಲಿ ಹಾಲೂ ಜೇನೂ ಹರಿಯುತ್ತದೆ, ದ್ರಾಕ್ಷೇ ಗೊಂಚನ್ನು ಇಬ್ಬರು ಹೊತ್ತುಕೊಂಡು ಬರುವಷ್ಟು ಭಾರವಾಗಿರುತ್ತದೆ ಎಂದು ಅವರು ಹೇಳಿದರು! ಆದರೆ ಹೋದವರಲ್ಲಿ ೧೦ ಜನ ಅಲ್ಲಿನ ಜನರು ಉನ್ನತ ಪುರುಷರು ಅವರನ್ನು ಜಯಿಸಲು ನಮ್ಮಿಂದ ಆಗುವದಿಲ್ಲ ಎಂದು ಹೇಳಿದರು. ಆದರೆ ಅವರಲ್ಲಿ ಒಬ್ಬನಾದ ಕಾಲೇಬನು, ಅವರನ್ನು ತಡೆದು, "ಖಂಡಿತವಾಗಿಯೂ ನಾವು ಅವರನ್ನು ಜಯಿಸಬಹುದು" ಎಂದು ಹೇಳಿದನು. ತನ್ನ ಸರ್ವಶಕ್ತನಾದ ದೇವರು ತಮಗೆ ಸಹಾಯ ಮಾಡುವನು ಎಂಬದಾಗಿ ಅವನು ನಂಬಿದನು. ದೇವರು ಅಂಥ ನಂಬಿಕೆಯನ್ನು ಪ್ರೀತಿಸುತ್ತಾನೆ.

ಆದರೆ ಜನರೆಲ್ಲರೂ ಹತ್ತು ಮಂದಿ ಗೂಢಾಚಾರರ ಮಾತುಗಳನ್ನೇ ನಂಬಿದರು, ಭಯದಿಂದ ಗುಣಗುಟ್ಟಿದರು ಮತ್ತು ದೇಶವನ್ನು ಸ್ವಾಧೀನ ಮಾಡಿಕೊಳ್ಳಲು ನಿರಾಕರಿಸಿದರು. ದೇವರು ಅವರ ಮೇಲೆ ಕೋಪಿಸಿಕೊಂಡನು ಮತ್ತು ಆ ಹತ್ತು ಜನರಿಗೆ ಮರಣ ಶಿಕ್ಷೆಯನ್ನು ವಿಧಿಸಿದನು! ಇದಲ್ಲದೆ ಇಡೀ ಜನಾಂಗದವರು ಅರಣ್ಯದಲ್ಲಿ ಅಲೆದಾಡಬೇಕೆಂಬ ಶಿಕ್ಷೆ ವಿಧಿಸಿದನು. ಅವರು ಅವಿಧೇಯರಾದಾಗ ಸುಲಭವಾಗಿ ಸೋತು ಹೋದರು ಯಾಕಂದರೆ ದೇವರು ಅವರ ಜೊತೆಯಲ್ಲಿರಲಿಲ್ಲ. ೪೦ ವರ್ಷಗಳ ಕಾಲ ಅಲೆದಾಡಿದ ನಂತರ, ಆ ಸಂತತಿಯವರಲ್ಲಿ ಕಾಬೇಲನು ಮತ್ತು ಅವನ

ಮಾತಿಗೆ ಸಮ್ಮತಿಸಿದ ಮತ್ತೊಬ್ಬ ಗೂಢಾಚಾರನಾದ ಯೆಹೋಶುವನು ಮಾತ್ರವೇ ಉಳಿದರು. ಅವರ ನಂಬಿಕೆಯ ಫಲವಾಗಿ, ಅವರು ನೋಡಿಕೊಂಡು ಬಂದ ದೇಶವನ್ನೇ ದೇವರು ಅವರಿಗೆ ಕೊಟ್ಟನು.

ಇಂದು ನಾವು ಮರಿಯಳ ಬಗ್ಗೆ ನೋಡಿಕೊಂಡೆವು ಅವಳು ಹೆದರಿಕೊಂಡಿದ್ದಳು ಆದರೆ ಮತ್ತಾಯನು ಧೈರ್ಯವಾಗಿ ತನ್ನ ನಂಬಿಕೆಯನ್ನು ವ್ಯಕ್ತಪಡಿಸಿದನು ಹಾಗೂ ಮರಿಯಳಿಗೆ ಸಹಾಯ ಮಾಡಿದನು. ನಾವು ನಮ್ಮ ನಂಬಿಕೆಯನ್ನು ಧೈರ್ಯದಿಂದ ವ್ಯಕ್ತಪಡಿಸುವಾಗ ಮತ್ತು ಅಸಾಧ್ಯವಾದ ಕಾರ್ಯಗಳಲ್ಲಿಯೂ ಆತನಿಗೆ ವಿಧೇಯರಾಗುವಾಗ ದೇವರು ಅದನ್ನು ಮೆಚ್ಚುತ್ತಾನೆ. ನಾವು ಹೌದು ಎಂದು ಹೇಳುವದಾದರೆ ನಮ್ಮಿಂದ ಊಹೆ ಮಾಡಿಕೊಳ್ಳಲೂ ಸಾಧ್ಯವಾಗದ ಯೋಜನೆಯನ್ನು ದೇವರು ನಮ್ಮ ಜೀವಿತದಲ್ಲಿ ಮಾಡುತ್ತಾನೆ.

ಸಾಸಿವೆ ಕಾಳಿನಷ್ಟು ನಂಬಿಕೆ ನಿಮಗಿದ್ದರೆ ನೀವು ಬೆಟ್ಟವನ್ನೂ ಅಲುಗಾಡಿಸಬಹುದು ಎಂದು ಯೇಸು ಕ್ರಿಸ್ತನು ಹೇಳಿದ್ದಾನೆ (ಮತ್ತಾಯ ೧೭:೨೦). ನಮ್ಮ ಸಭೆಯ ನಾಯಕರ ಮಾತುಗಳನ್ನು ಕೇಳಿ ಅದರಂತೆ ನಡೆಯುವಾಗ ನಾವು ನಮ್ಮ ನಂಬಿಕೆಯನ್ನು ಬೀಜದ ಹಾಗೆ ಬೆಳೆಸಬಹುದು. ಯೆಹೋಶುವನು ಮೋಶೆಯ ವೈಯಕ್ತಿಕ ನಿಕಟವರ್ತಿಯಾಗಿದ್ದನು (ವಿಮೋಚನಕಾಂಡ ೨೪:೧೩). ಮೋಶೆ ದೇವರೊಂದಿಗೆ ಮಾತನಾಡಲು ಗುಡಾರದೊಳಗೆ ಹೋಗುತ್ತಿದ್ದನು, ಆದರೆ ಅವನು ಅಲ್ಲಿಂದ ಹೊರಟ ನಂತರವೂ, ಯೆಹೋಶುವನು ದೇವರೊಂದಿಗೆ ಗುಡಾರದೊಳಗೆ ಇರುತ್ತಿದ್ದನು (ವಿಮೋಚನಕಾಂಡ ೩೩:೧೧). ನಾವು ಸಹ ಸತ್ಯವೇದ ಓದುವದು, ಪ್ರಾರ್ಥನೆ ಮಾಡುವದು ಮತ್ತು ಇತರರೊಂದಿಗಿರುವಾಗ ಮಾತ್ರ ಹಾಡುವದರಿಂದಲ್ಲ ಬದಲಾಗಿ ಒಂಟಿಯಾಗಿರುವಾಗಲೂ ಹಾಡುವದರಿಂದ ದೇವರೊಂದಿಗೆ ಸಮಯವನ್ನು ಕಳೆಯಬಹುದು. ದೇವರು ಸತ್ಯವೇದದಲ್ಲಿ ಮತ್ತು ನಮ್ಮ ಜೀವಿತದಲ್ಲಿ ಮಾಡಿರುವ ಕಾರ್ಯಗಳನ್ನು ನಾವು ನೆನಪಿಗೆ ತಂದುಕೊಳ್ಳಬಹುದು. ದೇವರು ಐಗುಪ್ತ ದೇಶದಲ್ಲಿ ಮಾಡಿದ ಅದ್ಭುತ ಕಾರ್ಯಗಳನ್ನು ಕಾಲೇಬನು ಮತ್ತು ಯೆಹೋಶುವನ್ನು ನೋಡಿದ್ದರು. ನಮ್ಮನ್ನು ಪ್ರೋತ್ಸಾಹಪಡಿಸುವ ಸ್ನೇಹಿತರನ್ನು ನಾವು ಆಯ್ಕೆಮಾಡಿಕೊಳ್ಳಬೇಕು, ಎಲ್ಲರನ್ನೂ ಪ್ರೋತ್ಸಾಹಪಡಿಸುವ ಸಲುವಾಗಿ ಯೆಹೋಶುವನು ಕಾಲೇಬನ ಜೊತೆ ಸೇರಿಕೊಂಡನು. ಆದರೆ ಇದಕ್ಕೆ ವಿರುದ್ಧವಾಗಿ ಇಸ್ರಾಯೇಲ್ ಜನರೆಲ್ಲರೂ ಅಪನಂಬಿಕೆಯುಳ್ಳವರಾದ ಗೂಢಾಚಾರರ ಜೊತೆ ಸೇರಿಕೊಂಡರು. ಒಂದುವೇಳೆ ನಿಮ್ಮ ಸ್ನೇಹಿತನ ಕೆಟ್ಟ ನಡತೆ ನಿಮ್ಮ ಮೇಲೆ ಪ್ರಭಾವ ಬೀರುತ್ತಿರುವದಾದರೆ, ನೀವು ಅವನಿಂದ ದೂರವಿರಬೇಕು ಮತ್ತು ನಂಬಿಕೆಯುಳ್ಳವರಾದ ಸ್ನೇಹಿತರೊಂದಿಗೆ ಹೆಚ್ಚು ಸಮಯ ಕಳೆಯಬೇಕು. ನಿಮ್ಮ ನಂಬಿಕೆಯನ್ನು ಬಲಪಡಿಸಿಕೊಳಂಡರೆ, ದೇವರು ನಿಮ್ಮನ್ನು ಕರೆಯುವಾಗ, ನೀವು ಆತನಿಗೆ ವಿಧೇಯರಾಗುವದು ಮಾತ್ರವಲ್ಲ ಆತನು ನಿಮಗಾಗಿ ಸಿದ್ಧಮಾಡಿರುವ ಸುಂದರವಾದ ಜೀವಿತವನ್ನೂ ಜೀವಿಸಬಹುದು ಹಾಗೆಯೇ ಇತರರನ್ನೂ ಆ ವಿಷಯದಲ್ಲಿ ಪ್ರೋತ್ಸಾಹಪಡಿಸಬೇಕು.

ನಾನು ದೇವರಿಗೆ ಹೌದು ಎಂದು ಹೇಳುವ ಆಯ್ಕೆ ಮಾಡಿಕೊಳ್ಳುತ್ತೇನೆ. ದೇವರೇ ನೀನು ನನ್ನ ಜೀವಿತದಲ್ಲಿ ದೊಡ್ಡದಾಗಲಿ, ಚಿಕ್ಕದಾಗಲಿ ಅಥವಾ ಅಪಾಯಕಾರಿಯಾದದ್ದಾಗಲಿ ಎಲ್ಲಾ ರೀತಿಯ ಕಾರ್ಯಗಳನ್ನು ಮಾಡಲು ನನ್ನ ಜೀವಿತವನ್ನು ನಿನಗೆ ಒಪ್ಪಿಸಿಕೊಡುತ್ತೇನೆ. ನನ್ನ ಜೀವಿತವು ನಿನ್ನದಾಗಿದೆ. ಭಯಪಡದೆ ಅಥವಾ ಗುಣಗುಟ್ಟದೆ ನಿನಗಾಗಿ ಜೀವಿಸಲು ನನಗೆ ಸಹಾಯ ಮಾಡು. ನೀನು ನನಗಾಗಿ ಮಾಡಿರುವ ದೊಡ್ಡ ಯೋಜನೆಗಳನ್ನು ನೋಡಲು ನನ್ನ ಕಣ್ಣುಗಳನ್ನು ತೆರೆಯಮಾಡು. ಧನ್ಯವಾದಗಳು.

## ವಿಶ್ಲೇಷಣೆ ೧೦



ಊಟದ ಸಮಯದಲ್ಲಿ ಮತ್ತಾಯನು ಹೇಳಿದ್ದೇನೆಂದರೆ, “ನಾನು ನಿನ್ನ ಜೊತೆಯಲ್ಲಿ ಬಂದರೆ ತೊಂದರೆಯಿಲ್ಲವೇ? ಬೆಂಚ್ ಮೇಲೆ ಕುಳಿತಿರುವ ಆ ಹುಡುಗಿಯೊಂದಿಗೆ ಹೋಗಿ ಮಾತನಾಡೋಣ. ಏನು ಮಾತನಾಡಬೇಕೆಂದು ನನಗೂ ಗೊತ್ತಿಲ್ಲ, ಆದರೆ ನಮ್ಮಿಬ್ಬರಿಗೂ ದೇವರು ಸಹಾಯ ಮಾಡುತ್ತಾನೆ.” ಮತ್ತಾಯನು ತನ್ನ ಸ್ನೇಹಿತನಾಗಿದ್ದಕ್ಕೆ ಮರಿಯಳು ಸಂತೋಷಪಟ್ಟಳು ಮತ್ತು ತನ್ನ ನಂಬಿಕೆ ಆಕೆಯೊಂದಿಗೆ ಹಂಚಿಕೊಳ್ಳಲು ಅವಕಾಶ ದೊರೆತದ್ದಕ್ಕಾಗಿ ಖುಷಿಪಟ್ಟಳು. ಆ ಹುಡುಗಿಗೆ ಮನೆಯಲ್ಲಿ ಕೆಲವು ಸಮಸ್ಯೆಗಳಿದ್ದವು ಆದರೆ ಹೊಸ ಸ್ನೇಹಿತರ ಪರಿಚಯ ಮತ್ತು ಯೇಸು ಕ್ರಿಸ್ತನು ತನ್ನನ್ನು ಪ್ರೀತಿಸುತ್ತಾನೆಂದು ತಿಳಿದುಕೊಂಡದ್ದು ಆಕೆಗೆ ಸಮಾಧಾನ ಅನುಗ್ರಹಿಸಿತು.

## ಚಟುವಟಿಕೆ ೧೦

ದೇವರಿಗೆ ಪತ್ರ ಬರೆಯಿರಿ



ಈ ಚಟುವಟಿಕೆಯಲ್ಲಿ, ತರಗತಿಯಲ್ಲಿರುವ ಪ್ರತಿಯೊಂದು ಮಗು ದೇವರು ತಮ್ಮ ಜೀವಿತದಲ್ಲಿ ಏನು ಮಾಡಬೇಕೆಂದು ಬಯಸುತ್ತಾರೋ ಅದನ್ನು ಮಾಡುವಂತೆ ಪತ್ರವನ್ನು ಬರೆಯಬೇಕು. ದೊಡ್ಡದಾಗಿ ಕನಸು ಕಾಣುವಂತೆ ಮಕ್ಕಳನ್ನು ಪ್ರೋತ್ಸಾಹಪಡಿಸಿರಿ-ದೇವರು ದೊಡ್ಡವನಾಗಿದ್ದಾನೆ. ಮಕ್ಕಳು ವಾರವೆಲ್ಲಾ ಈ ಮನವಿಗಳಿಗಾಗಿ ಪ್ರಾರ್ಥನೆ ಮಾಡಲಿ ಮತ್ತು ಇನ್ನೂ ಕೆಲವು ಕಾರ್ಯಗಳನ್ನು ಬೇಕಾದರೆ ಅವರು ಸೇರಿಸಲಿ.

## ಟೈಮ್ ಲೈನ್ ೧೦


ಕಾಲೇಬನ ಜೀವಿತದ ಗೆರೆ ಎಳೆಯಿರಿ.


ಪ್ರಶ್ನೆ: ಕಾಲೇಬನು ಜನಿಸಿದಾಗ ಮೋಶೆ ಎಷ್ಟು ವರ್ಷದವನಾಗಿದ್ದನು? ಉತ್ತರ: ನಿಖರವಾಗಿ ಎಷ್ಟು ವರ್ಷ ಎಂದು ನಮಗೆ ಗೊತ್ತಿಲ್ಲ ಆದರೆ ಬಹುಶಃ ೪೦ ವರ್ಷವಾಗಿರಬಹುದು

ಪ್ರಶ್ನೆ: ಕಾಲೇಬನು ಎಷ್ಟು ವರ್ಷ ಬದುಕಿದನು? ಉತ್ತರ: ನಿಖರವಾಗಿ ಎಷ್ಟು ವರ್ಷ ಎಂದು ನಮಗೆ ಗೊತ್ತಿಲ್ಲ ಆದರೆ ಬಹುಶಃ ೧೧೦ ವರ್ಷ ಬದುಕಿರಬಹುದು.

## ಒಗಟಿನ ಉತ್ತರಗಳು ೧೦

| | | | | | | | | | |
|---|---|---|---|---|---|---|---|---|---|
| ಕು | ದೇ | ಶ್ | ಣ್ | ನು | ಹೋ | ಶು | ಜೇ | ನು | ಯೆ |
| ಲ | ಗೂ | ಢಾ | ಚಾ | ರ | ರು | ಳು | ರ್ತ | ಕ | ನು |
| ಗ | ಮ | ಣ | ಜೇ | ರ್ತ | ಕ್ಷೆ | ಕ | ಕಾ | ಔ | ದು |
| ಳು | ಟ | ಬಾ | ಗು | ವ | ದು | ಕು | ಲೇ | ಳ್ಳೇ | ಗ |
| ಶಿ | ಕ್ಷೆ | ನು | ದೇ | ಟ್ಟು | ಬಾ | ಲ | ಬ | ಯ | ಕೂ |
| ಐ | ಗು | ಪ್ | ವ | ಶಿ | ವಿ | ಯೆ | ನು | ಗ್ | ಲ್ಲು |
| ನು | ಜ | ನ | ರು | ಕ | ರ್ತ | ಕೆ | ಇ | ೧ | ವ |
| ಶ | ಗ್ದಾ | ಪ್ರ | ತಿ | ಕಾ | ರ | ಭ | ಒ | ಳ್ಳೇ | ದು |
| ವಾ | ಠ | ಹಾ | ಗ | ಯೆ | ಹೋ | ಶು | ವ | ದೇ | ಳು |
| ನು | ಯ | ಲು | ನು | ಢಾ | ಚಾ | ರ್ | ರು | ಶ | ಕ್ಷೆ |





## ಪ್ರಶ್ನೆಗಳು ಮತ್ತು ಉತ್ತರಗಳು ೧೦

೧. ದೇವರು ನಿಮಗೆ ಮಾಡಲು ಹೇಳಿರುವ ಕಷ್ಟಕರವಾದ ಕೆಲಸಗಳು ಯಾವುವು? (ನಿಮ್ಮ ವಿದ್ಯಾರ್ಥಿಗಳಿಗೆ ಅವರ ಜೀವಿತಗಳಲ್ಲಿ ಎದುರಾಗಿರುವ ವಿವಿಧ ಪರಿಸ್ಥಿತಿಗಳ ಬಗ್ಗೆ ಮಾತನಾಡಿರಿ).

೨. ದೇವರು ನನ್ನನ್ನು ಇದಕ್ಕಾಗಿ ಕರೆದಿದ್ದಾನೆ ಎಂದು ನಾವು ಮಾಡುವಾಗ ನಮಗೇನಾದರೂ ತೊಂದರೆಯಾದರೆ ಅಥವಾ ನಾವು ಕಷ್ಟಕರವಾದ ಪರಿಸ್ಥಿತಿಗಳಿಗೆ ಸಿಕ್ಕಿಕೊಂಡರೆ ಏನಾಗುತ್ತದೆ? (ಅನೇಕರು ದೇವರಿಗೆ ವಿಧೇಯರಾಗುವ ಸಲುವಾಗಿ ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ, ಆದ್ದರಿಂದ ಎಷ್ಟು ಕಷ್ಟಕರವಾಗಿದೆ ಎಂಬದು ಸಮಸ್ಯೆಯಿಲ್ಲ, ದೇವರಿಗೆ ಅವಿಧೇಯರಾಗುವದಕ್ಕಿಂತ ವಿಧೇಯರಾಗುವದೇ ಯಾವಾಗಲೂ ಉತ್ತಮವಾಗಿದೆ).

೩. ನನಗೆ ದೇವರ ಸ್ವರ ಕೇಳಿಸಿದೆ ಎಂದು ನಾವು ದೃಢತೆಯಿಂದಿರುವದು ಹೇಗೆ? (ನೀವು ಕೊಡಲಾಗಿರುವ ಈ ೩ ನಿಯಮಗಳ ಪ್ರಕಾರ ಯಾವ ತೀರ್ಮಾನವನ್ನಾದರೂ ಪರೀಕ್ಷಿಸಬಹುದು: ೧. ಸತ್ಯವೇದ: ಸತ್ಯವೇದದ ಪ್ರಕಾರ ಇದು ಸರಿ ಎಂದು ಎಲ್ಲಾದರೂ ಬರೆದಿದೆಯೇ? ೨. ನನ್ನ ಅಧಿಕಾರಿಗಳು: ನನ್ನ ತಂದೆತಾಯಿಗಳು ಅಥವಾ ನನ್ನ ಸಭಾಪಾಲಕ ಏನು ಹೇಳುತ್ತಾರೆ; ಮತ್ತು ೩. ನನ್ನ ಆತ್ಮ: ನಾವು ಒಳ್ಳೇ ಕುರುಬನ ಕುರಿಗಳಾಗಿದ್ದೇವೆ ಮತ್ತು ಆತನ ಸ್ವರವನ್ನು ತಿಳಿಯುತ್ತೇವೆ ಎಂದು ಸತ್ಯವೇದವು ಹೇಳುತ್ತದೆ. ನಾವು ಯಾವುದನ್ನಾದರೂ ಮಾಡಬೇಕು ಅಥವಾ ಮಾಡಬಾರದು ಎಂದು ಯೋಚಿಸುವಾಗ ನಮ್ಮ ಆತ್ಮದ ಸ್ವರ ಕೇಳುವದು ಹೇಗೆ ಎಂಬದನ್ನು ಕಲಿತುಕೊಳ್ಳಬೇಕು. ಈ ನಿಯಮಗಳನ್ನು ಹಿಂಬಾಲಿಸುವಾಗ, ಒಂದುವೇಳೆ ಇದು ದೇವರ ಸ್ವರವಾಗಿದೆ ಎಂಬದನ್ನು ನಾವು ತೀರ್ಮಾನಿಸಿದರೆ, ಅಸಾಧ್ಯವೆನಿಸಿದರೂ ನಾವು ಅದಕ್ಕೆ ವಿಧೇಯರಾಗಬೇಕು!)

## ಆಟ ೧೦

**ಯಾರು ಮರೆಯಾದರು?**



* ಮಕ್ಕಳು ವೃತ್ತಾಕಾರದಲ್ಲಿ ಕೂರಬೇಕು ಮತ್ತು ತಮ್ಮ ಕಣ್ಣುಗಳನ್ನು ಮುಚ್ಚಿಕೊಳ್ಳಬೇಕು.
* ಬಚ್ಚಿಟ್ಟುಕೊಳ್ಳಲು ಹೋಗುವ ಮಗುವನ್ನು ಶಿಕ್ಷಕಿಯು ಮುಟ್ಟಬೇಕು.
* ಮರೆಯಾದವರು ಯಾರು ಎಂದು ಮಕ್ಕಳನ್ನು ಕೇಳಿರಿ.
* ಆಯ್ಕೆ: ವೃತ್ತದ ನಡುವೆ ನೀವು ಅನೇಕ ವಸ್ತುಗಳನ್ನು ಇಡಬಹುದು. ಮಕ್ಕಳು ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡಿರುವಾಗ, ಶಿಕ್ಷಕಿಯು ಅವರ ಮಧ್ಯದಿಂದ ಒಂದನ್ನು ತೆಗೆಯಬೇಕು ಮತ್ತು ಯಾವ ವಸ್ತುವನ್ನು ತೆಗೆಯಲಾಗಿದೆ ಎಂದು ಮಕ್ಕಳು ಊಹಿಸಬೇಕು.

## ಹಾಜರಾತಿ ೧೦




ತರಗತಿಗೆ ಹಾಜರಾದದ್ದಕ್ಕೆ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡುವ ಸಲುವಾಗಿ ಮತ್ತೊಂದು ಕಾರ್ಡ್ ಪಡೆಯಬೇಕಾದರೆ ಮುಂದಿನ ವಾರ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:

ಚಾರಿತ್ರಿಕ ಪುಸ್ತಕಗಳು

## ಹೋಮ್ ವರ್ಕ್ ೧೦

### ಅಸೈನ್ಮೆಂಟ್

ಈ ವಾರದ ನಿಮ್ಮ ಅಸೈನ್ಮೆಂಟ್ ದೇವರು ನಿಮಗಾಗಿ ಮಾಡಿರುವ ಐದು ಕಾರ್ಯಗಳನ್ನು ಬರೆಯಿರಿ. ನಂತರ ನಿಮ್ಮ ಜೀವಿತದಲ್ಲಿ ಅವುಗಳನ್ನು ಒಳ್ಳೆಯವುಗಳೆಂದು ಯಾರು ಯೋಚಿಸುತ್ತಾರೆ ಎಂದು ಯೋಚಿಸಿರಿ. ಅವರೊಂದಿಗೆ ನೀವು ಹೆಚ್ಚು ಸಮಯವನ್ನು ಕಳೆಯಬೇಕು. ಆ ಸ್ನೇಹಿತರೊಂದಿಗೆ ಹೆಚ್ಚು ಸಮಯ ಕಳೆಯುವ ಸಲುವಾಗಿ ನಿಮ್ಮ ಅನುದಿನದ ಕಾರ್ಯಗಳಲ್ಲಿ ಯಾವ ಬದಲಾವಣೆ ಮಾಡಿಕೊಳ್ಳಬೇಕು ಎಂದು ಯೋಚಿಸಿರಿ. ಈಗಾಗಲೇ ನಿಮಗೆ ಸ್ವಲ್ಪ ನಂಬಿಕೆಯಿದೆ. ಇದು ಗಿಡ ಬೆಳೆಯಲು ನೀರು ಹಾಕುವ ಹಾಗೆ ನಿಮ್ಮ ನಂಬಿಕೆ ಬೆಳೆಯಲು ಸಹಾಯ ಮಾಡುತ್ತದೆ.

**ಓದಿರಿ**

ದಿನ ೧: ಅರಣ್ಯಕಾಂಡ ೨೨:೧-೮
ದಿನ ೨: ಅರಣ್ಯಕಾಂಡ ೨೨:೯-೧೭
ದಿನ ೩: ಅರಣ್ಯಕಾಂಡ ೨೨:೧೮-೨೫
ದಿನ ೪: ಅರಣ್ಯಕಾಂಡ ೨೨:೨೬-೨೩
ದಿನ ೫: ಅರಣ್ಯಕಾಂಡ ೨೨:೩೪-೪೧

# ೧೧. ಅದರ ಬಗ್ಗೆ ಯೋಚಿಸಲೂ ಬೇಡಿರಿ



**ಸತ್ಯವೇದ ಕಥೆ: ಬಿಳಾಮ**

ಅರಣ್ಯಕಾಂಡ ೨೨:೧-೬, ೨೨:೯-೩೮, ೨೩:೧೩-೨೧, ೨೪:೧೦-೧೩

## ಕಂಠಪಾಠ ವಚನ ೧೧

ಎಫೆಸಿಯರಿಗೆ ೬: ೧ "ಮಕ್ಕಳೇ, ಪ್ರಭುವಿನಲ್ಲಿ ನಿಮ್ಮ ತಂದೆತಾಯಿಗಳ ಮಾತಿಗೆ ಕಿವಿಗೊಡಿ. ಇದು ಧರ್ಮಸಮ್ಮತವಾದುದು."

## ಕಥೆಯ ಅವಶ್ಯಕತೆ ೧೧



ಮತ್ತಾಯನು ತನ್ನ ಊರಿನಲ್ಲಿ ನಡೆಯುತ್ತಿದ್ದ ಸಮ್ಮೇಳನದಲ್ಲಿ ಭಾಗವಹಿಸಲು ಬಯಸಿದನು. ಅಲ್ಲಿಗೆ ಹೋಗಲು ಅನುಮತಿ ಪಡೆಯುವ ಸಲುವಾಗಿ ಅವನು ಬೇಗ ಮನೆಗೆ ಹೋದನು, ತನ್ನ ಹೋಮ್ ವರ್ಕ್ ಮಾಡಿ ಮುಗಿಸಿದನು ಮತ್ತು ಮನೆ ಶುಚಿಮಾಡಲು ಅಮ್ಮನಿಗೆ ಸಹಾಯ ಮಾಡಿದನು. ಎಲ್ಲವನ್ನೂ ಮುಗಿಸಿದ ನಂತರ ಅವನು ತನ್ನ ಅಮ್ಮನಿಗೆ, "ಅಮ್ಮಾ ಇಂದು ಮಧ್ಯಾಹ್ನ ಊರಲ್ಲಿ ನಡೆಯುತ್ತಿರುವ ಸಮ್ಮೇಳನಕ್ಕೆ ಹೋಗಲೇ?" ಎಂದು ಕೇಳಿದನು. ಅದಕ್ಕೆ ಅವನ ಅಮ್ಮ, "ಇಂದು ಮಧ್ಯಾಹ್ನ ಆಗೋಲ್ಲ. ನಾವು ಹೊರಗೆ ಹೋಗುತ್ತೇವೆ, ಆದ್ದರಿಂದ ನೀನು ಮನೆಯಲ್ಲಿಯೇ ಇರಬೇಕು" ಎಂದು ಹೇಳಿದರು. ಮತ್ತಾಯನಿಗೆ ಬಹಳ ದುಃಖ ಮತ್ತು ಗೊಂದಲ ಉಂಟಾಯಿತು. ಅವನು ಅಮ್ಮ ಅವನಿಗೆ ಹೋಗಲು ಯಾಕೆ ಅನುಮತಿ ಕೊಡಲಿಲ್ಲ? ಅದೇ ಸಮಯದಲ್ಲಿ ಅವನ ಸ್ನೇಹಿತ ಯೋಹಾನ ಕರೆಮಾಡಿ, "ನೀನು ಮಧ್ಯಾಹ್ನ ಬರುತ್ತೀಯಾ? ನಾವು ನಿನಗಾಗಿ ಕಾಯಬೇಕೇ?" ಎಂದು ವಿಚಾರಿಸಿದನು. ಅದಕ್ಕೆ ಮತ್ತಾಯನು, "ಇಲ್ಲಾ, ನಾನು ಬರುವದಿಲ್ಲ" ಎಂದು ಹೇಳಿದನು. ಆಗ ಯೋಹಾನನು ಅವನಿಗೆ, "ನಡೆಯುತ್ತಿರುವ ಸಮ್ಮೇಳನ ದೇವರ ಕುರಿತಾಗಿದೆ. ದೇವರಿಗಿಂತ ಮುಖ್ಯವಾದದ್ದು ಯಾವುದೂ ಇಲ್ಲ, ನೀನು ಬರುವದು ಒಳ್ಳೇದು" ಎಂದು ಹೇಳಿದನು!

## ಮುಖ್ಯ ಪಾಠ ೧೧

ಕಳೆದ ವಾರ, ಇಸ್ರಾಯೇಲ್ಯರು ಅರಣ್ಯದಲ್ಲಿ ೪೦ ವರ್ಷಗಳ ಅಲೆದಾಟವನ್ನು ಪ್ರಾರಂಭಿಸಿದ್ದರು. ಇಸ್ರಾಯೇಲ್ಯರು ಪ್ರಯಾಣಿಸುವಾಗ, ಮೋವಾಬ್ ದೇಶದ ಮೇರೆಯನ್ನು ಹಾದು ಹೋಗ ಬೇಕಿತ್ತು. ಮೋವಾಬ್ಯರು ಅವರಿಗೆ ಹೆದರಿಕೊಂಡಿದ್ದರು, ಆದ್ದರಿಂದ ಮೋವಾಬ್ಯರ ಅರಸನಾದ ಬಾಲಾಕನು ಅವರನ್ನು ಶಪಿಸಲು ಬಿಳಾಮನೆಂಬ ವ್ಯಕ್ತಿಯನ್ನು ಕಳುಹಿಸಿದನು. ಏನು ಮಾಡಬೇಕೆಂದು ಬಿಳಾಮನು ದೇವರನ್ನು ಕೇಳಿದಾಗ, ದೇವರು ಅವನಿಗೆ ಹೋಗಬಾರದೆಂದು ಹೇಳಿದನು. ಆದರೆ ಅರಸನಾದ ಬಾಲಾಕನು ಬೇಸರಗೊಂಡನು ಮತ್ತು ಬಿಳಾಮನು ಬರಲೇಬೇಕೆಂದು ಬಯಸಿ ಉತ್ತಮವಾದ ಅಧಿಕಾರಿಗಳನ್ನು ಕಳುಹಿಸಿ, ಅವರ ಜೊತೆಯಲ್ಲಿ ಹೋದರೆ ದೊಡ್ಡ ಬಹುಮಾನ ಕೊಡುವದಾಗಿ ಹೇಳಿಸಿದನು. ಬಿಳಾಮನು ಅವರಿಗೆ ದೇವರು ಏನು ಹೇಳುತ್ತಾನೋ ಕಾದು ನೋಡೋಣ ಎಂದು ಹೇಳಿದನು. ಕೆಲವೊಮ್ಮೆ ನಾವು ದೇವರ ಮಾತುಗಳನ್ನು ಒಪ್ಪುವದಿಲ್ಲ, ಕೆಲವೊಮ್ಮೆ ನಾವು ಆತನನ್ನು ಪುನಃ ವಿಚಾರಿಸಲು ಯೋಚಿಸುತ್ತೇವೆ ಅಥವಾ ಆತನು ತನ್ನ ಮನಸ್ಸು ಬದಲಾಯಿಸಿಕೊಳ್ಳಲು ಎಂದು ಬಯಸುತ್ತೇವೆ. ದೇವರು ಅವನಿಗೆ ಹೋಗುವಂತೆ ಅನುಮತಿಸಿದನು ಆದರೆ ಅವನ ವಿಷಯದಲ್ಲಿ ಬೇಸರಗೊಂಡನು. ಕೆಲವೊಮ್ಮೆ ನಾವು ದೇವರನ್ನು ಒತ್ತಾಯಪಡಿಸುವಾಗ, ನಾವು ಬಯಸುವ ಕಾರ್ಯಗಳು ಮತ್ತು ಅದರಿಂದಾಗುವ ಪರಿಣಾಮಗಳು ಎರಡನ್ನೂ ಕೊಡುತ್ತಾನೆ. ಬಿಳಾಮನು ಮೊವಾಬಿಗೆ ಹೊರಡುವಾಗ, ದೇವದೂತನ ದಾರಿಯ ಮಧ್ಯದಲ್ಲಿ ಅವನಿಗೆ ಎದುರಾಗಿ ನಿಂತನು. ಬಿಳಾಮನು ಅದನ್ನು ನೋಡಲಿಲ್ಲ ಆದರೆ ಅವನ ಕತ್ತೆ ಅದನ್ನು ನೋಡಿತು.

ಮೊದಲು ಅವನ ಕತ್ತೆ ರಸ್ತೆಯನ್ನು ಬಿಟ್ಟು ಹೊಲದ ಕಡೆಗೆ ನುಗ್ಗಿತು, ನಂತರ ರಸ್ತೆಯಿಂದ ಮುಂದಕ್ಕೆ ಹೋಗಿ ಬಿಳಾಮನ ಕಾಲನ್ನು ಗೋಡೆಗೆ ಗುದ್ದಿತು, ಕಡೆಯಲ್ಲಿ ರಸ್ತೆಯಲ್ಲಿಯೇ ನಿಂತಿತು. ಬಿಳಾಮನು ತನ್ನ ಕತ್ತೆಯ ಮೇಲೆ ಕೋಪಿಸಿಕೊಂಡಾಗ, ದೇವರು ಕತ್ತೆಗೆ ಮಾತನಾಡುವ ಶಕ್ತಿಯನ್ನು ಕೊಟ್ಟನು! ಕತ್ತೆ ಅವನಿಗೆ ಹೇಳಿದ್ದೇನೆಂದರೆ, “ನೀನು ನನ್ನ ಮೇಲೆ ಕೋಪಿಸಿಕೊಳ್ಳುವದು ಯಾಕೆ? ನಾನು ನಿನ್ನ ಭರವಸೆಯ ಕತ್ತೆಯಲ್ಲವೇ? ನಾನು ಎಂದಾದರು ಹೀಗೆ ಮಾಡಿದ್ದೇನೆಯೇ?” ನಂತರ ತನ್ನನ್ನು ಕೊಲ್ಲಲು ಬಂದಿದ್ದ ದೇವದೂತನನ್ನು ಬಿಳಾಮನು ನೋಡುವಂತೆ ದೇವರು ಮಾಡಿದನು ಮತ್ತು ಬಿಳಾಮನಿಗೆ ತಾನು ಮಾಡುತ್ತಿರುವ ಕಾರ್ಯ ತಪ್ಪು ಎಂದು ಗೊತ್ತಾಯಿತು. ಅರಸನಾದ ಬಾಲಾಕನಿಂದ ಎಷ್ಟೇ ದೊಡ್ಡ ಬಹುಮಾನ ದೊರೆತರೂ ತಾನು ಇಸ್ರಾಯೇಲ್ಯರನ್ನು ಶಪಿಸುವದು ದೇವರಿಗೆ ಇಷ್ಟವಿಲ್ಲ ಎಂಬದನ್ನು ಬಿಳಾಮನು ಅರ್ಥಮಾಡಿಕೊಂಡನು. ಅವನು ಅವರಿದ್ದ ಸ್ಥಳಕ್ಕೆ ಬಂದಾಗ ದೇವರಿಗೆ ಅವಿಧೇಯನಾಗುವ ಚಿಂತೆ ಮಾಡದೆ ನಾಲ್ಕು ಸಲ ಇಸ್ರಾಯೇಲ್ಯರನ್ನು ಆಶೀರ್ವದಿಸಿದನು.

ಇಂದು ತನ್ನ ತಂದೆತಾಯಿಗಳಿಗೆ ಅವಿಧೇಯನಾಗಿ ಸಮ್ಮೇಳನಕ್ಕೆ ಹೋಗುವ ಶೋಧನೆಗೆ ಒಳಗಾದ ಮತ್ತಾಯನ ಬಗ್ಗೆ ನಾವು ಕೇಳಿದೆವು. ಹೋಗಲು ಅವನು ಸುಲಭವಾಗಿ ಅನೇಕ ಕಾರಣಗಳನ್ನು ಕೊಡಬಹುದು, ಸಮ್ಮೇಳನವು ದೇವರ ಕುರಿತಾಗಿದೆ ಎಂದು ಯೋಹಾನನು ಹೇಳಿದಾಗ ಅವನು ಈ ರೀತಿ ಯೋಚಿಸಿರಬಹುದು. ಆದರೆ ನಾವು ನಮ್ಮ ತಂದೆತಾಯಿಗಳ ಮಾತು ಕೇಳಬೇಕೆಂದು ದೇವರು ಆಜ್ಞಾಪಿಸಿದ್ದಾನೆ ಮತ್ತು ಸಮ್ಮೇಳನದ ನಿಮಿತ್ತ ದೇವರ ಆಜ್ಞೆ ಎಂದಿಗೂ ಬದಲಾಗುವದಿಲ್ಲ. ನಾವು ಶೋಧನೆಗೆ ಒಳಗಾಗದಂತೆ ಎಚ್ಚರವಾಗಿದ್ದು ಪ್ರಾರ್ಥಿಸಬೇಕೆಂದು ಯೇಸು ಕ್ರಿಸ್ತನು ಹೇಳಿದ್ದಾನೆ (ಮತ್ತಾಯ ೨೬:೪೧). ನಿಮ್ಮ ಆಲೋಚನೆಗಳ ವಿಷಯದಲ್ಲಿ ಎಚ್ಚರಿಕೆಯುಳ್ಳವರಾಗಿರ್ರಿ ಯಾಕಂದರೆ ನೀವು ಎಷ್ಟು ಕೆಟ್ಟದು ಮಾಡಬೇಕೆಂಬದರ ಬಗ್ಗೆ ಹೆಚ್ಚಾಗಿ ಆಲೋಚನೆ ಮಾಡಿದಷ್ಟೂ, ಒಳ್ಳೆಯದನ್ನು ಮಾಡುವದು ಅಷ್ಟೇ ಕಷ್ಟವಾಗುತ್ತದೆ. ದೇವರ ವಾಕ್ಯ ಹೇಳುವದನ್ನು ನೀವು ನಿಮ್ಮ ನೆನಪಿಗೆ ತಂದುಕೊಳ್ಳುವ ಕೂಡಲೇ, ಅವುಗಳಿಗೆ ವಿಧೇಯರಗಿರಿ ಆಗ ತಪ್ಪು ಮಾಡುವದರ ಬಗ್ಗೆ ಯಾವ ಆಲೋಚನೆಯೂ ನಿಮ್ಮಲ್ಲಿ ಬರುವದಿಲ್ಲ.

ನಾನು ದೇವರಿಗೆ ವಿಧೇಯನಾಗುವಲ್ಲಿ ಚುರುಕಾಗಿರುವ ಆಯ್ಕೆ ಮಾಡಿಕೊಳ್ಳುತ್ತೇನೆ ತಪ್ಪು ಮಾಡುವ ಬಗ್ಗೆ ಆಲೋಚನೆಯನ್ನೂ ಮಾಡುವದಿಲ್ಲ.

## ವಿಶ್ಲೇಷಣೆ ೧೧




ಆ ಕ್ಷಣದಲ್ಲಿ ನಾವು ನಮ್ಮ ತಂದೆತಾಯಿಗಳ ಮಾತು ಕೇಳಬೇಕು ಮತ್ತು ನಾವು ವಿಧೇಯರಾಗಿರುವದು ದೇವರಿಗೆ ಇಷ್ಟ ಎಂಬದನ್ನು ಮತ್ತಾಯನು ನೆನಪು ಮಾಡಿಕೊಂಡನು. ನಂತರ, “ನಾನು ಬರುವದಿಲ್ಲ” ಎಂದು ಹೇಳಿದನು. ದೇವರ ವಾಕ್ಯ ಹೇಳುವಂತೆ ನಾವು ನಡೆಯಬೇಕು ಎಂದು ಅವನು ಯೋಹಾನನಿಗೆ ಹೇಳಿದನು.

## ಚಟುವಟಿಕೆ ೧೧

### ರಬ್ಬರ್ ಬ್ಯಾಂಡ್ ರಿಂಗ್ಸ್

ತರಗತಿಯ ಸಮಯದಲ್ಲಿ, ದೇವರನ್ನು ಒತ್ತಾಯಪಡಿಸಬಾರದು ಎಂಬದನ್ನು ವಾರವೆಲ್ಲಾ ನೆನಪಿನಲ್ಲಿಟ್ಟುಕೊಳ್ಳಲು ರಬ್ಬರ್ ಬ್ಯಾಂಡ್ ನಿಂದ ಉಂಗುರ ಅಥವಾ ಬ್ರೇಸ್ ಲೆಟ್ ಮಾಡಿರಿ. ಅವುಗಳನ್ನು ಮಾಡಲು ಕೊಡಲಾಗಿರುವ ಸೂಚನೆಗಳನ್ನು ಅನುಸರಿಸಿರಿ ಅಥವಾ ಪ್ಲಾಸ್ಟಿಕ್ ರಿಂಗ್ ಗಳನ್ನು ಉಪಯೋಗಿಸಿರಿ.




೧. ರಬ್ಬರ್ ಬ್ಯಾಂಡ್ ತೆಗೆದುಕೊಳ್ಳಿರಿ ಮತ್ತು ಅದನ್ನು ಮಧ್ಯಕ್ಕೆ ಮಡಚಿರಿ.
೨. ಮೊದಲನೆಯ ರಬ್ಬರ್ ಬ್ಯಾಂಡ್ ನಲ್ಲಿ ಮಾಡಿರುವ ರಂಧ್ರದೊಳಗೆ ಇನ್ನೊಂದು ರಬ್ಬರ್ ಬ್ಯಾಂಡ್ ಸೇರಿಸಿರಿ.

೩. ಚೈನ್ ಮಾಡುವ ಸಲುವಾಗಿ ರಬ್ಬರ್ ಬ್ಯಾಂಡ್ ಮಧ್ಯಕ್ಕೆ ಮಡಚಿರಿ. ನಿಮಗೆ ಬೇಕಾದ ಅಳತೆಗೆ ತಕ್ಕಂತೆ ಚೈನ್ ಮಾಡಲು ಈ ಸೂಚನೆಗಳನ್ನು ಅನುಸರಿಸಿರಿ.

೪. ಮಡಚಿರುವ ಮತ್ತೊಂದು ರಬ್ಬರ್ ಬ್ಯಾಂಡ್ ಅನ್ನು ಮೂಲೆಗಳನ್ನು ಒಟ್ಟಾಗಿ ಕಟ್ಟಲು ಉಪಯೋಗಿಸಿರಿ

## ಟೈಮ್ ಲೈನ್ ೧೧

ಬಿಳಾಮನ ಕತ್ತೆಯ ಕಥೆಯ ಘಟನೆ ಯಾವ ಸಂಭವಿಸಿತು ಎಂಬದನ್ನು ಗುರುತಿಸಿರಿ.

ಪ್ರಶ್ನೆ: ದೇವ ಜನರು ಅರಣ್ಯದಲ್ಲಿ ಅಲೆದಾಡಲು ಪ್ರಾರಂಭಿಸಿದಾಗ ಮೋಶೆ ಎಷ್ಟು ವರ್ಷದವನಾಗಿದ್ದನು? ಉತ್ತರ: ೮೦ ವರ್ಷ

ಪ್ರಶ್ನೆ: ಬಿಳಾಮನು ದೇವಜನರಿಗೆ ವಿರುದ್ಧವಾಗಿ ಕಾರ್ಯಮಾಡಲು ಯಾವಾಗ ಪ್ರಾರಂಭಿಸಿದನು? ಉತ್ತರ: ಅವರು ಅರಣ್ಯದಲ್ಲಿ ಅಲೆದಾಡುತ್ತಿದ್ದ ಸಮಯದಲ್ಲಿ.


## ಒಗಟಿನ ಉತ್ತರಗಳು ೧೧

### ಸತ್ಯವೇದದ ಪುಸ್ತಕಗಳು

ಆದಿಕಾಂಡದಿಂದ ಎಸ್ತೇರಳ ತನಕ ಸತ್ಯವೇದದ ಪುಸ್ತಕಗಳನ್ನು ಕ್ರಮವಾಗಿ ಬರೆಯಿರಿ.

೧. ಆದಿಕಾಂಡ
೨. ವಿಮೋಚನಕಾಂಡ
೩. ಯಾಜಕಕಾಂಡ
೪. ಅರಣ್ಯಕಾಂಡ
೫. ಧರ್ಮೋಪದೇಶಕಾಂಡ
೬. ಯೆಹೋಶುವ
೭. ನ್ಯಾಯಸ್ಥಾಪಕರು
೮. ರೂತಳು
೯. ೧ ಸಮುವೇಲ
೧೦. ೨ ಸಮುವೇಲ
೧೧. ೧ ಅರಸುಗಳು
೧೨. ೨ ಅರಸುಗಳು
೧೩. ೧ ಪೂರ್ವಕಾಲವೃತ್ತಾಂತ
೧೪. ೨ ಪೂರ್ವಕಾಲವೃತ್ತಾಂತ
೧೫. ಎಜ್ರನು
೧೬. ನೆಹೆಮಿಯನು
೧೭. ಎಸ್ತೇರಳು

| | | | | | | | | | |
|---|---|---|---|---|---|---|---|---|---|
| ಖ | ಇ | ಸೂ | ಜ್ | ನೆ | ಲ | ಕ | ರ್ತ | ನು | ದ್ಗ |
| ಗ | ದ್ಗ | ಗ | ಡ | ಇ | ವ | ತ್ತೆ | ಡ | ಜ್ | ತ್ತೆ |
| ಭಿ | ಳಾ | ಮ | ನು | ಲ್ಲ | ಕಾ | ಕೊಂ | ಪ | ನ | ಮ |
| ಧ | ಸೂ | ಚ | ನೆ | ಳು | ಕಿ | ದ್ಗ | ಯೋ | ರು | ಕ್ಕ |
| ಪಾ | ಶ | ಕ | ನು | ಹಾ | ಪ | ದೆ | ಜ | ಸ | ಳು |
| ಮ್ | ಪ | ಳ | ರ | ಕ್ಷಿ | ಸಿ | ದ | ನು | ಹೋ | ಕಾ |
| ಕ್ಕ | ಊ | ಡಾ | ಕ | ಚ್ | ಕೊಂ | ಮ | ರಾ | ದ | ಶ |
| ಳ | ಗು | ಡಾ | ರ್ | ಹಾ | ಳಾ | ದೇ | ಹೇ | ರ | ಕ್ತ |
| ಐ | ಗು | ಪ | ಬಾ | ಬಿ | ದೇ | ವ | ದೂ | ತ | ನು |
| ಳು | ಮಾ | ರಾ | ಟ | ಜ | ನ | ರು | ಟ | ಳು | ಕೊಂ |



## ಪ್ರಶ್ನೆಗಳು ಮತ್ತು ಉತ್ತರಗಳು ೧೧

೧. ನಾನು ಯಾರ ಮಾತನ್ನು ಕೇಳಬೇಕು? (ಮೊದಲು ದೇವರು ನಂತರ ಭೂಲೋಕದಲ್ಲಿರುವ ಅಧಿಕಾರಿಗಳು. ನಾವು ಆಲೋಚಿಸುವ ಮಾತುಗಳಿಗನುಸಾರವಾಗಿ ನಮ್ಮ ಅಧಿಕಾರಿಗಳು ಒಪ್ಪಿಕೊಳ್ಳುತ್ತಿದ್ದಾರೆಯೇ ಇಲ್ಲವೆ ಎಂಬದನ್ನು ಯಾವಾಗಲೂ ನಮ್ಮ ಮನಸ್ಸಿನಲ್ಲಿ ಇಟ್ಟುಕೊಂಡಿರಬೇಕು).

೨. ನನ್ನ ತಂದೆತಾಯಿಗಳು ಏನಾದರೂ ತಪ್ಪು ಮಾಡುವಂತೆ ಹೇಳಿದರೆ ಏನು ಮಾಡಬೇಕು? (ನಿಮ್ಮ ತಂದೆತಾಯಿಗಳು ತಪ್ಪು ತಿಳುವಳಿಕೆಯುಳ್ಳವರಾಗಿರುವ ವಿವಿಧ ಸನ್ನಿವೇಶಗಳ ಬಗ್ಗೆ ಮಾತನಾಡಿರಿ. ನಿಮ್ಮ ವಿದ್ಯಾರ್ಥಿಗಳು ತಂದೆತಾಯಿಗಳ ದೃಷ್ಟಿಕೋನ ನೋಡಲು ಸಹಾಯ ಮಾಡಿರಿ ಯಾಕಂದರೆ ಬಹುತೇಕ ಸಂದರ್ಭಗಳಲ್ಲಿ ತಂದೆತಾಯಿಗಳೇ ಸರಿಯಾಗಿರುತ್ತಾರೆ).

೩. ಬಾಸ ಆಗುವ ಅವಕಾಶ ನನಗೆ ಯಾವಾಗ ಬರುತ್ತದೆ? (ನನ್ನ ಅನುಭವದಲ್ಲಿ ಹೇಳುವದಾದರೆ, ಅವರು ವಯಸ್ಕರಾದಾಗಲೂ, ಅವರಿಗೆ ಪರಸ್ಪರ ಸೇವೆ ಮಾಡುವ ಅವಕಾಶವನ್ನು ದೇವರು ಕೊಡಲು ಮತ್ತಷ್ಟು ವರ್ಷ ಕಾಯಬೇಕು. ಹುಟ್ಟಿನಿಂದಲೇ ನಾಯಕರಾಗುವ ವರವನ್ನು ಪಡೆದುಕೊಂಡಿರುವ ವಿದ್ಯಾರ್ಥಿಗಳಿಗೆ, ದೇವರು ಸೇವೆಯ ಅವಕಾಶ ಕೊಡುವ ತನಕ ಕಾಯುವಂತೆ ಪ್ರೋತ್ಸಾಹಪಡಿಸಿರಿ. ಉದಾಹರಣೆಗೆ, ಯೇಸು ಕ್ರಿಸ್ತನು ಹನ್ನೆರೆಡು ವರ್ಷದವನಾಗಿರುವಾಗ ಧಾರ್ಮಿಕ ನಾಯಕರಿಗೆ ಹಲವಾರು ಗಂಭೀರ ಪ್ರಶ್ನೆಗಳನ್ನು ಕೇಳಿದನು, ಆದರೆ ಆತನಿಗೆ ಮೂವತ್ತು ವರ್ಷ ಪ್ರಾಯವಾಗುವ ತನಕ ತನ್ನ ಸೇವೆಯನ್ನು ಪ್ರಾರಂಭಿಸಲು ಅನುಮತಿಸಲಿಲ್ಲ)..

## ಆಟ ೧೧

**ಕತ್ತೆಯನ್ನು ತಿವಿಯಬೇಡಿರಿ**



* ಒಂದು ಕಾರ್ಡ್ ತೆಗೆದುಕೊಳ್ಳಿರಿ ಮತ್ತು ಅದರ ಮಧ್ಯದಲ್ಲಿ ಕತ್ತೆಯ ಚಿತ್ರವನ್ನು ಬಿಡಿಸಿ, ಕತ್ತೆಗೆ ಖಾಲಿ ಜಾಗವನ್ನು ಬಿಡಿರಿ. ಹಾಗೆಯೇ ಕತ್ತೆಯ ಸುತ್ತಲು ಬಿಟ್ಟಿರುವ ಖಾಲಿ ಜಾಗದಲ್ಲಿ ಅದೇ ಅಳತೆಗೆ ಖಡ್ಗವನ್ನು ಬಿಡಿಸಿರಿ.
* ಮಕ್ಕಳನ್ನು ಎರಡು ಅಥವಾ ಮೂರು ತಂಡಗಳಾಗಿ ವಿಂಗಡಿಸಿರಿ ಮತ್ತು ಪ್ರತಿಯೊಂದು ತಂಡದಿಂದ ಮಕ್ಕಳನ್ನು ಆಯ್ಕೆ ಮಾಡಿರಿ.
* ಆರಿಸಲ್ಪಟ್ಟ ಮಗುವಿಗೆ ಖಡ್ಗವನ್ನು ಕೊಡಿರಿ ಮತ್ತು ಅವನ ತಂಡದವರಿಗೆ ಕಣ್ಣು ಮುಚ್ಚಿಕೊಳ್ಳುವಂತೆ ಹೇಳಿರಿ.
* ಮಗು ತೋರಿಸುವ ಸೂಚನೆಗಳಿಗೆ ತಂಡವನ್ನು ಮುನ್ನಡೆಸಿರಿ (ಮೇಲೆ, ಕೆಳಗೆ, ಎಡಕ್ಕೆ, ಬಲಕ್ಕೆ). ನಂತರ ಖಡ್ಗವನ್ನು ಕಾರ್ಡ್ ಬೋರ್ಡ್ ಮೇಲಿರುವ ಖಾಲಿ ಸ್ಥಳಕ್ಕೆ ನಡೆಸಿರಿ, ಆ ಸಮಯದಲ್ಲಿ ಕತ್ತೆಯನ್ನು ಮುಟ್ಟಬಾರದು.
* ಪ್ರತಿಯೊಂದು ತಂಡ ಸ್ಪರ್ಧಿಸಬೇಕು ಮತ್ತು ಗೆಲ್ಲುವ ತಂಡವನ್ನು ಆರಿಸಲಾಗುತ್ತದೆ.

## ಹಾಜರಾತಿ ೧೧

ತರಗತಿಗೆ ಹಾಜರಾದದ್ದಕ್ಕೆ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡುವ ಸಲುವಾಗಿ ಮತ್ತೊಂದು ಕಾರ್ಡ್ ಪಡೆಯಬೇಕಾದರೆ ಮುಂದಿನ ವಾರ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:




ಕರ್ತನ ಖಡ್ಗ

## ಹೋಮ್ ವರ್ಕ್ ೧೧

### ಅಸೈನ್ಮೆಂಟ್

ಈ ವಾರದ ನಿಮ್ಮ ಅಸೈನ್ಮೆಂಟ್ ಏನೆಂದರೆ ನೀವು ಯಾವುದನ್ನಾದರು ವಿರೋಧಿಸುತ್ತಿರುವದಾದರೆ, ನಿಮಗೆ ಮಾಡಲು ಇಷ್ಟವಿಲ್ಲದಿದ್ದರೂ ಮಾಡಲೇಬೇಕಾದ ಅನಿವಾರ್ಯತೆ ಅಥವಾ ನಿಮಗೆ ಮಾಡಲು ಇಷ್ಟವಿದ್ದರೂ ಮಾಡಬಾರದ ಅನಿವಾರ್ಯತೆ ಇರುವ ಕಾರ್ಯಗಳ ಬಗ್ಗೆ ಬರೆಯಿರಿ. ಅದು ಸರಳವಾಗಿರುವ ನಿಮ್ಮ ಹೋಮ್ ವರ್ಕ್ ಅಸೈನ್ಮೆಂಟ್ ಆಗಿರಬಹುದು ಅಥವಾ ನಿಮ್ಮ ತಂದೆತಾಯಿಗಳು ನಿಮಗೆ ಮಾಡಲು ಹೇಳಿರುವ ಕಾರ್ಯಗಳಾಗಿರಬಹುದು. ಇದರಿಂದ ನಿಮ್ಮ ಹೃದಯಕ್ಕೆ, ನಿಮ್ಮ ಸ್ನೇಹಿತರಿಗೆ ಮತ್ತು ಕುಟುಂಬದವರಿಗೆ ಅಥವಾ ನಿಮ್ಮ ಭವಿಷ್ಯದ ನಿರೀಕ್ಷೆಗಳು ಹಾಗೂ ದೇವರ ಸೇವೆಮಾಡುವ ಕನಸುಗಳಿಗೆ ಆಗುವ ತೊಂದರೆಗಳ ಬಗ್ಗೆ ಯೋಚಿಸಿರಿ. ನಂತರ ನಿಮ್ಮನ್ನು ಕ್ಷಮಿಸುವಂತೆ ಹಾಗೂ ನಿಮ್ಮ ಹೃದಯವನ್ನು ಶುದ್ಧೀಕರಿಸುವಂತೆ ಯೇಸುವನ್ನು ಬೇಡಿಕೊಳ್ಳಿರಿ ಮತ್ತು ಯೇಸು ಕ್ರಿಸ್ತನಿಗೆ ನೀನೇ ನನ್ನ ಅರಸನು ಎಂದು ಹೇಳಿರಿ. ಎದುರುಬೀಳುವಿಕೆಯು ಹೋಗಿದೆಯೋ ಅಥವಾ ಇಲ್ಲವೋ ಎಂಬದರ ದಾಖಲೆಯನ್ನು ಇಟ್ಟುಕೊಳ್ಳಿರಿ ಮತ್ತು ಸಾಧ್ಯವಾದಷ್ಟು ಆ ಪ್ರಾರ್ಥನೆಯನ್ನು ಪುನಃ ಮಾಡಿರಿ.

### ಓದಿರಿ

ದಿನ ೧: ಯೆಹೋಶುವ ೫:೧೩-೬:೫

ದಿನ ೨: ಯೆಹೋಶುವ ೬:೬-೧೧

ದಿನ ೩: ಯೆಹೋಶುವ ೬:೧೨-೧೯

ದಿನ ೪: ಯೆಹೋಶುವ ೬:೨೦-೨೩

ದಿನ ೫: ಯೆಹೋಶುವ ೬:೨೪-೨೭

# ೧೨. ದೇವರ ಕಡೆ ಇರುವದು



**ವೀರ: ಯೆಹೋಶುವ**

ಯೆಹೋಶುವ ೧:೧-೧೧, ೨:೧-೨೧, ೩:೧೪-೪:೭, ೪:೧೫-೧೮, ೫:೧೦-೬:೧೧, ೬:೧೫, ೬:೨೦-೨೫, ಇಬ್ರಿಯ ೧೧:೩೦-೩೧

## ಕಂಠಪಾಠ ವಚನ ೧೨

ಎಫೆಸಿಯರಿಗೆ ೬:೧೨ "ಮಕ್ಕಳೇ, ಪ್ರಭುವಿನಲ್ಲಿ ನಿಮ್ಮ ತಂದೆತಾಯಿಗಳ ಮಾತಿಗೆ ಕಿವಿಗೊಡಿ. ಇದು ಧರ್ಮಸಮ್ಮತವಾದುದು."

## ಕಥೆಯ ಅವಶ್ಯಕತೆ ೧೨



ಯೋಹಾನನು ತನ್ನ ಶಾಲಾ ವರ್ಷವನ್ನು ಮುಗಿಸುವವನಾಗಿದ್ದನು. ಅವನಿಗೆ ಅಂತಿಮ ಪರೀಕ್ಷೆಗಳು ಎದುರಾಗುವ ಸಮಯವಾಗಿತ್ತು ಮತ್ತು ತಾನು ಉತ್ತಮ ಅಂಕಗಳನ್ನು ಪಡೆಯಬೇಕಾದರೆ ಚೆನ್ನಾಗಿ ಓದಬೇಕು ಎಂಬದು ಅವನಿಗೆ ಗೊತ್ತಿತ್ತು. ನಾಳೆ ಅವನಿಗೆ ಮೊದಲನೆಯ ಪರೀಕ್ಷೆಯಾಗಿದೆ, ಆದರೆ ಇಂದು, ಅವನು ತನ್ನ ಸ್ನೇಹಿತರೊಂದಿಗೆ ಆಟವಾಡುತ್ತಿದ್ದಾನೆ ಮತ್ತು ಕಾರ್ಟೂನ್ ನೋಡುತ್ತಿದ್ದಾನೆ. ದಿನದ ಕೊನೆಯಲ್ಲಿ, ಮಲಗಲು ಹೋಗುವಾಗ, "ದೇವರು ನಾಳೆ ನನಗೆ ಪರೀಕ್ಷೆ ಇದೆ ದಯವಿಟ್ಟು ಸಹಾಯ ಮಾಡು. ನಾನು ಒಳ್ಳೆಯ ಅಂಕಪಡೆಯಲೇ ಬೇಕು. ನನ್ನ ಪ್ರಾರ್ಥನೆ ಕೇಳಿದ್ದಕ್ಕಾಗಿ ಸ್ತೋತ್ರ. ನೀನು ಸಹಾಯ ಮಾಡುವೆ ಎಂದು ನನಗೆ ಗೊತ್ತು" ಎಂಬದಾಗಿ ಪ್ರಾರ್ಥನೆ ಮಾಡಿದನು.

## ಮುಖ್ಯ ಪಾಠ ೧೨

ಯೆಹೋಶುವನು ತನ್ನ ನಂಬಿಕೆಯನ್ನು ಹೇಗೆ ಬಲಪಡಿಸಿಕೊಂಡನು? ದೇವರು ಜನಾಂಗವನ್ನು ಮುನ್ನಡೆಸಲು ಯೆಹೋಶುವನನ್ನು ಆರಿಸಿಕೊಂಡನು ಮತ್ತು ನಾನು ಯಾವಾಗಲೂ ನಿನ್ನ ಜೊತೆಯಲ್ಲಿರುತ್ತೇನೆ ಎಂಬದಾಗಿ ಅವನಿಗೆ ವಾಗ್ದಾನ ಮಾಡಿದನು. ೪೦ ವರ್ಷಗಳ ಕಾಲ ಅಲೆದಾಡಿದ ನಂತರ, ವಾಗ್ದಾನ ದೇಶವನ್ನು ಸ್ವಾಧೀನಪಡಿಸಿಕೊಳ್ಳುವ ಸಮಯ ಎದುರಾಯಿತು. ಯೆಹೋಶುವನು ಇಬ್ಬರು ಗೂಢಾಚಾರರನ್ನು ಯೆರಿಕೋ ಪಟ್ಟಣಕ್ಕೆ ಕಳುಹಿಸಿದನು. ರಾಹಬಳೆಂಬ ಜಾರಿಣಿಯು ಗೂಢಾಚಾರರನ್ನು ಅಡಗಿಸಿಟ್ಟಳು ಮತ್ತು ಪಟ್ಟಣದ ಗೋಡೆಯ ಮೇಲಿದ್ದ ತನ್ನ ಮನೆಯ ಕಿಟಕಿಯಿಂದ ಅವರು ತಪ್ಪಿಸಿಕೊಂಡು ಹೋಗಲು ಸಹಾಯ ಮಾಡಿದಳು. ಆಕೆ ತನ್ನ ಮನೆಯ ಕಿಟಕಿಗೆ ಕೆಂಪು ದಾರವನ್ನು ಕಟ್ಟಿದರೆ ಆಕೆಯನ್ನು ಮತ್ತು ಆಕೆಯ ಕುಟುಂಬದವರನ್ನು ಕಾಪಾಡುವದಾಗಿ ಒಪ್ಪಿಕೊಂಡರು.

ಯೊರ್ದನ್ ಹೊಳೆಯನ್ನು ದಾಟುವಾಗ, ಯಾಜಕರು ಒಡಂಬಡಿಕೆಯ ಮಂಜೂಷವನ್ನು ಹೊತ್ತುಕೊಂಡರು, ಅದು ದೇವರು ಎಲ್ಲಿದ್ದಾನೆ ಎಂಬದಕ್ಕೆ ಗುರುತಾಗಿತ್ತು, ನಂತರ ಅವರು ಹೊಳೆಯ ಮಧ್ಯದಲ್ಲಿಯೇ ನಡೆದುಕೊಂಡು ಹೋದರು. ಉಕ್ಕಿ ಹರಿಯುತ್ತಿದ್ದ ನೀರು ಅದ್ಭುತಕರವಾದ ರೀತಿಯಲ್ಲಿ ಅವರಿಗೆ ದಾರಿ ಮಾಡಿಕೊಟ್ಟಿತು. ನಿಮ್ಮ ಕೈಯಲ್ಲಿ ಗೋಡೆಯಂತೆ ನಿಂತಿರುವ ನೀರನ್ನು ಹಿಡಿದುಕೊಳ್ಳುವದು ಹೇಗಿರುವದೆಂದು ಊಹಿಸಿಕೊಳ್ಳಿರಿ. ಇಸ್ರಾಯೇಲ್ಯರು ಒಣನೆಲದ ಮೇಲೆ ನಡೆದುಕೊಂಡು ಹೋದರು ಮತ್ತು ದೇವರು ಮಾಡಿದ ಕಾರ್ಯವನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಲು ಹೊಳೆಯ ದಡದಿಂದ ೧೨ ಕಲ್ಲುಗಳನ್ನು ತೆಗೆದುಕೊಂಡರು. ದೇವರು ನಮ್ಮ ಜೀವಿತದಲ್ಲಿ ಏನು ಮಾಡುತ್ತಿದ್ದಾನೆ ಎಂಬದನ್ನೂ ನಾವು ಬರೆಯಬಹುದಾಗಿದೆ. ನಂತರ ಇಸ್ರಾಯೇಲ್ಯರು ಪಸ್ಕ ಹಬ್ಬವನ್ನು ಆಚರಿಸಿದರು: ಐಗುಪ್ತ ದೇಶದಲ್ಲಿ ರಕ್ಷಣೆ ಹೊಂದುವ ಸಲುವಾಗಿ ಅವರು ತಮ್ಮ ನಿಲುವುಪಟ್ಟಿಗಳಿಗೆ ರಕ್ತ ಹಚ್ಚಿದ್ದು ನೆನಪಿದೆಯೇ?

ಒಂದುದಿನ ಯೆಹೋಶುವನು ಕೈಯಲ್ಲಿ ಕತ್ತಿ ಹಿಡಿದಿರುವ ವ್ಯಕ್ತಿಯನ್ನು ನೋಡಿದನು. ನೀನು ಇಸ್ರಾಯೇಲ್ಯರ ಕಡೆ ಇದ್ದೀಯೋ ಅಥವಾ ವೈರಿಯ ಕಡೆ ಇದ್ದೀಯೋ ಎಂದು ಆತನನ್ನು ಕೇಳಿದನು. ನಾನು ಯಾರ ಕಡೆಯೂ ಇಲ್ಲ, ಬದಲಾಗಿ ಯೆಹೋವನ ಸೈನ್ಯದ ಸೇನಾಧಿಪತಿಯಾಗಿದ್ದೇನೆ ಎಂದು ಹೇಳಿದನು. ಆ ವ್ಯಕ್ತಿಯು ಯೇಸು ಕ್ರಿಸ್ತನಾಗಿದ್ದನು!

ನಾವು ನಮ್ಮನ್ನು ಕ್ರೈಸ್ತರೆಂದು ಹೇಳಿಕೊಳ್ಳುವದರಿಂದ ಅಥವಾ ಸಭೆಗೆ ಹೋಗುವದರಿಂದ ದೇವರು ನಮ್ಮ ಕಡೆಯಿದ್ದಾನೆ ಎಂಬದಾಗಿ ಅಂದುಕೊಳ್ಳುತ್ತೇವೆ. ಕೆಲವೊಮ್ಮೆ ನಾವು ಪರೀಕ್ಷೆ ಓದದಿರುವದು ಅಥವಾ ಪಾಪದ ಕಾರ್ಯಗಳನ್ನು ಮಾಡುತ್ತೇನೆ ಹಾಗೂ ನಮಗೆ ಬೇಕಾದವುಗಳಿಗಾಗಿ ಪ್ರಾರ್ಥಿಸುತ್ತೇವೆ ಮತ್ತು ಆತನು ಯಾಕೆ ಉತ್ತರ ಕೊಡುತ್ತಿಲ್ಲ ಎಂದು ಯೋಚಿಸುತ್ತೇವೆ. ನಾವು ದೇವರ ಕಡೆ ಸೇರಿಕೊಳ್ಳಬೇಕೇ ಹೊರತು ಆತನಿಗೆ ವಿರುದ್ಧವಾಗಿ ನಿಲ್ಲಬಾರದು. ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವ ಚಿತ್ರಣವಾಗಿರುವ, ಪಸ್ಕ ಹಬ್ಬ ಆಚರಣೆಯಲ್ಲಿ ಇಸ್ರಾಯೇಲ್ಯರು ದೇವರ ಕಡೆ ಸೇರಿಕೊಂಡರು. ದೇವಜನರಿಗೆ ಸಹಾಯ ಮಾಡಿ, ತನ್ನ ಮನೆಯ ಬಾಗಿಲಿಗೆ ಕೆಂಪು ದಾರವನ್ನು ಕಟ್ಟುವ ಮೂಲಕ ರಾಹಬಳು ದೇವರ ಕರೆ ಸೇರಿಕೊಂಡಳು, ಇದು ಸಹ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವದಕ್ಕೆ ಮತ್ತೊಂದು ಚಿತ್ರಣವಾಗಿದೆ. ಯೇಸು ಕ್ರಿಸ್ತನ ಸಮಯದಲ್ಲಿದ್ದ, ಇಸ್ರಾಯೇಲಿನ ಧಾರ್ಮಿಕ ನಾಯಕರಾದ ಫರಿಸಾಯರು, ತಾವು ದೇವರ ಕಡೆಯಿದ್ದೇವೆ ಎಂಬದಾಗಿ ಅಂದುಕೊಂಡಿದ್ದರು ಆದರೆ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡದೆ, ಇತರರನ್ನೂ ದೇವರ ಮಾರ್ಗದಿಂದ ತಪ್ಪಿಸುವ ಮೂಲಕ ಆತನ ಕೋಪಕ್ಕೆ ಗುರಿಯಾದರು. ವ್ಯಭಿಚಾರಿಗಳು ಮತ್ತು ಸುಂಕದವರು ನಂಬುವದರಿಂದ ಮತ್ತು ಪಶ್ಚಾತ್ತಾಪಪಡುವದರಿಂದ ಅವರಿಗಿಂತ ಮುಂದಾಗಿ ದೇವರ ರಾಜ್ಯದೊಳಗೆ ಸೇರುವರು ಎಂದು ಯೇಸು ಕ್ರಿಸ್ತನು ಹೇಳಿದನು (ಮತ್ತಾಯ ೨೧:೩೧-೩೨). ನಾವು ನಮ್ಮ ಭರವಸೆಯನ್ನು ನಮ್ಮ ತಂದೆತಾಯಿಗಳ ನಂಬಿಕೆಯೊಂದಿಗೆ ಸೇರಿಸಲು ಅಥವಾ ಸಭೆಗೆ ಹೋಗುವದರಲ್ಲಿ ಸೇರಿಸಲು ಆಗುವದಿಲ್ಲ ಮತ್ತು ಇತರರು ಎಲ್ಲಿಂದ ಬಂದಿದ್ದಾರೆ ಎಂಬ ಆಧಾರದ ಮೇರೆಗೆ ಅವರ ವಿಷಯದಲ್ಲಿ ತೀರ್ಪು ಮಾಡಬಾರದು. ನೀವು ಎಲ್ಲಿಂದಲೇ ಬಂದಿರಬಹುದು, ರಕ್ಷಣೆ ಹೊಂದಬೇಕಾದರೆ ಯೇಸು ಕ್ರಿಸ್ತನನ್ನು ನಂಬಲೇ ಬೇಕು.

ಇಸ್ರಾಯೇಲ್ಯರು ಪಟ್ಟಣದ ಸುತ್ತಲೂ ಸುತ್ತಿದರು ಮತ್ತು ಕೂಗಿದರು. ರಾಹಬಳ ಮನೆಯನ್ನು ಬಿಟ್ಟು ಗೋಡೆಗಳೆಲ್ಲಾ ಬಿದ್ದು ಹೋದವು ಮತ್ತು ಇಸ್ರಾಯೇಲ್ಯರು ಪಟ್ಟಣವನ್ನು ಸುಟ್ಟು ಬಿಟ್ಟರು. ರಾಹಬಳು ದೇವಜನರೊಂದಿಗೆ ಸೇರಿಕೊಂಡದ್ದು ಮಾತ್ರವಲ್ಲ ಮುಂದೆ ಅರಸನಾಗುವ ದಾವೀದನಿಗೆ ಮತ್ತು ಯೇಸು ಕ್ರಿಸ್ತನಿಗೆ ದೊಡ್ಡ ಅಜ್ಜಿಯಾದಳು (ಮತ್ತಾಯ ೧:೫-೬,೧೬). ಮತ್ತು ಯೆಹೋಶುವನು ಸಹ ತನ್ನ ಜೀವನ ಪರ್ಯಂತರ ಇಸ್ರಾಯೇಲ್ಯರನ್ನು ಮುನ್ನಡೆಸಿದನು.

ನಾವು ಕ್ರೈಸ್ತರ ಮಧ್ಯೆಯಿದ್ದರೆ ಸಾಕು ದೇವರು ನಮ್ಮ ಕಡೆ ಇರುತ್ತಾನೆ ಎಂದು ನಾವು ಅಂದುಕೊಳ್ಳಬಾರದು. ಯೇಸು ಕ್ರಿಸ್ತನಲ್ಲಿ ನಂಬಿಕೆಯಿಟ್ಟು ಆತನಿಗೆ ವಿಧೇಯರಾಗಿ ನಡೆದುಕೊಳ್ಳುವ ಮೂಲಕ ನಾವು ದೇವರ ಕಡೆಗೆ ಸೇರಿಕೊಳ್ಳಬೇಕು.

## ವಿಶ್ಲೇಷಣೆ ೦೨




ಯೋಹಾನನ ಪರೀಕ್ಷೆ ಬಹಳ ಕಷ್ಟಕರವಾಗಿತ್ತು, ಓದಿದರೆ ಮಾತ್ರವೇ ಪಾಸಾಗಲು ಸಾಧ್ಯವಾಗುತ್ತಿತ್ತು. ಅವನು ಪರೀಕ್ಷೆ ಬರೆದನು ಮತ್ತು ಹೇಗಾದರು ದೇವರು ಪಾಸಾಗಲು ಸಹಾಯ ಮಾಡುತ್ತಾನೆ ಎಂದು ನಿರೀಕ್ಷಿಸಿದನು. ಕೆಲವು ದಿವಸಗಳಾದ ನಂತರ ಪರೀಕ್ಷೆಯ ಫಲಿತಾಂಶ ಪ್ರಕಟಿಸಿದರು ಆದರೆ ಸಿದ್ಧತೆ ಮಾಡಿಕೊಳ್ಳದೆ ಪರೀಕ್ಷೆ ಬರೆದಿದ್ದ ಯೋಹಾನನು ಫೇಲ್ ಆಗಿದ್ದನು. ಯೋಹಾನನಿಗೆ ಸ್ಕಾಲರ್ ಶಿಪ್ ತಪ್ಪಿತು. ನಂತರ ಅವನು ಬಹಳ ದುಃಖಿತನಾದನು ಮತ್ತು ತನ್ನನ್ನು ಸಮಾಧಾನ ಪಡಿಸಿಕೊಳ್ಳಲು ತನ್ನ ಸ್ನೇಹಿತೆ ರೂತಳಿಗೆ ಕರೆ ಮಾಡಿದನು.

## ಚಟುವಟಿಕೆ ೦೨

**ಯೆರಿಕೋ ಗೋಡೆಗಳು**

ತಮ್ಮನ್ನು ದೇವರಿಂದ ಬೇರ್ಪಡಿಸುವ ಕಾರ್ಯಗಳ ಬಗ್ಗೆ ಮಕ್ಕಳು ಯೋಚಿಸಲು ಮತ್ತು ಕೆಲವು ನಿಮಿಷಗಳ ಕಾಲ ಪ್ರಾರ್ಥನೆ ಮಾಡಲಿ. ಯೆರಿಕೋ ಗೋಡೆಯ ಇಟ್ಟಿಗೆಗಳ ಅರ್ಥದಲ್ಲಿ ಪ್ರತಿಯೊಂದು ಮಗುವಿಗೆ ಒಂದೊಂದು ಹಾಳೆಯನ್ನು ಕೊಡಿರಿ. ಆ ಹಾಳೆಯ (ಇಟ್ಟಿಗೆಯ) ಮೇಲೆ ತಮ್ಮನ್ನು ದೇವರಿಂದ ಬೇರ್ಪಡಿಸುವ ಅಥವಾ ದೂರ ಮಾಡುವ ಕಾರ್ಯಗಳ ಬಗ್ಗೆ ಬರೆಯುವಂತೆ ಅವರಿಗೆ ಹೇಳಿರಿ. ಇದಾದ ನಂತರ, ಮಕ್ಕಳು ಹಾಳೆಯನ್ನು ಮಡಚಿ ಮನೆಗೆ ತೆಗೆದುಕೊಂಡು ಹೋಗಲಿ. ವಾರದ ದಿನಗಳಲ್ಲಿ ಆ ಹಾಳೆಯನ್ನು ನೋಡುವಂತೆ ಮತ್ತು ತಮ್ಮನ್ನು ದೇವರಿಂದ ಬೇರ್ಪಡಿಸುವ ಆ ಗೋಡೆಯನ್ನು ದೇವರು ಒಡೆದುಹಾಕಲು ಪ್ರಾರ್ಥಿಸುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ.




## ಟೈಮ್ ಲೈನ್ ೧೨

ಯೆಹೋಶುವನ ಜೀವಿತದ ಗೆರೆಯನ್ನು ಎಳೆಯಿರಿ.


ಪ್ರಶ್ನೆ: ಯೆಹೋಶುವನು ಜನಿಸಿದಾಗ ಮೋಶೆ ಎಷ್ಟು ವರ್ಷದವನಾಗಿದ್ದನು? ಉತ್ತರ: ನಿಖರವಾಗಿ ಎಷ್ಟು ವರ್ಷ ಎಂದು ನಮಗೆ ಗೊತ್ತಿಲ್ಲ ಆದರೂ ಸುಮಾರು ೪೦ ವರ್ಷವಾಗಿರಬಹುದು.

ಪ್ರಶ್ನೆ: ಯೆಹೋಶುವನು ಎಷ್ಟು ವರ್ಷ ಬದುಕಿದನು? ಉತ್ತರ: ೧೧೦ ವರ್ಷಗಳು.

## ಒಗಟಿನ ಉತ್ತರಗಳು ೧೨




| | | | | | | | | | |
|---|---|---|---|---|---|---|---|---|---|
| ರಾ | ಹ | ಬ | ವ್ರೈ | ಗೂ | ಢಾ | ಚಾ | ಯೆ | ರ | ನ್ನು |
| ಅ | ಸ್ | ಯೆ | ರಿ | ಕೋ | ರ | ಳ | ಹೋ | ಬ | ಹ |
| ಶೀ | ಗೋ | ಡೆ | ಗ | ಳು | ಆ | ದೇ | ಶು | ಗೋ | ಸ್ಥ |
| ವಾ್ | ರ | ಯು | ಳು | ಸ | ಶೀ | ಇ | ವ | ಶ | ಅ |
| ಧ | ಬಿ | ದ್ದ | ವು | ಯ್ | ವಾ್ | ಗೋ | ಯ | ದೂ | ಗ |
| ಗೋ | ಐ | ಡೆ | ಳು | ಊ | ದ | ಡೆ | ಎ | ತ್ | ತ |
| ದೇ | ಕ್ | ಝು | ಪ | ಕ್ಕ | ಢ | ಕು | ರ | ಕ್ಷ | ಣೆ |
| ರ | ವ | ಹೋ | ಶು | ವ | ಇ | ಟುಂ | ಡು | ಶ್ | ಧ |
| ಜ | ನ | ರು | ಛ್ | ರಾ | ಹ | ಬ | ಳು | ಕ | ಯ |



## ಪ್ರಶ್ನೆಗಳು ಮತ್ತು ಉತ್ತರಗಳು ೧೨


೧. ದೇವರ ಚಿತ್ತವಿಲ್ಲದಿದ್ದರೂ ನೀವು ಕಡೆಯದಾಗಿ ಆತನ ಸಹಾಯವನ್ನು ಯಾವ ವಿಷಯದಲ್ಲಿ ಬೇಡಿಕೊಂಡಿರಿ? (ಹಾಸ್ಯಾಸ್ಪದ ಪ್ರಾರ್ಥನೆಗಳಾದ, ಟಿವಿಯಲ್ಲಿ ಬರುವವರಿಗಾಗಿ ಪ್ರಾರ್ಥನೆ ಮಾಡುವದು, ಯಾವ ಕೆಲಸವೂ ಇರಬಾರದು ಎಂಬದಾಗಿ ಪ್ರಾರ್ಥನೆ ಮಾಡುವದು, ಎದುರಾಳಿಗಳು ಸೋಲಬೇಕೆಂದು ಪ್ರಾರ್ಥಿಸುವದು, ಇತ್ಯಾದಿ).

೨. ದೇವರು ದೊಡ್ಡವನಾಗಿದ್ದಾನೆ: ಆತನು ನನ್ನ ಪ್ರಿಯ ಮಿತ್ರನಾಗಲು ಹೇಗೆ ಸಾಧ್ಯ? (ದೇವರು ವಿವಿಧ ಅಂಶಗಳ ಬಗ್ಗೆ ಮಾತನಾಡಿರಿ, ಆತನ ಮಹತ್ತು, ಆತನ ಪ್ರೀತಿ. ಹಾಗೆಯೇ ಆತನು ನಮ್ಮನ್ನು ಸಂಪೂರ್ಣವಾಗಿ ಬಲ್ಲವನಾಗಿದ್ದಾನೆ ಎಂಬದನ್ನೂ ಚರ್ಚಿಸಿರಿ).

೩. ದೇವರು ನನ್ನಿಂದ ಏನನ್ನು ಬಯಸುತ್ತಾನೆ? (ನಾವೆಲ್ಲರೂ ದೇವರಿಂದ ವಿವಿಧ ವರಗಳನ್ನು ಹೊಂದಿದ್ದೇವೆ ಮತ್ತು ವಿವಿಧ ರೀತಿಯ ಶಾರೀರಿಕ ಸಾಮರ್ಥ್ಯಗಳನ್ನು ಹೊಂದಿದ್ದೇವೆ. ದೇವರು ಈ ಲೋಕದಲ್ಲಿ ತನ್ನ ಪ್ರಭಾವವನ್ನು ತೋರಿಸಲು ಮತ್ತು ಆತನಿಗಾಗಿ ಹೆಚ್ಚು ಜನರನ್ನು ಸಂಧಿಸಲು ನಮ್ಮೆಲ್ಲರನ್ನು ಒಂದಲ್ಲಾ ಒಂದು ರೀತಿಯಲ್ಲಿ ಉಪಯೋಗಿಸಿಕೊಳ್ಳುತ್ತಾನೆ. ನಿಮ್ಮಲ್ಲಿರುವ ವರಗಳು ಯಾವುವು? ನಿಮ್ಮಲ್ಲಿರುವ ಸಾಮರ್ಥ್ಯಗಳು ಯಾವುವು? ನಮಗೆ ವರಗಳಿಲ್ಲದಿರುವ ಅಥವಾ ಸಾಮರ್ಥ್ಯಗಳಿಲ್ಲದಿರುವ ವಿಷಯಗಳಲ್ಲಿಯೂ ದೇವರು ನಮ್ಮನ್ನು ಉಪಯೋಗಿಸಿಕೊಳ್ಳಲು ಶಕ್ತನಾಗಿದ್ದಾನೆ ಎಂಬದನ್ನು ಮರೆಯಬೇಡಿರಿ. ಕೆಲವೊಮ್ಮೆ ಆತನು ನಮ್ಮ ಬಲಹೀನತೆಯಲ್ಲಿಯೂ ತನ್ನ ಮಹತ್ತನ್ನು ತೋರಿಸಲು ಬಯಸುತ್ತಾನೆ. ಆತನು  ಹೇಳುವ ಕಾರ್ಯಗಳನ್ನು ಮಾಡಲು ಮಾಡಲು ಸಿದ್ಧವಾಗಿರುವ ಹೃದಯದ ಬಗ್ಗೆ ಆತನು ಹೆಚ್ಚು ಚಿಂತಿಸುತ್ತಾನೆ).

## ಆಟ ೧೨

ಇದನ್ನು ಬಿಡಿಸಿರಿ



* ಕಂಠಪಾಠ ವಚನವಿರುವ ಪೋಸ್ಟರ್ ಸಿದ್ಧಮಾಡಿರಿ. ಪೂರ್ತಿ ವಾಕ್ಯವನ್ನು ಬರೆಯದೆ ಮಧ್ಯದಲ್ಲಿ ಕೆಲವು ಸ್ಥಳ ಬಿಡಿರಿ..

* ಆಟದ ಸಮಯದಲ್ಲಿ, ಮಕ್ಕಳು ಸತ್ಯವೇದದಲ್ಲಿ ವಾಕ್ಯವನ್ನು ಹುಡೂಕಬೇಕು ಮತ್ತು ಯಾವ ಪದಗಳು ಪೋಸ್ಟರ್ ನಲ್ಲಿ ಇಲ್ಲ ಎಂಬದನ್ನು ಹೇಳಬೇಕು.

* ಖಾಲಿಯಿರುವ ಸ್ಥಳಗಳಲ್ಲಿ, ಮಕ್ಕಳು ತಪ್ಪಿರುವ ಪದಗಳನ್ನು ಪ್ರತಿನಿಧಿಸುವ ಚಿತ್ರಗಳನ್ನು ಬಿಡಿಸಬೇಕು. (ತಪ್ಪಿರುವ ಪದಗಳನ್ನು ಒಂದಕ್ಕಿಂತ ಹೆಚ್ಚು ರೀತಿಗಳಲ್ಲಿ ತೋರಿಸಬಹುದಾಗಿದೆ).

* ಒಂದುವೇಳೆ ನಿಮ್ಮ ಗುಂಪು ದೊಡ್ಡದಾಗಿದ್ದರೆ, ಅದನ್ನು ೪ ಅಥವಾ ೬ ಗುಂಪುಗಳಾಗಿ ವಿಂಗಡಿಸಿರಿ ಮತ್ತು ಪ್ರತಿಯೊಂದು ತಂಡಕ್ಕೆ ಪೋಸ್ಟರ್ ಪ್ರತಿ ಮಾಡಿಸಿರಿ.
* ಎಲ್ಲಾ ಚಿತ್ರಗಳನ್ನು ಬಿಡಿಸಿದ ನಂತರ, ಅವರು ವಾಕ್ಯವನ್ನು ಚೆನ್ನಾಗಿ ಕಲಿತುಕೊಳ್ಳುವ ತನಕ ಅನೇಕ ಸಲ ಅವರಿಂದ ವಾಕ್ಯವನ್ನು ಹೇಳಿಸಿರಿ.

## ಹಾಜರಾತಿ ೧೨

ತರಗತಿಗೆ ಹಾಜರಾದದ್ದಕ್ಕೆ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡುವ ಸಲುವಾಗಿ ಮತ್ತೊಂದು ಕಾರ್ಡ್ ಪಡೆಯಬೇಕಾದರೆ ಮುಂದಿನ ವಾರ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:

ಯೆಹೋಶುವ




## ಹೋಮ್ ವರ್ಕ್ ೧೨

### ಅಸೈನ್ಮೆಂಟ್

ಈ ವಾರದ ನಿಮ್ಮ ಅಸೈನ್ಮೆಂಟ್ ನೀವು ಗುಂಪಿನಲ್ಲಿ ಗುರುತಿಸಿಕೊಳ್ಳಲು ಕ್ರೈಸ್ತನಂತೆ ನಟಿಸುತ್ತಿದ್ದೀರೋ ಅಥವಾ ನಿಜವಾಗಿಯೂ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಟ್ಟಿದ್ದೀರೋ ಎಂಬದಾಗಿ ಬರೆಯಬೇಕು. ಒಂದುವೇಳೆ ಇದು ನಿಮಗೆ ಮೊದಲನೆಯ ಸಲವಾಗಿರಬಹುದು ಅಥವಾ ನಿಮಗೆ ನಿಶ್ಚಯವಿಲ್ಲದಿರಬಹುದು, ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವ ಮೂಲಕ ದೇವರ ಕುಟುಂಬದಲ್ಲಿ ಸೇರಿಕೊಳ್ಳುವದು ಹೇಗೆ ಎಂಬದನ್ನು ನಿಮ್ಮ ಸಂಡೇ ಸ್ಕೂಲ್ ಟೀಚರ್ ಹತ್ತಿರ ಕೇಳಿ ತಿಳಿದುಕೊಳ್ಳಿರಿ. ಒಂದುವೇಳೆ ನೀವು ಈಗಾಗಲೇ ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಂಡಿದ್ದರೆ, ನಿಮಗಿಂತ ಭಿನ್ನವಾಗಿರುವವರಿಗೆ ಈ ವಾರದಲ್ಲಿ ಉತ್ತಮವಾಗಿರುವ ಮಾತುಗಳನ್ನು ಹೇಳಿರಿ, ಅಂದರೆ ಅವರ ವಸ್ತ್ರಧಾರಣೆಯನ್ನು ಹೊಗಳಿರಿ ಅಥವಾ ಅವರು ಆಡುವ ರೀತಿಯನ್ನು ಪ್ರಶಂಸೆ ಮಾಡಿರಿ.

### ಓದಿರಿ

ದಿನ ೧: ಯೆಹೋಶುವ ೭:೧-೧೨

ದಿನ ೨: ಯೆಹೋಶುವ ೭:೧೩-೧೯

ದಿನ ೩: ಯೆಹೋಶುವ ೭:೨೦-೨೬

ದಿನ ೪: ಯೆಹೋಶುವ ೮:೧-೧೩

ದಿನ ೫: ಯೆಹೋಶುವ ೮:೧೪-೨೯

# ೧೩. ಯಾವುದನ್ನೂ ಇಟ್ಟುಕೊಳ್ಳಬೇಡಿರಿ



**ಸತ್ಯವೇದ ಕಥೆ: ಆಕಾನ**

ಯೆಹೋಶುವ ೬:೧೭-೧೯, ೭:೧-೧೨, ೭:೨೦-೮:೭, ೮:೧೮-೨೭

## ಕಂಠಪಾಠ ವಚನ ೧೩

ಯೊವಾನ್ನ ೧: ೧೨ "ಕೆಲವರಾದರೋ ಅವರನ್ನು ಬರಮಾಡಿಕೊಂಡರು. ಅಂಥವರಿಗೆ, ಅಂದರೆ ಅವರಲ್ಲಿ ವಿಶ್ವಾಸ ಇಟ್ಟವರಿಗೆ, ದೇವರ ಮಕ್ಕಳಾಗುವ ಹಕ್ಕನ್ನು ಅವರು ಕೊಟ್ಟರು"

## ಕಥೆಯ ಅವಶ್ಯಕತೆ ೧೩



ಮಾರ್ಕನು ತನ್ನ ತರಗತಿಯಲ್ಲಿ ಶಿಕ್ಷಕಿ ಹೇಳುವ ಮೊದಲೇ ವಿಜ್ಞಾನದ ಕಾರ್ಯವನ್ನು ಮಾಡಿ ಮುಗಿಸುತ್ತಿದ್ದನು. ಉತ್ತಮ ಅಂಕಗಳನ್ನು ಪಡೆಯಬೇಕೆಂಬದು ಅವನ ಬಯಕೆಯಾಗಿತ್ತು. ಆ ಸಮಯದಲ್ಲಿ ಅವನ ಸ್ನೇಹಿತನು ಓಡುತ್ತಾ ಬಂದು ಮಾರ್ಕನು ಮಾಡುತ್ತಿದ್ದ ಕಾರ್ಯದ ಮೇಲೆ ಬಿದ್ದನು. ಆದ್ದರಿಂದ ಅವನು ಮಾಡುತ್ತಿದ್ದ ಕಾರ್ಯ ನೆಲದ ಮೇಲೆ ಬಿದ್ದು ಒಡೆದು ಹೋಯಿತು. ಮಾರ್ಕನಿಗೆ ಬಹಳ ಕೋಪ ಬಂದಿತು ಆದರೆ ಆ ಹುಡುಗನು ಎಲ್ಲಾ ಸಹಪಾಠಿಗಳು ಮತ್ತು ಶಿಕ್ಷಕಿಯ ಎದುರೇ ಕ್ಷಮಾಪಣೆ ಕೇಳಿದನು. ಆಗ ಮಾರ್ಕನಿಗೆ ಏನೂ ಮಾಡಲು ಆಗಲಿಲ್ಲ. "ನೀನು ಕ್ಷಮೇ ಕೇಳಿದ್ದರಿಂದ, ನಾನು ನಿನ್ನನ್ನು ಕ್ಷಮಿಸುತ್ತೇನೆ" ಎಂಬದಾಗಿ ಹೇಳುವದನ್ನು ಬಿಟ್ಟರೆ ಬೇರೇನೂ ಹೇಳಲು ಅವನಿಗೆ ಅವಕಾಶ ಸಿಗಲಿಲ್ಲ. ಆದರೆ ಮಾರ್ಕನು ನಿಜವಾಗಿಯೂ ಅವನನ್ನು ಕ್ಷಮಿಸಿರಲಿಲ್ಲ. "ಒಂದುದಿನ ಅವನು ನನಗೆ ಮಾಡಿದಂತೆಯೇ ನಾನೂ ಅವನಿಗೆ ಮಾಡುತ್ತೇನೆ, ಆಗ ಅವನಿಗೆ ಬುದ್ಧಿ ಬರುತ್ತದೆ ಎಂಬದಾಗಿ ಮನಸ್ಸಿನಲ್ಲಿ ಅಂದುಕೊಂಡನು." ಆದ್ದರಿಂದ ಶಿಕ್ಷಕಿಯು ಯಾವಾಗ ಪ್ರಾಮುಖ್ಯವಾದ ಪ್ರಾಜೆಕ್ಟ್ ಮಾಡಲು ಹೇಳುತ್ತಾರೆ ಎಂಬದನ್ನೇ ಮಾರ್ಕನು ಕಾಯುತ್ತಿದ್ದನು. ಒಂದುದಿನ ಶಿಕ್ಷಕಿಯು ದೊಡ್ಡ ಪ್ರಾಜೆಕ್ಟ್ ಮಾಡುವಂತೆ ಹೇಳಿದರು. ಆಗ ಮಾರ್ಕನು, ಈಗ ನನ್ನ ಸಮಯ ಬಂದಿದೆ ಅಂದುಕೊಂಡನು! ಮತ್ತು ತನ್ನ ಕಾರ್ಯವನ್ನು ಸಾಧಿಸಲು ಅವನಿಗೆ ಅವಕಾಶ ದೊರೆತಾಗ ಅವನು ಸೋಡಾ ಕೊಳ್ಳಲು ಅಂಗಡಿಗೆ ಹೋದನು. ಆ ಹುಡುಗನ ಪ್ರಾಜೆಕ್ಟ್ ಮೇಲೆ "ಆಕಸ್ಮಿಕವಾಗಿ" ಸೋಡಾ ಚೆಲ್ಲಬೇಕೆಂಬದು ಮಾರ್ಕನ ಉದ್ದೇಶವಾಗಿತ್ತು.

## ಮುಖ್ಯ ಪಾಠ ೧೩

ಕಳೆದ ವಾರ, ಯೆಹೋಶುವ ಮತ್ತು ಇಸ್ರಾಯೇಲ್ಯರು ಯೆರಿಕೋ ಪಟ್ಟಣವನ್ನು ವಶಪಡಿಸಿಕೊಂಡರು. ಆ ಪಟ್ಟಣದಲ್ಲಿರುವ ಎಲ್ಲವೂ ನನಗೆ ಸೇರಿದ್ದು ಎಂದು ದೇವರು ಅವರಿಗೆ ಹೇಳಿದನು, ಆದ್ದರಿಂದ ಅವರು ಆ ಪಟ್ಟಣವನ್ನು ಪೂರ್ತಿಯಾಗಿ ಸುಡಬೇಕಾಗಿತ್ತು ಮತ್ತು ತಮಗಾಗಿ ಏನೂ ತೆಗೆದುಕೊಳ್ಳಬಾರದಾಗಿತ್ತು. ಉಳಿದ ಪಟ್ಟಣಗಳಲ್ಲಿ ಸಿಗುವ ಕೊಳ್ಳೆಯೆಲ್ಲಾ ಇಸ್ರಾಯೇಲ್ಯರಿಗೆ ಸೇರಿದ್ದಾಗಿತ್ತು. ನಮ್ಮ ಜೀವಿತದಲ್ಲಿಯೂ ಪ್ರಥಮವಾಗಿರುವದೆಲ್ಲವೂ ದೇವರದ್ದಾಗಿದೆ ಅದನ್ನು ನಾವು ದೇವರಿಗೆ ಕೊಡಬೇಕು.

ಯೆಹೋಶುವ ಮತ್ತು ಇಸ್ರಾಯೇಲ್ಯರು ಮುಂದಿನ ಆಯಿ ಪಟ್ಟಣವನ್ನು ಸುಲಭವಾಗಿ ಜಯಿಸಬಹುದು ಎಂಬದಾಗಿ ಅಂದುಕೊಂಡಿದ್ದರು. ಇಸ್ರಾಯೇಲ್ಯರು ಈಗಾಗಲೇ ಜಯಿಸಿದ್ದ ಯುದ್ಧಗಳಿಗೆ ಹೋಲಿಸಿದರೆ ಆಯಿ ಪಟ್ಟಣ ತುಂಬಾ ಚಿಕ್ಕದಾಗಿತ್ತು. ನಾವು ನಮ್ಮ ಪಾಪದ ಮೇಲೆ ಜಯಗಳಿಸಲು ಮತ್ತು ದೇವರಿಗಾಗಿ ಒಳ್ಳೆಯ ಕಾರ್ಯಗಳನ್ನು ಮಾಡಲು ಅಂದರೆ ನಮ್ಮ ತಂದೆತಾಯಿಗಳನ್ನು ಪ್ರೀತಿಸಲು ಸಹಾಯ ಮಾಡುವ ಸಲುವಾಗಿ ದೇವರು ಪವಿತ್ರಾತ್ಮನನ್ನು ನಮ್ಮೊಳಗೆ ಕೊಡುತ್ತಾನೆ. ದೇವರ ಸಹಾಯದಿಂದ ಇದು ಅತ್ಯಂತ ಸುಲಭವೆನಿಸುತ್ತದೆ. ಇಸ್ರಾಯೇಲ್ಯರು ಆಯಿ ಪಟ್ಟಣಕ್ಕೆ ವಿರುದ್ಧವಾಗಿ ಕೆಲವರನ್ನು ಮಾತ್ರವೇ ಕಳುಹಿಸಿದರು, ಆದರೆ ಈ ಸಲ ಅವರು ಸುಲಭವಾಗಿ ಸೋಲಿಸಲ್ಪಟ್ಟರು! ಆಗ

ಯೆಹೋಶುವನು ದೇವರಿಗೆ, “ದೇವರೇ ಯಾಕೆ ನೀನು ನಮ್ಮ ಸಂಗಡ ಬರುತ್ತಿಲ್ಲ? ಈ ದೇಶದಲ್ಲಿರುವ ಜನರು ನಮ್ಮನ್ನೆಲ್ಲಾ ಕೊಲ್ಲುತ್ತಾರೆ ಮತ್ತು ನೀನು ಮಹಾದೇವರೆಂದು ಯಾರೂ ಯೋಚಿಸುವದಿಲ್ಲ!” ಎಂಬದಾಗಿ ಪ್ರಾರ್ಥಿಸಿದನು. ದೇವರು ಅವನಿಗೆ ಎದ್ದೇಳು, ನಿನ್ನ ಗೋಳಾಟವನ್ನು ನಿಲ್ಲಿಸು, ನೀವು ಸೋಲಲು ಕಾರಣ ನಿಮ್ಮಲ್ಲಿ ಯಾರೋ ಯೆರಿಕೋ ಪಟ್ಟಣದಿಂದ ಕೆಲವನ್ನು ಕದ್ದುಕೊಂಡು, ನನಗೆ ವಿರುದ್ಧವಾಗಿ ಸುಳ್ಳು ಹೇಳಿದಾರೆ, ಅವಿಧೇಯರಾಗಿದ್ದಾರೆ ಎಂದು ಹೇಳಿದನು. ಒಂದುವೇಳೆ ನೀವು ನಿಮ್ಮ ತಂದೆತಾಯಿಗಳಿಗೆ ಒಂದು ದಿನ ಸುಳ್ಳು ಹೇಳಿರಬಹುದು. ನಿಮ್ಮ ತಂದೆತಾಯಿಗಳಿಂದ, ಶಿಕ್ಷಕರಿಂದ ಮತ್ತು ಸ್ನೇಹಿತರಿಂದ ಕೆಲವು ವಿಷಯಗಳನ್ನು ನೀವು ಮರೆಮಾಡಿರಬಹುದು ಆದರೆ ದೇವರು ಎಲ್ಲವನ್ನೂ ನೋಡುತ್ತಾನೆ ಹಾಗೂ ಬಲ್ಲವನಾಗಿದ್ದಾನೆ. ಕೆಲವು ದಿವಸಗಳಾದ ನಂತರ ತಂದೆತಾಯಿಗಳನ್ನು ಪ್ರೀತಿಸಲು ನಿಮಗೆ ಕಷ್ಟವೆನಿಸುತ್ತದೆ ಆಗ ನೀವು ದೇವರು ನೀನು ಯಾಕೆ ನನ್ನ ಜೊತೆಯಲ್ಲಿಲ್ಲ ಎಂದು ಕಣ್ಣೀರಿಡುವಿರಿ. ಕಣ್ಣೀರಿಡುವ ಬದಲು ಯೆಹೋಶುವನ ಹಾಗೆ ದೇವರೇ ನಾನೇನಾದರೂ ತಪ್ಪು ಮಾಡಿದ್ದೇನೆಯೇ ಎಂದು ದೇವರನ್ನು ವಿಚಾರಿಸಿರಿ. ನೀವು ವಿಚಾರಿಸುವಾಗ, ದೇವರು ಕೂಡಲೇ ನಿಮಗೆ ಸಹಾಯ ಮಾಡುತ್ತಾನೆ ಯಾಕಂದರೆ ಆತನು ನಿಮ್ಮನ್ನು ಪ್ರೀತಿಸುತ್ತಾನೆ ಮತ್ತು ನಿಮಗೆ ಉತ್ತಮವಾಗಿರುವದನ್ನು ಕೊಡಲು ಬಯಸುತ್ತಾನೆ. ಸುತ್ತಮುತ್ತಲ ಜನಾಂಗಗಳಿಗಿಂತಲೂ ಹೆಚ್ಚಾಗಿ ದೇವರು ಇಸ್ರಾಯೇಲ್ಯರಿಗೆ ಏನು ಬೇಕು ಎಂಬದರ ಬಗ್ಗೆ ಯೋಚಿಸಿದನು, ಆತನು ಪರಿಪೂರ್ಣವಾದ ಜಯಕ್ಕಿಂತಲೂ ಹೆಚ್ಚಾಗಿ ನಿಮ್ಮ ಹೃದಯದ ಬಗ್ಗೆ ಚಿಂತಿಸುವವನಾಗಿದ್ದಾನೆ. ಸತ್ಯವೇದವು ಹೇಳುವದೇನೆಂದರೆ ನಾವು ನಮ್ಮ ಪಾಪವನ್ನು ಅರಿಕೆಮಾಡಿಕೊಂಡರೆ, ನೀತಿವಂತನೂ, ನಂಬಿಗಸ್ತನೂ ಆಗಿರುವ ದೇವರು ನಮ್ಮನ್ನು ಕ್ಷಮಿಸುತ್ತಾನೆ ಹಾಗೂ ಪಾಪದಿಂದ ನಮ್ಮನ್ನು ಶುದ್ಧೀಕರಿಸುತ್ತಾನೆ. ನೀವು ಮಾಡಿರುವ ತಪ್ಪುಗಳನ್ನು ದೇವರು ನಿಮಗೆ ತೋರಿಸುವಾಗ, ಕೂಡಲೇ ಅದನ್ನು ಸರಿಪಡಿಸಿಕೊಳ್ಳಿರಿ. ಒಂದುವೇಳೆ ನೀವು ನಿಮ್ಮ ತಂದೆತಾಯಿಗಳಿಗೆ ಸುಳ್ಳು ಹೇಳಿದ್ದರೆ, ಕೂಡಲೇ ಸತ್ಯ ಹೇಳಿರಿ. ಒಂದುವೇಳೆ ಏನಾದರೂ ಕದ್ದುಕೊಂಡಿದ್ದರೆ, ಕೂಡಲೇ ಹಿಂದಿರುಗಿಸಿರಿ. ಒಂದುವೇಳೆ ನೀವು ಯಾರನ್ನಾದರೂ ನೋಯಿಸಿದ್ದರೆ, ಕೂಡಲೇ ಕ್ಷಮಾಪಣೆ ಕೇಳಿರಿ. ಒಂದುವೇಳೆ ಮಾರ್ಕನ ಹಾಗೆ ಸೇಡು ತೀರಿಸಿಕೊಳ್ಳಬೇಕೆಂದಿದ್ದರೆ, ಆ ವ್ಯಕ್ತಿಯನ್ನು ಕ್ಷಮಿಸಿರಿ. ಒಂದುವೇಳೆ ದೇವರಿಗೆ ಸೇರಿದ್ದನ್ನು ತೆಗೆದುಕೊಂಡಿದ್ದರೆ, ಹಿಂದಿರುಗಿಸಿರಿ. ನೀವು ಎಷ್ಟು ಬೇಗ ಪಶ್ಚಾತ್ತಾಪಪಡುತ್ತೀರೋ, ಮುಂದೆ ಸಾಗಲು ಮತ್ತು ಜಯಗಳಿಸಲು ದೇವರು ಅಷ್ಟು ಬೇಗ ನಿಮಗೆ ಸಹಾಯ ಮಾಡುತ್ತಾನೆ.

ದೇವರು ಇಸ್ರಾಯೇಲ್ಯರಿಗೆ ಆಕಾನನು ಪಾಪ ಮಾಡಿದ್ದಾನೆಂದು ತೋರಿಸಿದನು. ಅವರು ಬಟ್ಟೆ, ಬೆಳ್ಳಿ ನಾಣ್ಯಗಳು ಮತ್ತು ಬಂಗಾರವನ್ನು ಅವನು ಯೆರಿಕೋವಿನಿಂದ ತಂದು ತನ್ನ ಗುಡಾರದಲ್ಲಿ ಹುದುಗಿಟ್ಟಿದ್ದನ್ನು ಕಂಡರು. ಅವರು ಅವನನ್ನು ಮತ್ತು ಅವನ ವಸ್ತುಗಳನ್ನು ತೆಗೆದುಕೊಂಡು ಸುಟ್ಟುಬಿಟ್ಟರು. ನಂತರ, ಅವರು ಆಯಿ ಪಟ್ಟಣದ ಮೇಲೆ ಯುದ್ಧಕ್ಕೆ ಹೋದಾಗ, ದೇವರು ಅವರಿಗೆ ಜಯಗಳಿಸಲು ಸಹಾಯ ಮಾಡಿದನು.

ನಾವು ದೇವರಿಂದ ಕದ್ದುಕೊಳ್ಳಲು ಅಥವಾ ಬಚ್ಚಿಡಲು ಮುಂದಾಗದಿರುವ ಮತ್ತು ತಪ್ಪು ಮಾಡಿದಾಗ ಪಶ್ಚಾತ್ತಾಪಪಡುವ ಆಯ್ಕೆ ಮಾಡಿಕೊಳ್ಳುತ್ತೇನೆ..

## ವಿಶ್ಲೇಷಣೆ ೧೩

ಆದರೆ ಅವನು ಈ ಅವಕಾಶವನ್ನು ಎದುರುನೋಡುತ್ತಿರುವಾಗ, ಮಾರ್ಕನು ಏನು ಮಾಡಲಿದ್ದಾನೆ ಎಂಬದನ್ನು ಮರಿಯಳು ಅರಿತುಕೊಂಡಳು. ಮನಸ್ಸಿನಲ್ಲಿ ಸೇಡಿಟ್ಟುಕೊಳ್ಳುವದು ಮತ್ತು ಕ್ಷಮಿಸದೆ ಇರುವದು ಸರಿಯಲ್ಲ ಎಂದು ಮರಿಯಳು ಅವನಿಗೆ ಹೇಳಿದಳು. ದೇವರು ಇಂಥವುಗಳನ್ನು ಇಷ್ಟಪಡುವದಿಲ್ಲ. ಮಾರ್ಕನಿಗೆ ತನ್ನ ತಪ್ಪಿನ ಅರಿವಾಯಿತು. ಅವರಿಬ್ಬರೂ ಒಟ್ಟಾಗಿ ಪ್ರಾರ್ಥನೆ ಮಾಡಿದರು ಮತ್ತು ಅವನು ನಿಜವಾಗಿಯೂ ತನ್ನ ಸ್ನೇಹಿತನನ್ನು ಕ್ಷಮಿಸಿದನು.



## ಚಟುವಟಿಕೆ ೧೩

**ಇದು ನನ್ನದಲ್ಲ**



ಮಕ್ಕಳಿಗೆ ತಮ್ಮ ವೈಯಕ್ತಿಕ ವಸ್ತುವನ್ನು ಟೇಬಲ್ ಮೇಲೆ ಇಡಲು ಹೇಳಿರಿ. ಅದರಲ್ಲಿ ಯಾವುದಾದರೊಂದು ವಸ್ತುವನ್ನು ತೆಗೆದುಕೊಂಡು "ಇದು ನಿಮ್ಮದೇ?" ಎಂದು ಹೇಳಿರಿ. ಒಂದುವೇಳೆ ಅದು ಆ ಮಗುವಿನದಲ್ಲವಾದರೆ, "ಇದು ನನ್ನದಲ್ಲ ಮತ್ತು ನಾನು ಇದಕ್ಕಾಗಿ ಆಸೆಪಡುವದಿಲ್ಲ ಅಥವಾ ನನ್ನದಲ್ಲವನ್ನು ತೆಗೆದುಕೊಳ್ಳುವದಿಲ್ಲ" ಎಂದು ಆ ಮಗು ಹೇಳಬೇಕು. ಇದೇ ರೀತಿ ಪ್ರತಿಯೊಂದು ವಸ್ತುವನ್ನು ತೆಗೆದುಕೊಂಡು ಕೇಳಿರಿ, ಹೀಗೆ ಎಲ್ಲರೂ ಭಾಗವಹಿಸಲು ಸಾಧ್ಯವಾಗುತ್ತದೆ. ಒಂದುವೇಳೆ ಮಕ್ಕಳು ತುಂಬಾ ಚಿಕ್ಕವರಾಗಿದ್ದರೆ "ಇದು ನನ್ನದಲ್ಲ" ಎಂಬದಾಗಿ ಮಾತ್ರವೇ ಉತ್ತರ ಕೊಡುವಂತೆ ಹೇಳಿರಿ.

## ಟೈಮ್ ಲೈನ್ ೧೩

ಕಥೆಯ ಯಾವ ಸಮಯದಲ್ಲಿ ಆಕಾನನ ಅವಿಧೇಯತೆ ಬರುತ್ತದೆ ಎಂಬದನ್ನು ಗುರುತಿಸಿರಿ.

ಪ್ರಶ್ನೆ: ಆಯಿ ಪಟ್ಟಣವನ್ನು ವಶಪಡಿಸಿಕೊಂಡಾಗ ಯೆಹೋಶುವನಿಗೆ ಎಷ್ಟು ವಯಸ್ಸಾಗಿತ್ತು? ಉತ್ತರ: ಅವನ ವಯಸ್ಸು ಆಗ ಎಷ್ಟು ಎಂಬದು ನಿಖರವಾಗಿ ಗೊತ್ತಿಲ್ಲ, ಆದರೂ ಸುಮಾರು ೭೦ ವರ್ಷವಾಗಿರಬಹುದು.

ಪ್ರಶ್ನೆ: ಆಕಾನನು ದೇವರಿಗೆ ಯಾವಾಗ ಅವಿಧೇಯನಾದನು? ಉತ್ತರ: ಯೆಹೋಶುವ ಮತ್ತು ಇಸ್ರಾಯೇಲ್ಯರು ಯೆರಿಕೋ ಪಟ್ಟಣ ಸ್ವಾಧೀನಪಡಿಸಿಕೊಳ್ಳಲು ಯುದ್ಧ ಮಾಡುತ್ತಿರುವಾಗ.

## ಒಗಟಿನ ಉತ್ತರಗಳು

ಎಷ್ಟು ಸಂಕೇತಗಳಿವೆ?

| ೧ | ೫ | ೭ | ೦ | ೮ |
|---|---|---|---|---|
| ೪೦ | ೨೫ | ೧೦ | ೫೨ | ೨೭ |

| ೪ | ೬ | ೨ | ೯ | . |
|---|---|---|---|---|
| ೧೯ | ೨೧ | ೧೭ | ೩೦ | ೩೯ |

| | | | | | | | | | | | | | |
|---|---|---|---|---|---|---|---|---|---|---|---|---|---|
| ೧ | ೫ | ೦ | ೪ | ೯ | ೦ | ೮ | ೦ | . | ೨ | ೧ | ೪ | ೮ | ೦ |
| ೦ | ೧ | ೫ | ೬ | ೧ | ೬ | ೯ | ೪ | ೧ | ೦ | . | ೦ | ೬ | ೧ |
| ೬ | ೯ | ೧ | ೦ | ೯ | ೭ | ೧ | ೦ | . | ೫ | ೮ | ೧ | ೫ | ೮ |
| ೦ | ೬ | ೯ | ೯ | ೫ | ೦ | ೮ | ೫ | ೦ | ೬ | ೦ | ೭ | ೪ | ೨ |
| ೭ | ೧ | ೦ | ೬ | ೧ | . | ೯ | . | ೨ | ೧ | ೯ | ೦ | ೯ | ೧ |
| ೮ | | ೪ | ೦ | ೮ | ೦ | ೧ | ೫ | ೦ | ೪ | ೮ | ೧ | ೫ | ೬ |
| ೪ | ೦ | ೯ | ೭ | . | ೪ | . | ೯ | ೮ | ೫ | ೬ | ೨ | ೫ | ೦ |
| ೧ | ೨ | ೧ | ೪ | ೧ | ೫ | ೦ | ೧ | ೫ | ೬ | ೧ | ೦ | . | ೮ |
| ೪ | ೮ | ೪ | ೮ | ೬ | ೦ | ೨ | ೫ | ೯ | ೧ | ೯ | ೨ | ೫ | ೧ |
| ೮ | ೫ | ೦ | ೨ | ೮ | ೧ | ೮ | ೭ | ೦ | . | ೮ | ೧ | ೬ | ೮ |
| ೧ | ೨ | ೧ | ೦ | . | ೪ | . | ೨ | . | ೫ | ೨ | . | ೦ | ೯ |
| ೬ | ೦ | . | ೪ | ೧ | ೦ | ೧ | ೦ | ೧ | | ೧ | ೦ | | ೦ |
| ೦ | ೩ | ೫ | ೬ | ೦ | ೮ | ೫ | . | ೦ | ೯ | ೦ | . | ೫ | ೬ |
| ೧ | . | ೧ | ೦ | ೧ | . | ೬ | ೧ | . | ೫ | ೧ | ೨ | ೪ | ೮ |
| ೯ | ೬ | ೯ | . | ೯ | ೭ | ೮ | ೦ | . | ೪ | . | ೦ | ೯ | . |
| ೨ | ೦ | ೮ | ೦ | . | ೪ | ೨ | ೮ | ೨ | ೮ | ೦ | . | ೬ | ೦ |
| ೭ | ೨ | ೧ | . | ೫ | ೦ | ೧ | . | ೭ | ೯ | ೧ | ೯ | ೭ | . |
| . | ೪ | . | ೦ | ೨ | ೪ | ೬ | ೦ | . | ೪ | ೬ | ೨ | ೦ | ೮ |
| ೯ | ೫ | ೯ | ೯ | ೦ | . | ೭ | ೯ | ೧ | . | ೦ | ೫ | . | ೯ |

| | | | | | | | | | |
|---|---|---|---|---|---|---|---|---|---|
| ಪ | ಯ | ಲಿ | ಜಾ | ದೇ | ಕಾ | ನ | ಕ | ಜ | ಯ |
| ಕ್ಷ | ಯು | ಕೋ | ವ | ಫಿ | ಯು | ಸೋ | ಲು | ಧಿ | ದ್ದ |
| ಬಿ | ದ್ದ | ವು | ಮ | ನು | ಳ | ಝು | ಧ | ಕಾ | ಇಟ್ಟ |
| ಸಂ | ಯಾ | ವ | ಧ್ | ಪ್ರ | ಚೋ | ದಿ | ಸಿ | ದ | ನು |
| ತ | ತೋ | ರ | ಕ | ರ್ತ | ನು | ಚ | ಯ | ಮ್ಯೈ | ಪ |
| ಶ | ಐ | ಪ | ನು | ನ | ಬಾ | ರಿಲ | ಯು | ಹಿ | ಕ್ಕ |
| ಲೂ | ಗಂ | ದೇ | ಕಾ | ಮ | ಮೆ | ಯು | ಸಿ | ಯೊ | ದೇ |
| ಟಿ | ಕ | ಆ | ಎ | ಕು | ಟುಂ | ಬ | ನ | ದ | ವ |
| ಮಿ | ಜ | ಯಿ | ನ | ಳಿ | ಠ | ದೇ | ಕ | ತ | ರು |



## ಪ್ರಶ್ನೆಗಳು ಮತ್ತು ಉತ್ತರಗಳು ೧೩


೧. ದೇವರಿಗೆ ಗೊತ್ತಿರುವ ಹಿಂದಿನ ವಿಷಯಗಳು ಯಾವುದಾದರು ಮರೆಯಾಗಿವೆಯೇ? (ಅವರಿಗೆ ಮಾತನಾಡಲು ಸಮಯ ಕೊಡಿರಿ ಮತ್ತು ಒಂದುವೇಳೆ ಯಾರಾದರೂ ವಿಶ್ವಾಸಾರ್ಹವಾದ ವಿಷಯವನ್ನು ನಿಮ್ಮೊಂದಿಗೆ ಹಂಚಿಕೊಂಡರೆ ಅದನ್ನು ಯಾರೊಂದಿಗೂ ಹೇಳದಂತೆ ಜ್ಞಾಪಕಪಡಿಸಿರಿ).

೨. ದೇವರು ಎರಡನೇ ಅವಕಾಶವನ್ನು ಕೊಡುತ್ತಾನೆಯೇ? (ಖಂಡಿತವಾಗಿಯೂ, ಆದರೂ ಎರಡನೇ ಅವಕಾಶಗಳಿಗೆ ನಿಮ್ಮ ತಂದೆತಾಯಿಗಳನ್ನು ಮರಳುಗೊಳಿಸುವ ಬಗ್ಗೆ ಯೋಚಿಸಿರಿ, ಯಾಕಂದರೆ ಅವರು ಒಳ್ಳೆಯ ಕಾರ್ಯ ಮಾಡಬೇಕೆಂದು ಬಯಸಿದರು ಅದು ಆಗದಿರಬಹುದು).

೩. ಇದು ನನ್ನ ಜೀವಿತ, ನನ್ನ ಸಮಯ ಮತ್ತು ನನ್ನ ಹಣ ಅಲ್ಲವೇ? (ನೀವು ಕ್ರೈಸ್ತರಾಗುವ ಹೊಸ ಹಂತಕ್ಕೆ ಹೋಗುವಾಗ ಮತ್ತು ಎಲ್ಲವನ್ನೂ ಕರ್ತನಿಗೆ ಕೊಡುವ ಸಮಯದಲ್ಲಿ, ನಿಮ್ಮ ಕಾರ್ಯಗಳೆಲ್ಲವೂ ನಿಜವಾಗಿಯೂ ನಿಮ್ಮದಲ್ಲ ಎಂಬದನ್ನು ತಿಳಿಯಲು ಸಾಧ್ಯವಾಗುತ್ತದೆ).


## ಆಟ ೧೩

ಮ್ಯೂಸಿಕಲ್ ಪಾಸ್



* ಪ್ರತಿಯೊಂದು ಮಗುವಿಗೆ ಸತ್ಯವೇದದ ವಾಕ್ಯವಿರುವ ಕಾರ್ಡ್ ಅನ್ನು ಕೊಡಿರಿ ಮತ್ತು ಅವರನ್ನು ವೃತ್ತಾಕಾರವಾಗಿ ಕೂರಿಸಿರಿ. ಸತ್ಯವೇದ ವಾಕ್ಯದ ಪದಗಳು ಕ್ರಮವಾಗಿರದಂತೆ ನೋಡಿಕೊಳ್ಳಿರಿ.
* ಸಂಗೀತ ಪ್ರಾರಂಭವಾಗುವಾಗ, ಮಕ್ಕಳು ತಮ್ಮ ಕಾರ್ಡ್ ಗಳನ್ನು ವೃತ್ತದಲ್ಲಿರುವ ಎಲ್ಲರಿಗೂ ಕೊಡಬೇಕು.
* ಸಂಗೀತ ನಿಲ್ಲುವಾಗ, ಮಕ್ಕಳು ತಮ್ಮ ಹಾಳೆಗಳನ್ನು ವಾಕ್ಯದ ಕ್ರಮದನುಸಾರವಾಗಿ ಓದಬೇಕು.
* ಹಲವಾರು ಸುತ್ತುಗಳನ್ನು ಆಡಿದ ನಂತರ, ಮಕ್ಕಳು ತಮ್ಮ ಕಾರ್ಡ್ ಗಳನ್ನು ಹಿಡಿದು ಮುಂದಕ್ಕೆ ಬರಬೇಕು ಮತ್ತು ಅವುಗಳನ್ನು ಕ್ರಮದನುಸಾರವಾಗಿ ಜೋಡಿಸಬೇಕು.
* ಹಲವಾರು ಸಾರಿ ವಾಕ್ಯಗಳನ್ನು ಒಟ್ಟಾಗಿ ಹೇಳಿರಿ

## ಹಾಜರಾತಿ ೧೩




ತರಗತಿಗೆ ಹಾಜರಾದದ್ದಕ್ಕೆ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡುವ ಸಲುವಾಗಿ ಮತ್ತೊಂದು ಕಾರ್ಡ್ ಪಡೆಯಬೇಕಾದರೆ ಮುಂದಿನ ವಾರ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:

ಬಚ್ಚಿಟ್ಟಿರುವ ಬಂಗಾರ

## ಹೋಮ್ ವರ್ಕ್ ೧೩

**ಅಸೈನ್ಮೆಂಟ್**

ಈ ವಾರದ ನಿಮ್ಮ ಅಸೈನ್ಮೆಂಟ್ ನೀವು ದೇವರಿಂದ ಮತ್ತು ಇತರರಿಂದ ಬಚ್ಚಿಟ್ಟಿರುವದು ಹಾಗೂ ಅದನ್ನು ಬಚ್ಚಿಟ್ಟಿರುವದು ಯಾಕೆ ಎಂಬದರ ಬಗ್ಗೆ ಬರೆಯಬೇಕು. ನಂತರ ಅದು ನಿಮಗೆ ಯಾವ ರೀತಿ ತೊಂದರೆಯಾಗುತ್ತಿದೆ ಎಂಬದಾಗಿ ಯೋಚಿಸಿರಿ. ಅದು ದೇವರೊಂದಿಗೆ ನಿಮಗಿರುವ ಅನ್ಯೋನ್ಯತೆಯನ್ನು ಹಾಳುಮಾಡುತ್ತದೆ ಆದ್ದರಿಂದ ಅದು ಒಳ್ಳೆಯದಲ್ಲ. ಆದರೆ ಆಯಿ ಪಟ್ಟಣದ ಹಾಗೆ, ಅದು ನಿಮ್ಮ ತರಗತಿ ಮತ್ತು ನಿಮ್ಮೊಂದಿಗೆ

ಯೇಸು ಕ್ರಿಸ್ತನನ್ನು ಹಿಂಬಾಲಿಸುತ್ತಿರುವ ಜನರಿಗೆ ತೊಂದರೆಯನ್ನುಂಟು ಮಾಡುತ್ತದೆ. ಯಾವುದೋ ಕಾರಣದಿಂದ ಅವರಿಗೆ ಗುರುತಿಸಲು ಆಗದಿರಬಹುದು, ಅವು ಅಷ್ಟೊಂದು ಪರಿಣಾಮಕಾರಿಯಲ್ಲದಿರಬಹುದು, ಸಂತೋಷವಲ್ಲದಿರಬಹುದು ಅಥವಾ ತಂಡವಾಗಿ ಅಷ್ಟೊಂದು ಸ್ನೇಹದಿಂದ ಇಲ್ಲದಿರಬಹುದು. ಏನು ಮಾಡಬೇಕೆಂದು ನಿಮಗೆ ಗೊತ್ತು. ಆ ಪಾಪವನ್ನು ಯೇಸುವಿನ ಎದುರಿನಲ್ಲಿ, ನಿಮ್ಮ ತಂದೆತಾಯಿಗಳ ಎದುರಿನಲ್ಲಿ ಅಥವಾ ಭರವಸೆಯುಳ್ಳ ಶಿಕ್ಷಕನು ಅಥವಾ ಸಭಾಪಾಲಕನ ಎದುರಿನಲ್ಲಿ ಅರಿಕೆ ಮಾಡಿಕೊಳ್ಳಿರಿ. ದೇವರಲ್ಲಿ ಕ್ಷಮಾಪಣೆ ಬೇಡಿಕೊಳ್ಳಿರಿ ಮತ್ತು ಆತನ ಕ್ಷಮಾಪಣೆಯಿಂದ ದೊರೆಯುವ ವ್ಯತ್ಯಾಸವನ್ನು ಎದುರುನೋಡಿರಿ.

**ಓದಿರಿ**

ಈ ವಾರ ಓದುವ ಹೋಮ್ ವರ್ಕ್ ಇಲ್ಲ.